

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 16 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 179 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಎಸ್‌ಎಸ್‌ಎಲ್‌ಸಿ–33 ದ್ವಿತೀಯ ಪಿಯುಸಿ–30 ಪಾಸ್

- ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತೊಂದು ಕ್ರಾಂತಿಕಾರಿ ನಿರ್ಧಾರ!
- ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 206; ದ್ವಿತೀಯ ಪಿಯುನಲ್ಲಿ 600ಕ್ಕೆ 198 ಅಂಕ ಬಂದರೆ ತೇರ್ಗಡೆ ಭಾಗ್ಯ


ಮಧು ಬಂಗಾರಪ್ಪ

ಬೆಂಗಳೂರು, ಅ.15(ಕೆಎಂಶಿ)– ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ಮತ್ತೆ ಶುಭ ಸುದ್ದಿ ನೀಡಿದೆ. ಇನ್ನು ಮುಂದೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.33 ಅಂಕ, ದ್ವಿತೀಯ ಪಿಯುಸಿಯಲ್ಲಿ ಶೇ.30 ಅಂಕ ಗಳಿಸಿದರೆ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡುವ ಮಹತ್ವದ ತೀರ್ಮಾನವನ್ನು ಕೈಗೊಂಡಿದೆ.

ಈವರೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಪಾಸ್ ಆಗಲು ಪ್ರತೀ ವಿಷಯದಲ್ಲಿ 35 ಅಂಕ ಪಡೆಯಬೇಕಿತ್ತು, ಇದೀಗ 33ಕ್ಕೆ ಇಳಿಕೆ ಆಗಿದೆ. ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಇನ್ನು ಮುಂದೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 206 ಅಂಕ ಗಳಿಸಿದ ವಿದ್ಯಾರ್ಥಿಗಳು ತೇರ್ಗಡೆ ಆಗಲಿದ್ದಾರೆ. ಪ್ರತಿ ವಿಷಯದಲ್ಲಿಯೂ ಆಂತರಿಕ ಮತ್ತು ಬಾಹ್ಯ ಪರೀಕ್ಷೆಗಳಲ್ಲಿ ಪಡೆದ ಒಟ್ಟು ಅಂಕಗಳು ಸೇರಿ ಕನಿಷ್ಠ 33 ಇರಬೇಕು.

ಶೀಘ್ರ ಶಿಕ್ಷಕರ ನೇಮಕಾತಿ

ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ 18,000 ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಶೀಘ್ರದಲ್ಲೇ ಆರಂಭಿಸುವುದಾಗಿ ಘೋಷಿಸಿದ ಸಚಿವರು, 800 ಸರ್ಕಾರಿ ಶಾಲೆಗಳನ್ನು 3,000 ಕೋಟಿ ರೂ. ವೆಚ್ಚದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಪರಿವರ್ತಿಸುವುದಾಗಿ ತಿಳಿಸಿದರು.

ಪ್ರತಿ ಪಬ್ಲಿಕ್ ಶಾಲೆಗೆ 4 ಕೋಟಿ ರೂ. ವೆಚ್ಚ ಮಾಡಿ ಮೂಲಸೌಕರ್ಯ ಕಲ್ಪಿಸುವ ಜೊತೆಗೆ ಶಿಕ್ಷಕರ ಕೊರತೆ ನೀಗಿಸಲು ದೊಡ್ಡ ಪ್ರಮಾಣದಲ್ಲಿ ನೇಮಕಾತಿಗೂ ಚಾಲನೆ ನೀಡಲಾಗಿದೆ. ಪರಿವರ್ತಿತ ಪಬ್ಲಿಕ್ ಶಾಲೆಗಳಲ್ಲಿ ಪ್ರಾಥಮಿಕ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಒಂದೇ ಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಲಾಗುವುದು. ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 2ರಿಂದ 3 ಹಾಗೂ ಕಲ್ಯಾಣ ಕರ್ನಾಟಕಕ್ಕೆ 4ರಿಂದ 5 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಉನ್ನತೀಕರಿಸಲಾಗುವುದು ಎಂದರು.

ಹಾಗೆಯೇ ಪಿಯುಸಿಯಲ್ಲಿ, 600ಕ್ಕೆ 198 ಅಂಕ ಪಡೆದರೆ ಪಾಸ್ ಆಗಲಿದ್ದು, ಪ್ರತಿ ವಿಷಯದಲ್ಲಿ 30 ಅಂಕ ಪಡೆದಿದ್ದರೆ ಸಾಕು ತೇರ್ಗಡೆ ಆಗಲಿದ್ದಾರೆ ಎಂದು ಹೇಳಿದ್ದಾರೆ.




ರಾಜ್ಯ ಪಠ್ಯಕ್ರಮ ಅನುಸರಿಸುವ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಖಾಸಗಿ ಪ್ರೌಢಶಾಲೆಗಳು ಇನ್ನು ಮುಂದೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ)ಮಾದರಿಯಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸಲಿವೆ.

ಈ ಹಿಂದೆ 35 ಅಂಕ ತೆಗೆಯಲೇಬೇಕಿತ್ತು.

ಈ ಹೊಸ ನಿಯಮ ಈ ವರ್ಷದಿಂದಲೇ ಖಾಸಗಿ ಶಾಲೆಗಳಿಗೂ ಅನ್ವಯವಾಗಲಿದೆ ಎಂದು ಅವರು ತಿಳಿಸಿದ್ದಾರೆ. ಈ ಬದಲಾವಣೆಯು ಪರೀಕ್ಷಾ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶದಿಂದ ಮಾಡಲಾಗಿದೆ. ಈ ಹಿಂದೆ ಪರೀಕ್ಷೆಗಳನ್ನು ಇನ್ನಷ್ಟು ಪಾರದರ್ಶಕಗೊಳಿಸಲು ವೆಬ್ ಕಾಸ್ಟಿಂಗ್ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಇದರಿಂದಾಗಿ ಶಿಕ್ಷಕರು ವಿದ್ಯಾರ್ಥಿಗಳ ಫಲಿತಾಂಶ ಸುಧಾರಿಸಲು ಹೆಚ್ಚಿನ ಜವಾಬ್ದಾರಿ ವಹಿಸಿ, ವಿಶೇಷ ತರಗತಿಗಳನ್ನು ನಡೆಸಿ, ಉತ್ತಮ ಫಲಿತಾಂಶ ಬರಲು ಕಾರಣವಾಯಿತು ಎಂದರು. ▶ 6ನೇ ಪುಟಕ್ಕೆ

ಎಲ್ಲರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಬಂದರೆ ಸಮಸಮಾಜ ನಿರ್ಮಾಣ

- ಬೌದ್ಧ ಮಹಾ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ
- ಪರಧರ್ಮ ಸಹಿಷ್ಣುತೆ, ಸಹಬಾಳ್ವೆಯಿಂದ ಸತ್ಯ, ಅಹಿಂಸೆ, ಶಾಂತಿ ನೆಲೆಗೊಳ್ಳಲಿದೆ


'ಬೌದ್ಧ ಮಹಾ ಸಮ್ಮೇಳನ'ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಹೋಗ್ತದೆ... ಮತ್ತೆ ಸೇರ್ಕೊತದೆ...!

"ನಾನು ಬಿಎಸ್ಸಿ ಮತ್ತು ಲಾ ಓದುವಾಗ ಮನೆಯ ದನ–ಕರುಗಳಿಗೆ ನೀರು ಕುಡಿಸುವ ಕೆಲಸಕ್ಕೆ ನಮ್ಮಪ್ಪ ನನ್ನ ಹಾಕಿದ್ದರು. ಬಾವಿಗೆ ನೀರು ಸೇದಲು ಹೋದಾಗ.. ಅಲ್ಲಿ ಗುಬ್ಬಚ್ಚಿಗಳ ಗೂಡಿನ ಕಸ ನೀರಿನ ಮೇಲಿತ್ತು. ಬಿಂದಿಗೆಯನ್ನು ಮೇಲೆ.. ಕೆಳಗೆ ಮಾಡಿ ಕಸವನ್ನು ದೂರ ಸರಿಸಿ ನೀರು ತಕೊಂಡ್ ಬತ್ರಿದ್ದೆ. ನೀರು ತೆಗೆದುಕೊಂಡ ಕೂಡಲೇ ಮತ್ತೆ ಕಸ ಆವರಿಸಿಕೊಳ್ಳುತ್ತಿತ್ತು. ಅದೇ ರೀತಿ ಈ ಜಾತಿ ವ್ಯವಸ್ಥೆಯೂ ಹೊಗ್ತದೆ... ಮತ್ತೆ ಸೇರ್ಕೊತದೆ... ಒಟ್ಟಿನಲ್ಲಿ ಮನುಷ್ಯ ಮನುಷ್ಯನನ್ನು ಪ್ರೀತಿಸಬೇಕೇ ಹೊರತು ದ್ವೇಷಿಸಬಾರದು. ಯಾರು ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ವಿಚಾರಗಳನ್ನು ವಿರೋಧ ಮಾಡುತ್ತಾರೋ ಅಂತಹವರ ಜೊತೆ ರಾಜೀಮಾಡಿಕೊಳ್ಳಬಾರದು... ಸೇರಲು ಬಾರದು... ಸಮಸಮಾಜ ನಿರ್ಮಾಣಕ್ಕೆ ಯಾವುದೆಲ್ಲಾ ಅಗತ್ಯವಿದೆ ಅದೆಲ್ಲವನ್ನೂ ಮಾಡೇ ಮಾಡುತ್ತೇವೆ. **–ಸಿದ್ದರಾಮಯ್ಯ, ಮುಖ್ಯಮಂತ್ರಿ**

ಮೈಸೂರು, ಅ.15(ಎಂಕೆ)– ಅಸಮಾನತೆಯಿಂದ ಕೂಡಿರುವ ಶ್ರೇಣೀಕೃತ ಸಮಾಜದಲ್ಲಿ ಶೋಷಿತರಿಗೆ, ಬಡವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಶಕ್ತಿ ತುಂಬಿದರೆ ಮಾತ್ರವೇ ಸಮಾನತೆ ತರಲು ಮತ್ತು ಗುಲಾಮಗಿರಿಯನ್ನು ತೊಲಗಿಸಲು ಸಾಧ್ಯ ಎಂದು ಪ್ರತಿಪಾದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪರಧರ್ಮ ಸಹಿಷ್ಣುತೆ ಮತ್ತು ಸಹಬಾಳ್ವೆಯನ್ನು ಪ್ರತಿಯೊಬ್ಬರು ಮೈಗೂಡಿಸಿಕೊಂಡರೆ ಮಾತ್ರವೇ ಸಮಾಜದಲ್ಲಿ ಸತ್ಯ, ಅಹಿಂಸೆ ಮತ್ತು ಶಾಂತಿ ಸ್ಥಾಪನೆಯಾಗುತ್ತದೆ ಎಂದು ಹೇಳಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕರ್ನಾಟಕ ರಾಜ್ಯ ಭಿಕ್ಕು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆಗಳು ಹಾಗೂ ರಾಜ್ಯ ಅಂಬೇಡ್ಕರ್ ವಾದಿ ಸಂಘ–ಸಂಸ್ಥೆಗಳು ಮತ್ತು ವಿಶ್ವಮೈತ್ರಿ ಬುದ್ಧ ವಿಹಾರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ 'ಬೌದ್ಧ ಮಹಾ ಸಮ್ಮೇಳನ'ದಲ್ಲಿ ಮಾತನಾಡಿದ ಅವರು, ಸಮಾನತೆ ಸುಮ್ಮನೆ ಬರಲ್ಲ. ನಮ್ಮಲ್ಲಿ ಸಮಾನತೆಯ ಜಾಗೃತಿ ಜೊತೆಗೆ ಶೋಷಿತರಿಗೆ ಶಕ್ತಿ ತುಂಬುವ ಕಾರ್ಯಕ್ರಮಗಳಾಗುತ್ತಿದ್ದರೆ ಅಸಮಾನತೆ ಕಡಿಮೆಯಾಗುತ್ತದೆ ಎಂದರು.

ಭಗವಾನ್ ಬುದ್ಧ, ಬಸವಣ್ಣ, ಅಂಬೇಡ್ಕರ್ ಸೇರಿದಂತೆ ಅನೇಕ ಸಮಾಜ ಸುಧಾರಕರು ಸಮ ಸಮಾಜ ನಿರ್ಮಾಣಕ್ಕೆ ಪ್ರಯತ್ನ ಮಾಡಿದರು. ಆದರೂ ನಮ್ಮಲ್ಲಿ ಜಾತಿ ವ್ಯವಸ್ಥೆ ಬಹಳ ಆಳವಾಗಿ ಬೇರೂರಿರುವುದರಿಂದ ಹಾಗೂ ಪಟ್ಟಭದ್ರ ಹಿತಾಸಕ್ತಿಗಳಿಗೆ ಬದಲಾವಣೆ ಮಾಡಲು ಇಷ್ಟವಿಲ್ಲದ ಕಾರಣದಿಂದ ಸಮಾನತೆ ಸಾಧ್ಯವಾಗಿಲ್ಲ. ಅದಕ್ಕಾಗಿಯೇ ಅಂಬೇಡ್ಕರ್ ಅವರು, ಪ್ರತಿಯೊಬ್ಬರಿಗೂ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ಬಂದರೆ ಮಾತ್ರವೇ ಸಮ ಸಮಾಜ ಸಾಧ್ಯ ಎಂದಿದ್ದರು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಶೋಷಿತರು, ದಲಿತರಿಗೆ ಶಕ್ತಿ ತುಂಬುವ ನಿಟ್ಟಿನಲ್ಲಿಯೇ 2013ರಲ್ಲಿ ▶ 6ನೇ ಪುಟಕ್ಕೆ



ಮೈಸೂರು ಆಯ್ತು ಕೊಳೆತ–ಊರು...?! ■ ಪುಟ–4

ರಾಜ್ಯದ ಸರ್ಕಾರಿ ನೌಕರರ ಡಿಎ ಶೇ.2ರಷ್ಟು ಏರಿಕೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ರಾಜ್ಯದ ಸರ್ಕಾರಿ ನೌಕರರಿಗೆ ಸಿಹಿ ಸುದ್ದಿ ಸಿಕ್ಕಿದೆ. ತುಟ್ಟಿ ಭತ್ಯೆಯನ್ನು ಶೇ.2ರಷ್ಟು ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಪ್ರಕಟಿಸಿದೆ. ರಾಜ್ಯ ಸರ್ಕಾರಿ ನೌಕರರುಗಳಿಗೆ 1ನೇ ಜುಲೈ 2025ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರಗಳನ್ನು ಪ್ರಸ್ತುತ ಮೂಲ ವೇತನದ ಶೇ.12.25ರಿಂದ ಶೇ.14.25ಗೆ ಏರಿಕೆ ಮಾಡಿದೆ. ಕೇಂದ್ರ ಸರ್ಕಾರವು ತನ್ನ ನೌಕರರಿಗೆ ತುಟ್ಟಿ ಭತ್ಯೆ ಘೋಷಿಸಿದ ಬೆನ್ನಲ್ಲೇ ಸಾಮಾನ್ಯವಾಗಿ ರಾಜ್ಯ ಸರ್ಕಾರವೂ ಏರಿಕೆ ಮಾಡುತ್ತದೆ. ವಿಜಯದಶಮಿ ಮುನ್ನ ದಿನ ಕೇಂದ್ರ ಸರ್ಕಾರಿ ನೌಕರರಿಗೆ ಮೋದಿ ಸರ್ಕಾರ ಹೆಚ್ಚುವರಿ ಶೇ.3ರಷ್ಟು ತುಟ್ಟಿ ಭತ್ಯೆ ನೀಡಲು ಒಪ್ಪಿಗೆ ನೀಡಿತ್ತು. ಬೆಲೆ ಏರಿಕೆ ಸರಿದೂಗಿಸಲು, ಕೇಂದ್ರ ಸರ್ಕಾರಿ ನೌಕರರಿಗೆ ಹೆಚ್ಚುವರಿ ಕಂತು ತುಟ್ಟಿ ಭತ್ಯೆ (DA) ಮತ್ತು ಪಿಂಚಣಿದಾರರಿಗೆ ತುಟ್ಟಿ ಪರಿಹಾರ (DR) ನೀಡಲು ಅನುಮೋದನೆ ನೀಡಿತ್ತು.


ಜಿಪಂ, ತಾಪಂ ಸೇರಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಸುಳಿವು ನೀಡಿದ ಸಿದ್ದರಾಮಯ್ಯ

ಹಾಸನ,ಅ.15–ಸಂಪುಟ ಪುನರ್ ರಚನೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೊದಲು ಜಿಪಂ, ತಾಪಂ ಚುನಾವಣೆ ಮುಗಿಯಲಿ ಆಮೇಲೆ ನೋಡೋಣ ಎಂದು ಹೇಳುವ ಮೂಲಕ ಸದ್ಯದಲ್ಲೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಲಿರುವ ಮುನ್ಸೂಚನೆ ಕೊಟ್ಟಿದ್ದಾರೆ.

ಹಾಸನಾಂಬ ದರ್ಶನಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಬೂವನಹಳ್ಳಿ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರ್ಕಾರ ಸಿದ್ಧವಾಗಿದೆ. ಕೋರ್ಟ್ ಹೇಳಿದ ತಕ್ಷಣ ಚುನಾವಣೆ ಮಾಡುತ್ತೇವೆ. ಎಲ್ಲಾ ಚುನಾವಣೆಗಳನ್ನು ಹಂತ ಹಂತವಾಗಿ ನಡೆಸಲಾಗುವುದು. ಪ್ರಜಾಪ್ರಭುತ್ವ ಗಟ್ಟಿಯಾಗುವುದು ಚುನಾವಣೆಗಳಿಂದ ಎಂದರು.

2021ಕ್ಕೆ ನಡೆಯಬೇಕಿದ್ದ ಜಿಪಂ, ತಾಪಂ ಚುನಾವಣೆ ನಾಲ್ಕು ವರ್ಷ ತಡವಾಗಿ ಈಗ ನಡೆಯುವ ಮುನ್ಸೂಚನೆ ಸಿಕ್ಕಿದ್ದು, ಇದಕ್ಕೆ ▶ 6ನೇ ಪುಟಕ್ಕೆ

ಸರ್ಕಾರದ ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ
ಹಳ್ಳ ಹಿಡಿದ ಗ್ರೇಟರ್ ಮೈಸೂರು ಯೋಜನೆ



ಮೈಸೂರು, ಅ.15(ಆರ್‌ಕೆ)– ಮೈಸೂರು ಹೊರ ವಲಯದ ನಗರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯ್ತಿಗಳ ಸೇರಿಸಿಕೊಂಡು ಗ್ರೇಟರ್ ಮೈಸೂರು (ಬೃಹತ್ ಮೈಸೂರು ಮಹಾನಗರಪಾಲಿಕೆ) ರಚಿಸುವ ಬಹುದಿನಗಳ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಸದ್ಯಕ್ಕೆ ಕೈಬಿಟ್ಟಿದೆ.

ಮುಂದಿನ ಆರ್ಥಿಕ ವರ್ಷಕ್ಕೆ ಸದರಿ ಪ್ರಸ್ತಾವನೆ ಕೈಗೆತ್ತಿಕೊಳ್ಳುವಂತೆ ಹಣಕಾಸು ಇಲಾಖೆ ಅಭಿಪ್ರಾಯಪಟ್ಟಿರುವುದರಿಂದ ಯೋಜನೆಯನ್ನು ಸದ್ಯಕ್ಕೆ ಕೈಬಿಟ್ಟಿರುವುದಾಗಿ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪ್ರಭುಲಿಂಗ ಕವಲಿಕಟ್ಟಿ ಅವರು ಸೆಪ್ಟೆಂಬರ್ 16ರಂದು ಮೈಸೂರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ಮಾಹಿತಿ ನೀಡಿದ್ದಾರೆ.

ಸರ್ಕಾರದ ಈ ನಿರ್ಧಾರದಿಂದ ಅತೀ ವೇಗವಾಗಿ ಬೆಳೆಯುತ್ತಿರುವ ಸಾಂಸ್ಕೃತಿಕ ನಗರಿಯನ್ನು ಗ್ರೇಡ್–1 ಮಹಾನಗರಪಾಲಿಕೆಯನ್ನಾಗಿ ಪರಿವರ್ತಿಸುವ ಪ್ರಯತ್ನಕ್ಕೆ ಹಿನ್ನೆಡೆಯಾಗಿದೆ. ಒಟ್ಟು 20 ಗ್ರಾಮಗಳನ್ನೊಳಗೊಂಡ ಹೂಟಗಳ್ಳಿ ನಗರಸಭೆ, ರಮ್ಮನಹಳ್ಳಿ, ಬೋಗಾದಿ, ಕಡಕೊಳ ಹಾಗೂ ಶ್ರೀರಾಂಪುರ ಪಟ್ಟಣ ಪಂಚಾಯಿತಿ ಒಳಗೊಂಡ ನಾಲ್ಕು ಪಟ್ಟಣ ಪಂಚಾಯ್ತಿ ಹಾಗೂ 7 ಗ್ರಾಮ ಪಂಚಾಯಿತಿಗಳನ್ನು ಗ್ರೇಟರ್ ಮೈಸೂರು ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿತ್ತು. 2008ರಲ್ಲಿ ಗ್ರೇಟರ್ ಮೈಸೂರು ಪರಿಕಲ್ಪನೆಯನ್ನು ಮೊದಲು ಪ್ರಸ್ತಾಪಿಸಲಾಗಿದ್ದು, ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದ ▶ 6ನೇ ಪುಟಕ್ಕೆ

ಮುಂದಿನ ಹಣಕಾಸು ವರ್ಷಕ್ಕೆ ಪ್ರಸ್ತಾವನೆ ಮುಂದೂಡಿಕೆ

"ರಾಜ–ಮಹಾರಾಜರು ರಚಿಸಿದ ಮೈಸೂರು ನಗರಕ್ಕಷ್ಟೇ ಅಭಿವೃದ್ಧಿ ಸೀಮಿತವಾಗಬಾರದು. ಅದರಿಂದಾಚೆಗೂ ಇರುವ ಗ್ರಾಮಗಳಿಗೂ ಈಗಲೂ ಪಾಲಿಕೆಯಿಂದಲೇ ನೀರು, ಬೀದಿದೀಪ, ಸ್ವಚ್ಛತೆಯಂತಹ ಸೌಲಭ್ಯಗಳನ್ನು ಒದಗಿಸುತ್ತಿರುವುದರಿಂದ ಆ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ ಹಾಗೂ ನಗರಸಭೆಗಳನ್ನು ಮೈಸೂರು ಪಾಲಿಕೆ ವ್ಯಾಪ್ತಿಗೆ ತಂದು ಗ್ರೇಟರ್ ಮೈಸೂರು ಯೋಜನೆ ಜಾರಿಗೊಳಿಸುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಇದರಿಂದ ಮೈಸೂರು ನಗರ ವ್ಯಾಪಕವಾಗಿ ಬೆಳೆದು ಅಭಿವೃದ್ಧಿಗೆ ಪೂರಕವಾಗುತ್ತದೆ. ಇದೀಗ ಆರ್ಥಿಕ ಇಲಾಖೆಯಿಂದ ಪ್ರಸ್ತಾವನೆ ತಿರಸ್ಕೃತಗೊಂಡಿರುವುದರಿಂದ ಮುಖ್ಯಮಂತ್ರಿಗಳು ಸ್ಥಳೀಯ ಶಾಸಕರು, ಸಂಸದರೊಂದಿಗೆ ಸಭೆ ನಡೆಸಿ ಈ ಬಗ್ಗೆ ತೀರ್ಮಾನ ಮಾಡುತ್ತಾರೆ.
–ಜಿ.ಟಿ.ದೇವೇಗೌಡ ಶಾಸಕರು, ಚಾಮುಂಡೇಶ್ವರಿ ಕ್ಷೇತ್ರ

"ಮೊದಲು ಮೈಸೂರು ಮಹಾನಗರಪಾಲಿಕೆಗೆ ಚುನಾವಣೆ ಮಾಡಬೇಕು. ಜನಪ್ರತಿನಿಧಿಗಳಿಲ್ಲದೇ ಇಲ್ಲಿನ ಅಭಿವೃದ್ಧಿ ಕುಂಠಿತಗೊಂಡಿದೆ. ಸಿಎಂ ಸಿದ್ದರಾಮಯ್ಯನವರಿಗೆ ಈ ಬಗ್ಗೆ ಆಸಕ್ತಿಯಿಲ್ಲ. ಗ್ರೇಟರ್ ಮೈಸೂರು ಮಾಡುವ ಕುರಿತಂತೆ ಸರ್ಕಾರ ಪ್ರಸ್ತಾವನೆ ಕೈಬಿಟ್ಟಿರುವುದು ಸಮಂಜಸವಾಗಿದೆ. ಏಕೆಂದರೆ, ಜನಪ್ರತಿನಿಧಿಗಳಿಲ್ಲದ ಬೃಹತ್ ಮಹಾನಗರ ಪಾಲಿಕೆ ಯೋಜನೆಯ ಕಲ್ಪನೆಯೇ ತಪ್ಪು. ಮೊದಲು ಪಾಲಿಕೆಗೆ ಚುನಾವಣೆಯಾಗಲಿ ಎಂಬುದು ಸಾರ್ವಜನಿಕರ ಅಭಿಪ್ರಾಯವೂ ಆಗಿದೆ.
–ಟಿ.ಎಸ್.ಶ್ರೀವತ್ಸ ಶಾಸಕರು, ಕೃಷ್ಣರಾಜ ಕ್ಷೇತ್ರ

ಸುತ್ತೂರು ಶ್ರೀಗಳಿಂದ ದೇವೇಗೌಡರ ಆರೋಗ್ಯ ವಿಚಾರಣೆ



ಬೆಂಗಳೂರಿನಲ್ಲಿ ಮಾಜಿ ಪ್ರಧಾನಿ ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿ. ದೇವೇಗೌಡ ಅವರನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಭೇಟಿ ಮಾಡಿ ಆರೋಗ್ಯ ವಿಚಾರಿಸಿ ಶೀಘ್ರ ಗುಣಮುಖರಾಗಲೆಂದು ಹಾರೈಸಿದರು.

ಅ.26ರಂದು ಬೆಂಗಳೂರಲ್ಲಿ ದಕ್ಷಿಣ ಭಾರತ ವಿದ್ಯುತ್ ಗ್ರಾಹಕ ಸಮಾವೇಶ

ಮೈಸೂರು,ಅ.15(ಜಿಎ)–ಅಖಿಲ ಭಾರತ ವಿದ್ಯುತ್ ಬಳಕೆದಾರರ ಸಂಘದಿಂದ ಅ.26ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಕುಮಾರಪಾರ್ಕ್ ಈಸ್ಟ್ ಸಮೀಪದ ಗಾಂಧಿ ಭವನದಲ್ಲಿ ದಕ್ಷಿಣ ಭಾರತ ವಿದ್ಯುತ್ ಗ್ರಾಹಕರ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಕೆ.ವೇಣು ಗೋಪಾಲ್‌ಭಟ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯುತ್ ಕ್ಷೇತ್ರದ ಖಾಸಗೀಕರಣ ಹಾಗೂ ಸ್ಮಾರ್ಟ್ ಮೀಟರ್ ಅಳವಡಿಕೆ ನಿಲ್ಲಿಸುವಂತೆ ಆಗ್ರಹಿಸುವುದು ಸಮಾವೇಶದ ಮುಖ್ಯ ಉದ್ದೇಶ ಹಾಗೂ ಟೈಮ್ ಆಫ್ ಡೇ ದರ ಮತ್ತು ರಾಜ್ಯದಲ್ಲಿ ಪ್ರತಿ ಯೂನಿಟ್‌ಗೆ 36 ಪೈಸೆ ಮೇಲು ತೆರಿಗೆ ವಿಧಿಸಿರುವುದನ್ನು ಖಂಡಿಸಿ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಸ್ವಪನ್‌ಘೋಷ್ ಸಮಾವೇಶವನ್ನು ಉದ್ಘಾಟಿಸುವರು. ಸಾಮಾಜಿಕ ಹೋರಾಟಗಾರ ಎಂ.ಜಿ. ದೇವಸಹಾಯಂ, ಸಂಯುಕ್ತ ಕೃಷಿ ಮೋರ್ಚಾ ಸಂಚಾಲಕ ವಡ್ಡೆ ಸೋಭನಾದ್ರಿಶ್ವರರಾವ್, ತಮಿಳುನಾಡು ಪವರ್ ಎಂಜಿನಿಯರ್ಸ್ ಸೊಸೈಟಿ ಅಧ್ಯಕ್ಷ ಎಸ್.ಗಾಂಧಿ, ಕೇರಳದ ಜನಕೀಯ ಪ್ರತಿರೋಧ ಸಮಿತಿ ರಾಜ್ಯ ಉಪಾಧ್ಯಕ್ಷ ಬಿ.ದಿಲೀಪನ್ ಪ್ರಮುಖ ಭಾಷಣ ಮಾಡುವರು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಸಂಚಾಲಕ ವಿ. ಯಶೋಧರ, ರಾಜ್ಯ ಸಮಿತಿಯ ಸದಸ್ಯ ಎಂ.ಎನ್.ರಂಗನಾಥ್, ಎಐಕೆಕೆಎಂಎಸ್ ಜಿಲ್ಲಾ ಅಧ್ಯಕ್ಷ ಎಚ್.ಎಂ.ಬಸವರಾಜು, ಸಂಘದ ಮೈಸೂರು ಘಟಕದ ಸದಸ್ಯರಾದ ರಾಜೇಂದ್ರ ಶಿವಾನಂದ್ ಉಪಸ್ಥಿತರಿದ್ದರು.

ಅಭಿನಂದನೆ



ಬೆಂಗಳೂರು ವಿವಿಯಿಂದ ಗೌರವ ಡಾಕ್ಟರೇಟ್ ಪಡೆದ ಮಾಜಿ ವಿಧಾನಪರಿಷತ್ ಸದಸ್ಯರಾದ ಡಿ.ಮಾದೇಗೌಡರನ್ನು ಜಯದೇವನಗರದ ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೃಷ್ಣ, ತ್ಯಾಗೂ, ಡಾ.ದಿಲೀಪ್ ನರಸಯ್ಯ, ವಸಂತಕುಮಾರ್, ಭರತ್‌ರಾಜ್, ಪಾಪುರಾಂಯ್ ಅಭಿನಂದಿಸಿದರು.

ಅಭಿವೃದ್ಧಿ ಶೂನ್ಯತೆಯಿಂದ ಮಾನಸಿಕ ಸ್ಥಿಮಿತತೆ ಕಳೆದುಕೊಂಡ ಕಾಂಗ್ರೆಸ್ ಸಚಿವರು, ಶಾಸಕರು!

ಮೈಸೂರು,ಅ.15–ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಾಗಲಿಂದ ಅಭಿವೃದ್ಧಿ ಶೂನ್ಯವಾಗಿದೆ. ಚುನಾಯಿತ ಪ್ರತಿನಿಧಿಗಳು ಇಲ್ಲದೆ ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳ ಆಡಳಿತ ನೆಲಕಚ್ಚಿದೆ. ಕೇಂದ್ರ ಸರ್ಕಾರದಿಂದ ಬಂದ ಕೋಟ್ಯಾಂತರ ರೂಪಾಯಿ ಅನುದಾನಗಳು ಸ್ಥಳೀಯ ಸಂಸ್ಥೆಯಲ್ಲಿ ಅನುಮೋದನೆಗೊಳ್ಳದೆ ವಾಪಸ್ ಹೋಗುತ್ತಿರುವುದು ರಾಜ್ಯದ ಅಭಿವೃದಿಗೆ ಕಂಟಕವಾಗಿದೆ ಎಂದು ಮೈಸೂರು ನಗರಪಾಲಿಕೆ ಮಾಜಿ ವಿರೋಧ ಪಕ್ಷದ ನಾಯಕ ಬಿ.ವಿ.ಮಂಜುನಾಥ್ ಟೀಕಿಸಿದ್ದಾರೆ.

ಮುಂದಿನ ಡಿಸೆಂಬರ್ ನಂತರದಲ್ಲಿ ಗ್ರಾಪಂ ಸದಸ್ಯರ ಅವಧಿಗಳು ಸಹ ಮುಗಿಯುವುದರಿಂದ ಸ್ಥಳೀಯ ಸಂಸ್ಥೆಗಳ ಆಡಳಿತ ಸಂಪೂರ್ಣವಾಗಿ ನೆಲಕಚ್ಚಲಿದೆ. ಈ ಕಟುಸತ್ಯ ಮುಚ್ಚಿಟ್ಟು ರಾಜ್ಯದ ಜನತೆಯ ಗಮನವನ್ನು ಬೇರೆಡೆ ಸೆಳೆಯಲು ಕಾಂಗ್ರೆಸ್ ಸಚಿವರು, ಶಾಸಕರು ಇಲ್ಲಸಲ್ಲದ ಹೇಳಿಕೆ ನೀಡಿ ಪ್ರಚಾರಕೋಸ್ಕರ, ತಮ್ಮ ಹೆಸರು ಯಾವ ರೀತಿಯಲ್ಲಾದರೂ ಚಾಲ್ತಿಯಲ್ಲಿರಬೇಕು ಎಂಬ ಕಾರಣಕ್ಕೆ ದೇಶಕೊಸ್ಕರ, ದೇಶದ ಏಕತೆಗೋಸ್ಕರ ಪಣತೊಟ್ಟಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯವೈಖರಿ ಖಂಡಿಸಿದ್ದಾರೆ.

ಇಂದಿನಿಂದ ಅಕ್ಯುಪ್ರೆಷರ್, ಸುಜೋಕ್, ಅಕ್ಯು ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ

ಮೈಸೂರು, ಅ. 15– ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ ವತಿಯಿಂದ ಅ.16ರಿಂದ 21 ದಿನಗಳ ಕಾಲ ವಿ.ವಿ. ಮೊಹಲ್ಲಾ ಶ್ರೀ ಪ್ರಸನ್ನಪಾರ್ವತಿ ಕಲ್ಯಾಣ ಮಂಟಪದಲ್ಲಿ ಅಕ್ಯುಪ್ರೆಷರ್, ಸುಜೋಕ್, ಅಕ್ಯುಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಬಿಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸ್ತಮಾ, ಅಜೀರ್ಣತೆ, ಅಲರ್ಜಿ, ಹಸಿರುನರ (ವೆರಿಕೋಸ್ ವೇನ್), ಬೆನ್ನುನೋವು, ಸಯಾಟಿಕಾ, ಸಂದಿವಾತ, ಥೈರಾಯ್ಡ್, ನಿದ್ರಾಹೀನತೆ, ಮೊಣಕಾಲು ನೋವು, ಕುತ್ತಿಗೆ ನೋವು, ಸ್ಪಾಂಡಿಲೈಟಿಸ್, ಮಲಬದ್ಧತೆ, ಹಿಮ್ಮಡಿ ನೋವು, ಪಾದಗಳ ಉರಿ ಇನ್ನಿತರ ರೋಗಗಳಿಗೆ ಚಿಕಿತ್ಸೆ ನೀಡಲಾಗುವುದು. ಆಸಕ್ತರು ಮೊ. 98451 82716, 78927 98768 ಸಂಪರ್ಕಿಸಬಹುದು.

ನಿಧನ

ಪಾಲೆಯಂಡ ಕೆ.ಕರುಂಬಯ್ಯ



ಮೈಸೂರು, ಅ. 15–ಮೈಸೂರಿನ ಯಾದವಗಿರಿಯ ಬ್ರಿಗೇಡ್ ಟ್ರಾಂಕ್ವಿಲ್ ನಿವಾಸಿ ಪಾಲೆಯಂಡ ಕೆ.ಕರುಂಬಯ್ಯ (ಕಿಟ್ಟು) ಮಂಗಳವಾರ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು.

ದಿವಂಗತ ಜ್ಯೋತಿ (ಕೋಡಿಮಣಿಯಂಡ) ಅವರ ಪತಿಯಾದ ಇವರು, ಪುತ್ರರಾದ ಕೌಶಿಕ್ ಕುಶಾಲಪ್ಪ ಮತ್ತು ಪಂಕಜ್ ಪೊನ್ನಪ್ಪ, ಪುತ್ರಿ ಡಾ. ರೇಖಾ ಪಾಲೆಯಂಡ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಅ.16) ಮಧ್ಯಾಹ್ನ 12.30ಕ್ಕೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮೇರ ಟಿ.ಕುಶಾಲಪ್ಪ

ಮೈಸೂರಿನ ಗಂಗೋತ್ರಿ ಬಡಾವಣೆ 3ನೇ ಕ್ರಾಸ್, 1ನೇ ಮೇನ್, ನಂ.94ರ ನಿವಾಸಿ ಚಾಮೇರ ಟಿ.ಕುಶಾಲಪ್ಪ (70) ಮಂಗಳವಾರ ನಿಧನರಾದರು.

ಮೂಲತಃ ಕೊಡಗಿನ ಸೋಮವಾರಪೇಟೆ ತಾಲೂಕಿನ ಮಾಂಕ್ಯ ಗ್ರಾಮದವರಾದ ಇವರು ಪತ್ನಿ ಸ್ವಾತಿ (ಅದೇಂಗಡ), ಪುತ್ರರಾದ ದಿತನ್ ಮತ್ತು ಮಾಚಮಾಡ ಶೀತಲ್ ಲಿತಿನ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯ ಸಂಸ್ಕಾರ ಮಾಂಕ್ಯ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿರಾಗಾಂಧಿ, ನೆಹರು, ಖರ್ಗೆ ಅವರೇ ಆರ್‌ಎಸ್‌ಎಸ್ ಕಚೇರಿಗೆ ಭೇಟಿ ಕೊಟ್ಟಿದ್ದರು, ನಿಮ್ಮಿಂದ ಆರ್‌ಎಸ್‌ಎಸ್ ಬ್ಯಾನ್ ಸಾಧ್ಯವೆ?

ಪ್ರಿಯಾಂಕ್ ಖರ್ಗೆಗೆ ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಸುಬ್ಬಣ್ಣ ಪ್ರಶ್ನೆ

ಮೈಸೂರು,ಅ.15(ಜಿಎ)– ಇಂದಿರಾಗಾಂಧಿ, ಜವಹಾರ್‌ಲಾಲ್ ನೆಹರು, ಮಲ್ಲಿಕಾರ್ಜುನ ಖರ್ಗೆ ಅವರೇ ಸ್ವತಃ ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡಿದ್ದರು. ಪ್ರಿಯಾಂಕ ಖರ್ಗೆ ನಿಮ್ಮಿಂದ ಆರ್‌ಎಸ್‌ಎಸ್ ಅನ್ನು ಬ್ಯಾನ್ ಮಾಡಲು ಸಾಧ್ಯವೇ ಎಂದು ಮೈಸೂರು ಬಜೆಪಿ ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಕೆ.ಎನ್.ಸುಬ್ಬಣ್ಣ ಪ್ರಶ್ನಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಪ್ರಿಯಾಂಕಖರ್ಗೆ ಅವರು ದೇಶಭಕ್ತಿಯಿಂದ ಕೂಡಿರುವ ಆರ್‌ಎಸ್‌ಎಸ್ ಅನ್ನು ಬ್ಯಾನ್ ಮಾಡ್ತೀವಿ ಸರ್ಕಾರಿ ಸ್ಥಳಗಳಲ್ಲಿ ಪಥ ಸಂಚಲನ ಮಾಡಬೇಡಿ ಎಂದು ಹೇಳುತ್ತಾರೆ. ಆರ್‌ಎಸ್‌ಎಸ್ ಅನ್ನು ಬ್ಯಾನ್ ಮಾಡಲು ನಿಮ್ಮಿಂದ ಸಾಧ್ಯವೇ? ಈ ಹಿಂದೆ ಈ ರೀತಿ ಹೇಳಿಕೆ ಕೊಟ್ಟವರು ಏನಾಗಿದ್ದಾರೆ ನೆನಪು ಮಾಡಿಕೊಳ್ಳಿ ಎಂದರು.

ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿದ್ದ ಬಯೋ ಕಂಪನಿಯ ಕಿರಣ್ ಮಜೂದಾರ್ ಷಾ ಅವರು ಬೆಂಗಳೂರಿನ ರಸ್ತೆಯ ಬಗ್ಗೆ ಅಸಮಧಾನ ವ್ಯಕ್ತಪಡಿಸಿದ್ದಾರೆ. ಅವರಿಗೆ ಸಚಿವ ಪ್ರಿಯಾಂಕ ಖರ್ಗೆ ಅವರು ರಸ್ತೆಯ ಗುಂಡಿಗಳನ್ನು ನೀವೇ ಮುಚ್ಚಿಬಿಡಿ ಎಂದು ಹೇಳುತ್ತಾರೆ. ವಿದೇಶಗಳಿಂದ ಬಂದು ಇಲ್ಲಿ ಹೂಡಿಕೆ ಮಾಡುವ ಕಂಪನಿಗಳನ್ನು ಆಕರ್ಷಿಸುವ ಕೆಲಸ ಮಾಡುತ್ತಿಲ್ಲ ಎಂದು ಕಿಡಿಕಾರಿದರು.

ಇಲ್ಲಿ ಹೂಡಿಕೆ ಮಾಡುವಂತೆ ಕಂಪನಿಗಳನ್ನು ಆಹ್ವಾನಿಸಬೇಕು ಹಾಗೂ ಹೂಡಿಕೆ ಮಾಡುವಂತೆ ಆತಿಥ್ಯ ನೀಡಬೇಕು. ವಿಶಾಖಪಟ್ಟಣಂನಲ್ಲಿ ಗೂಗಲ್ ಕಂಪನಿಯವರು 1 ಲಕ್ಷದ 33 ಸಾವಿರ ಕೋಟಿ ಹೂಡಿಕೆ ಮಾಡುತ್ತಿದ್ದಾರೆ. ಅಲ್ಲಿನ ಮುಖ್ಯಮಂತ್ರಿಗಳು ಕಂಪನಿಗಳನ್ನು ಸ್ವಾಗತಿಸುತ್ತಿದ್ದರೆ. ಇಲ್ಲಿನ ಮಂತ್ರಿಗಳು, ಮುಖ್ಯಮಂತ್ರಿಗಳು ಗುಂಡಿಗಳನ್ನು ತೋರಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮತ್ತೊಂದೆಡೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಭ್ರಷ್ಟಾಚಾರ ಹೆಚ್ಚಳವಾಗುತ್ತಿದೆ. ಪ್ರತಿ 2ರಿಂದ 3 ತಿಂಗಳಿಗೊಮ್ಮೆ ಅಧಿಕಾರಿಗಳ ಮನೆಗಳ ಮೇಲೆ ರೇಡ್ ಆಗುತ್ತಿದೆ. ಎಷ್ಟೋ ಅಧಿಕಾರಿಗಳ ಮನೆಯಿಂದ ಕೋಟಿ ಕೋಟಿ ಹಣವನ್ನು ರೇಡ್ ಮಾಡುತ್ತಿದ್ದಾರೆ. ಅಧಿಕಾರಿಗಳಿಗೂ ಅಕ್ರಮವಾಗಿ ಹಣ ಸಂಪಾದಿಸಲು ಬಿಡುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯ ಸರ್ಕಾರವು ಜನರನ್ನು ನೆಮ್ಮದಿಯಾಗಿರಲು ಬಿಡುತ್ತಿಲ್ಲ. ಯಾವುದಾದರೂ ತೊಡಕನ್ನು ಮಾಡುವ ಮೂಲಕ ಜನರಿಗೆ ತೊಂದರೆ ನೀಡಲು ತೀರ್ಮಾನಿಸಿದ್ದಾರೆ. ಸರ್ಕಾರ ರಚನೆಯಾದಾಗಿನಿಂದ ಹಿಡಿದು 5 ವರ್ಷ ಪೂರ್ತಿ ಮಾಡುವವರೆಗೂ ತೊಂದರೆ ಕೊಡಲು ತೀರ್ಮಾನಿಸಿದ್ದಾರೆ. ದೂರದೂರುಗಳಿಂದ ಜನರು ದಸರಾ ನೋಡಲು ಮೈಸೂರಿಗೆ ಬಂದಿದ್ದರು. ಆದರೆ ಈ ವೇಳೆ ಗೋಲ್ಡ್ ಪಾಸ್ ಪಡೆದುಕೊಂಡವರಿಗೆ ಅವ್ಯವಸ್ಥೆ ಮಾಡಿದರು. ದಸರಾ ಮುಗಿಯುತ್ತಿದ್ದಂತೆ ಮೈಸೂರಿನ ಹೃದಯ ಭಾಗದಲ್ಲೇ ಬಾಲಕಿಯ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿದೆ. ಇದಕ್ಕೆಲ್ಲಾ ರಾಜ್ಯದ ಕಾನೂನಿನ ವ್ಯವಸ್ಥೆ ಹದಗೆಟ್ಟಿರುವುದೇ ಕಾರಣ. ಕಾನೂನನ್ನು ಸರಿಯಾಗಿ ಜಾರಿ ಮಾಡದೇ ಕೇವಲ ಗ್ಯಾರಂಟಿ ಯೋಜನೆ ಬಗ್ಗೆ ಗಮನ ಹರಿಸುತ್ತಿರುವ ರಾಜ್ಯ ಸರ್ಕಾರ ಜನರ ಮೇಲೆ ಗಮನ ಹರಿಸದೆ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ ಎಂದರು.

ಜಿಲ್ಲಾ ಆತ್ಮನಿರ್ಭರ ಸಂಚಾಲಕ ದಾಸಯ್ಯ ಮಾತನಾಡಿ, ಆತ್ಮನಿರ್ಭರ ಭಾರತದ ಮೂಲಕ ದೇಶ ಸ್ವಾವಲಂಬನೆಯತ್ತ ಸಾಗುತ್ತಿದೆ. ವಿದೇಶಿ ವಸ್ತುಗಳನ್ನು ಖರೀದಿಸುವುದನ್ನು ಬಿಡಬೇಕು. ನಮ್ಮ ದೇಶದಲ್ಲಿ ಉತ್ಪಾದನೆಯಾದ ವಸ್ತುಗಳನ್ನು ಖರೀದಿಸಿ ಉಪಯೋಗಿಸಿದಾಗ ಮಾತ್ರ, ನಮ್ಮಲ್ಲಿರುವ ಕಾರ್ಖಾನೆಗಳು, ನೌಕರರು ಹಾಗೂ ನಮ್ಮ ದೇಶ ಅಭಿವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ಆತ್ಮ ನಿರ್ಭರ ಭಾರತದ ಬಗ್ಗೆ ಪ್ರತಿ ಮನೆ ಮನೆಗೂ ತಿಳಿಸಲಾಗುತ್ತಿದೆ. ಸ್ಥಳೀಯ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುವ ಮೂಲಕ ಸ್ವಾವಲಂಬನೆ ಬಗ್ಗೆ ಅರಿವು ಮೂಡಿಸಲಾಗುವುದು. ನಾವು ನಮ್ಮ ದೇಶದಲ್ಲಿ ಉತ್ಪಾದನೆಯಾದ ವಸ್ತುಗಳನ್ನು ಬಳಸುವುದರ ಜತೆಯಲ್ಲೇ ವಿದೇಶಗಳಿಗೂ ಅವುಗಳನ್ನು ರಫ್ತು ಮಾಡಬೇಕೆಂಬುದೇ ನಮ್ಮ ಉದ್ದೇಶ ಎಂದರು.

ಸುದ್ದಿಗೋಷ್ಠಿಯಲ್ಲಿ ಆತ್ಮನಿರ್ಭರ ಸಂಚಾಲಕರಾದ ಶ್ರೀನಿವಾಸ್ ರೆಡ್ಡಿ, ಗುರುಸ್ವಾಮಿ, ಶರತ್ ಪುಟ್ಟಬುದ್ದಿ, ಜಿಲ್ಲಾ ವಕ್ತಾರ ದಯಾನಂದ ಪಟೇಲ್, ಜಿಲ್ಲಾ ಸಂಚಾಲಕ ಮಹದೇವಸ್ವಾಮಿ ಉಪಸ್ಥಿತರಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಕೆ.ಎನ್.ಸುಬ್ಬಣ್ಣ ಮಾತನಾಡಿದರು.

ಅ.22ರಂದು ಶಬರಿಮಲೆಗೆ ದ್ರೌಪದಿ ಮುರ್ಮು ಭೇಟಿ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತುಲಾ ಮಾಸ ಪೂಜೆಯ ಕೊನೆಯ ದಿನವಾದ ಅ.22ರಂದು ಕೇರಳದಲ್ಲಿರುವ ಶಬರಿಮಲೆ ಅಯ್ಯಪ್ಪ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಈ ಮೂಲಕ ಅಯ್ಯಪ್ಪ ದೇವಸ್ಥಾನಕ್ಕೆ ಭೇಟಿ ನೀಡಿದ ಭಾರತದ ಮೊದಲ ಹಾಲಿ ರಾಷ್ಟ್ರಪತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

ಅ.21ರಂದು ಸಂಜೆ 6:20ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ತಿರುವನಂತಪುರಂಕ್ಕೆ ಆಗಮಿಸಲಿದ್ದು, ರಾತ್ರಿ ರಾಜಭವನದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಅ.22ರಂದು ತಿರುವನಂತಪುರದಿಂದ ಹೆಲಿಕಾಪ್ಟರ್ ಮೂಲಕ ನೀಲಕ್ಕಲ್‌ಗೆ ಆಗಮಿಸಿ ಬಳಿಕ ರಸ್ತೆ ಮಾರ್ಗದಲ್ಲಿ ಪಂಪಾಗೆ ಆಗಮಿಸಲಿದ್ದಾರೆ. ಪಂಪಾದಿಂದ ಗೂರ್ಖಾ ಫೋರ್ಸ್ ವಾಹನದಲ್ಲಿ ದೇವಾಲಯಕ್ಕೆ ಆಗಮಿಸಿ ಮಧ್ಯಾಹ್ನ 12:20ರಿಂದ 1 ಗಂಟೆಯೊಳಗೆ ಅಯ್ಯಪ್ಪನ ದರ್ಶನ ಮಾಡಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ವಿಶೇಷ ವಾಹನದಲ್ಲಿ ಪಂಪಾದಿಂದ ನೀಲಕ್ಕಲ್‌ಗೆ ಆಗಮಿಸಿ ಅಲ್ಲಿಂದ ಹೆಲಿಕಾಪ್ಟರ್ ನಲ್ಲಿ ತಿರುವನಂತಪುರಕ್ಕೆ ಮರಳಲಿದ್ದಾರೆ. ರಾಷ್ಟ್ರಪತಿಗಳು ಅ.24ರವರೆಗೆ ಕೇರಳದಲ್ಲಿ ಇರಲಿದ್ದು, ಈ ಸಮಯದಲ್ಲಿ ತಿರುವನಂತಪುರಂ, ಕೊಟ್ಟಾಯಂ ಪ್ರದೇಶಗಳಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ತುಲಾಮಾಸ ಪೂಜೆಗಾಗಿ ಶಬರಿಮಲೆ ದೇಗುಲದ ಬಾಗಿಲುಗಳನ್ನು ಅ.17ರಂದು ತೆರೆದು ಅ.22ರಂದು ಮುಚ್ಚಲಾಗುತ್ತದೆ.



ನಾಳೆ ಮೈಸೂರಲ್ಲಿ ಆನ್‌ಲೈನ್ ವಂಚನೆಗಳ ಬಗ್ಗೆ ಜಾಗೃತಿ ಮೂಡಿಸಲು ರಾಷ್ಟ್ರೀಯ ಸಮ್ಮೇಳನ

ಮೈಸೂರು,ಅ.15(ಜಿಎ)– ಮೈಸೂರಿನ ಮಹಾರಾಣಿ ಕಲಾ ಕಾಲೇಜು ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್(ಎನ್‌ಐಇ) ಸಹಯೋಗದೊಂದಿಗೆ ಅ.17ರಂದು ಬೆಳಗ್ಗೆ 10.30ಕ್ಕೆ 'ಸೈಬರ್ ಸುರಕ್ಷತೆ ಮತ್ತು ಫಿಶಿಂಗ್ ದಾಳಿಗಳ ಕುರಿತು 'ಸಾಮಾಜಿಕ ಜಾಗೃತಿ: ಸವಾಲುಗಳು ಮತ್ತು ತಡೆಗಟ್ಟುವ ತಂತ್ರ ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಮಹಾರಾಣಿ ಕಲಾ ಕಾಲೇಜಿನ ಜಯಲಕ್ಷ್ಮಮ್ಮಣ್ಣಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಎನ್‌ಐಇ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಬಿ.ಎಸ್. ಶರ್ಮಿಳಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ(ಐಸಿಎಸ್‌ಎಸ್) ತನ್ನ ವಿಕಸಿತ ಭಾರತ @ 2047 ಉಪಕ್ರಮದ ಸಹಯೋಗದ ಸಂಶೋಧನಾ ಯೋಜನೆ ಅಡಿಯಲ್ಲಿ ಸಮ್ಮೇಳನವನ್ನು ಪ್ರಾಯೋಜಿಸಿದ್ದು, ಇದಕ್ಕಾಗಿ 12 ಲಕ್ಷ ರೂ. ಅನುದಾನ ನೀಡಿದೆ. ಈ ಕಾರ್ಯಕ್ರಮ ಅಡಿಯಲ್ಲಿ ಡೇಟಾ ಸಂಗ್ರಹ, ಸಮ್ಮೇಳನ ನಡೆಸುವುದು ಮತ್ತು ಎಐ ತಂತ್ರಜ್ಞಾನ ಬಳಸಿ ಹೇಗೆ ಸೈಬರ್ ವಂಚನೆ ತಡೆಗಟ್ಟಬಹುದು ಎಂದು ಒಂದು ವರ್ಷದ ಅವಧಿಯಲ್ಲಿ ಮೂರು ಹಂತದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು.

ಇಂದಿನ ಗಂಭೀರ ಸಮಸ್ಯೆಗಳಲ್ಲೊಂದಾದ ಫಿಶಿಂಗ್, ಡೇಟಾ ಉಲ್ಲಂಘನೆ ಮತ್ತು ಆನ್‌ಲೈನ್ ಮೋಸಗಳಿಂದ ಜನರನ್ನು ರಕ್ಷಿಸುವ ಸವಾಲಿನ ಬಗ್ಗೆ ಚರ್ಚಿಸಲು ಸಮ್ಮೇಳನದಲ್ಲಿ ನಿರ್ಧರಿಸಲಾಗಿದೆ. ತಜ್ಞರು ಉಪನ್ಯಾಸ ನೀಡಿ, ವಿಷಯ ಮಂಡಿಸುತ್ತಾರೆ. ಮೈಸೂರು, ಬೆಂಗಳೂರು ಮತ್ತು ಚಾಮರಾಜನಗರವನ್ನು ಈ ಕಾರ್ಯಕ್ರಮ ಒಳಗೊಂಡಿದೆ ಎಂದು ತಿಳಿಸಿದರು.

ಅ.17ರಂದು ಬೆಳಗ್ಗೆ 10.30ಕ್ಕೆ ಆರಂಭವಾಗುವ ಸಮ್ಮೇಳನದಲ್ಲಿ ಜೆಎಸ್‌ಎಸ್ ಸೈನ್ಸ್ ಅಂಡ್ ಟೆಕ್ನಾಲಜಿ ವಿವಿಯ ಪ್ರೊ.ಕೆ.ಎಂ.ಅನಿಲ್‌ಕುಮಾರ್, ಶಾಸಕ ಕೆ.ಹರೀಶ್‌ಗೌಡ, ಮಹಾರಾಣಿ ಕಾಲೇಜಿನ ಕಾಲೇಜು ಅಭಿವೃದ್ಧಿ ಪರಿಷತ್ತಿನ ಅಧ್ಯಕ್ಷೆ ಮತ್ತು ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿಯೂ ಆದ ಡಾ.ಡಿ.ಎಸ್.ಪ್ರತಿಮಾ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಸ್.ಅನಿತ, ಎನ್‌ಐಇ ಕಾಲೇಜಿ ಪ್ರಾಂಶುಪಾಲರಾದ ಡಾ.ರೋಹಿಣಿ ನಾಗಪದ್ಮ, ಡೀನ್ ಡಾ.ಸಿ.ವಿದ್ಯಾರಾಜ್ ಮತ್ತಿತರರು ಉಪಸ್ಥಿತರಿರಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎನ್‌ಐಇ ಸಹಾಯಕ ಪ್ರಾಧ್ಯಾಪಕಿ ಡಾ.ಬಿ.ಎಂ.ನಂದಿನಿ, ಡಾ.ಕವಿತಾ, ಕೆ.ವೆಂಕಟೇಶ್, ಡಾ.ಆನಂದ್, ಡಾ.ಮಂಜುನಾಥ್, ಎಸ್.ಆರ್. ಗಾಯಕ್ವಾಡ್ ಉಪಸ್ಥಿತರಿದ್ದರು.

ಡಿಎನ್‌ಎ ಆಧಾರಿತ ಆನೆಗಳ ಸಮೀಕ್ಷೆ ವರದಿ ಪ್ರಕಟ

ಆನೆಗಳ ಸಂಖ್ಯೆಯಲ್ಲಿ ಮತ್ತೇ ಕರ್ನಾಟಕಕ್ಕೆ ಅಗ್ರಸ್ಥಾನ



ಬೆಂಗಳೂರು, ಅ.15– 2021ರಲ್ಲಿ ಪ್ರಾರಂಭವಾದ ಡಿಎನ್‌ಎ ಆಧಾರಿತ ಆನೆಗಳ ಸಂಖ್ಯಾ ಸಮೀಕ್ಷೆಯು ಸುಮಾರು 4 ವರ್ಷಗಳ ನಂತರ ಅ.14ರಂದು ಬಿಡುಗಡೆಯಾಗಿದೆ. ಈ ಸಮೀಕ್ಷೆಯ ವರದಿ ಪ್ರಕಾರ ಕರ್ನಾಟಕವು ಭಾರತದಲ್ಲಿ ಅತೀ ಹೆಚ್ಚು ಕಾಡಾನೆಗಳನ್ನು ಹೊಂದಿದೆ. ದೇಶದಲ್ಲಿ ಅಂದಾಜು 22,446 ಕಾಡಾನೆಗಳಿದ್ದು ಕರ್ನಾಟಕ ಭಾರತದಲ್ಲೇ ಮೊದಲ ಸ್ಥಾನದಲ್ಲಿದೆ.

ಭಾರತದಲ್ಲಿ ಆನೆಗಳ ಸ್ಥಿತಿ: ಡಿಎನ್‌ಎ ಆಧಾರಿತ ಸಿಂಕ್ರೊನಸ್ ಅಖಿಲ ಭಾರತ ಆನೆಗಳ ಜನಸಂಖ್ಯಾ ಅಂದಾಜು' ಎಂಬ ಶೀರ್ಷಿಕೆಯ ಅಧ್ಯಯನವು ದೇಶದ ವಿವಿಧ ಭಾಗಗಳಲ್ಲಿನ ಕಾಡಾನೆಗಳ ಸಂಖ್ಯೆಯನ್ನು ಪರಿಶೀಲನೆ ನಡೆಸಲಾಗಿದೆ. ಇದರ ಪ್ರಕಾರ ಭಾರತವು ಏಷ್ಯಾದ ಅತೀ ಹೆಚ್ಚು ಕಾಡಾನೆಗಳಿಗೆ ನೆಲೆಯಾಗಿದೆ. ಹರಪ್ಪಾ ನಾಗರಿಕತೆಯ ಕಾಲದಿಂದಲೂ ಮಾನವರೊಂದಿಗೆ ಈ ಕಾಡು ಜೀವಿ ಐತಿಹಾಸಿಕ ಸಂಬಂಧವನ್ನು ಹೊಂದಿದೆ ಎಂದು ಹೇಳಲಾಗುತ್ತದೆ. ಅಧ್ಯಯನದ ಪ್ರಕಾರ ಆನೆಗಳನ್ನು ಮಿಲಿಟರಿಯಲ್ಲಿ ಬಳಸಿಕೊಳ್ಳಲಾಗುತ್ತಿದ್ದವು ಎಂದು ತಿಳಿದು ಬಂದಿದೆ.

ಕರ್ನಾಟಕ ಅಗ್ರಸ್ಥಾನ: ಭಾರತದ ದಕ್ಷಿಣ ರಾಜ್ಯಗಳು ಅತೀ ಹೆಚ್ಚು ಆನೆಗಳಿಗೆ ನೆಲೆಯಾಗಿವೆ ಎಂದು ಅಧ್ಯಯನ ಹೇಳಿದೆ. ಕರ್ನಾಟಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ತಮಿಳುನಾಡು 3ನೇ ಮತ್ತು ಕೇರಳ 4ನೇ ಸ್ಥಾನಗಳಲ್ಲಿವೆ. ದಕ್ಷಿಣದ ಮೂರು ರಾಜ್ಯಗಳು ಭಾರತದಲ್ಲಿ ಶೇ. 53.16ರಷ್ಟು ಆನೆಗಳನ್ನು ಹೊಂದಿವೆ. ಕರ್ನಾಟಕದಲ್ಲಿ 6,013, ತಮಿಳುನಾಡಿನಲ್ಲಿ 3,136 ಮತ್ತು ಕೇರಳದಲ್ಲಿ 2,785 ಆನೆಗಳಿದ್ದು, ಪಶ್ಚಿಮ ಘಟ್ಟಗಳಲ್ಲಿ ಆನೆಗಳ ಒಟ್ಟು ಸಂಖ್ಯೆ 11,934 ಕ್ಕೆ ತಲುಪಿದೆ. ಅಷ್ಟೇ ಅಲ್ಲದೇ ಈ ಅಧ್ಯಯನದ ಪ್ರಕಾರ ಮಧ್ಯ ಭಾರತ ಮತ್ತು ಪೂರ್ವ ಘಟ್ಟಗಳಲ್ಲಿ 1,891 ಆನೆಗಳಿವೆ, ಶಿವಾಲಿಕ್ ಬೆಟ್ಟಗಳು ಮತ್ತು ಗಂಗಾ ಬಯಲು ಪ್ರದೇಶಗಳಲ್ಲಿ 2,062 ಆನೆಗಳು ಮತ್ತು ಈಶಾನ್ಯ ಬೆಟ್ಟಗಳು ಮತ್ತು ಬ್ರಹ್ಮಪುತ್ರ ಪ್ರವಾಹ ಬಯಲು ಪ್ರದೇಶಗಳಲ್ಲಿ 6,559 ಆನೆಗಳಿವೆ ಎಂದು ದಾಖಲಾಗಿದೆ. ಇದರಲ್ಲಿ ಪ್ರಮುಖವಾಗಿ ಅಸ್ಸಾಂ ಉತ್ತರ ಭಾರತದ ಆನೆಗಳ ಸಂಖ್ಯೆ ವಿಷಯದಲ್ಲಿ ವಿಭಿನ್ನವಾಗಿದ್ದು, ಸುಮಾರು 4,159 ಆನೆಗಳಿಗೆ ನೆಲೆಯಾಗಿ 2ನೇ ಸ್ಥಾನದಲ್ಲಿದೆ, ಇದು ತಮಿಳುನಾಡು ಮತ್ತು ಕೇರಳದ ಎಣಿಕೆಗಿಂತ ಹೆಚ್ಚಾಗಿದೆ.

ಆರ್.ಕಿಶನ್ ರಾಜ್ಯ ಮಟ್ಟಕ್ಕೆ ಆಯ್ಕೆ



ಮೈಸೂರು: ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಆರ್.ಕಿಶನ್ ಜಿಲ್ಲಾ ಮಟ್ಟದ 3000 ಮೀಟರ್ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸುವ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆಡಳಿತ ಮಂಡಳಿ, ಕಾರ್ಯನಿರ್ವಾಹಕ ಅಧಿಕಾರಿಗಳು, ಪ್ರಾಂಶುಪಾಲರು, ಶ್ರೀ ಪ್ರಣಮ್ಯ ಟ್ರಸ್ಟ್‌ನ ಅಧ್ಯಕ್ಷರು ಮತ್ತು ಕಾಲೇಜಿನ ಬೋಧಕ–ಬೋಧಕೇತರರು ಅಭಿನಂದಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.10.2025 ಗುರುವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊ.ಸಿ. ನಾಗಣ್ಣ, ನಿರ್ಮಾಣ : ಜಿ. ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಬಿ. ಶ್ರೀರಾಂ ಭಟ್ ಹಾಗೂ ಎಂ.ಡಿ.ಸುಮತಿ ಮುರಾರಿ, ವ್ಯಾಖ್ಯಾನ–ಕೆ. ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಭಾಗವಹಿಸುತ್ತಾರೆ–ಪರಿಸರ ಸಂರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷರಾದ ಭಾನು ಮೋಹನ್, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ–ಕಿಸಾನ್‌ವಾಣಿ, ವಿಶ್ವ ಆಹಾರ ದಿನ ಹಾಗೂ ಕೃಷಿ ಇಲಾಖೆಯ ಅಭಿವೃದ್ಧಿ ಯೋಜನೆಗಳನ್ನ ಕುರಿತ ನೇರ ಫೋನ್–ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ವಿ.ಎಸ್. ಅಶೋಕ್, ಪ್ರಸ್ತುತಿ –ಎನ್.ಕೇಶವಮೂರ್ತಿ, 8.00 ಯುವವಾಣಿ, 9.30 ಕನ್ನಡ ಭಾರತಿ, 10.00 ನಾಟಕ – ಮಹಾಕಲ್ಯಾಣ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಮೂಲವ್ಯಾದಿ/ಪೈಲ್ಸ್, ಮಧುಮೇಹ ತೊಂದರೆ, ಲಕ್ವ/ಪ್ಯಾರಾಲಿಸಿಸ್, ಮೈಗ್ರೇನ್ ಹಾಗೂ ಎಲ್ಲಾ ಪ್ರಕಾರದ ತಲೆನೋವುಗಳು ಮತ್ತು ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಮಕ್ಕಳಲ್ಲಿ ಕಂಡು ಬರುವ ಸೆರೆಬ್ರಲ್ ಪಾಲ್ಸಿ (ಮಾಂಸ ಖಂಡಗಳ ದೌರ್ಬಲ್ಯ, ನಿಲ್ಲಲು ಹಾಗೂ ನಡೆದಾಡಲು ಸಾಧ್ಯವಾಗದಿರುವುದು, ಕುಂಠಿತ ಬೆಳವಣಿಗೆ), ವಯಸ್ಕರಲ್ಲಿ ಕಂಡು ಬರುವ ಸಂಧಿ ನೋವು, ಮಂಡಿ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು :** ಪೇಪರ್ ಪಲ್ಪ್ ಉಪಯೋಗಿಸಿ, ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ರುದ್ರಾಕ್ಷಿ ಸಂಸ್ಥೆ :** ದೀಪಾವಳಿ ಪ್ರಯುಕ್ತ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸಿಪಾಯಿ ಗ್ರಾಂಡೆ, ಜೆಎಸ್‌ಎಸ್ ಆಸ್ಪತ್ರೆ ಎದುರು, ಬೆಳಗ್ಗೆ 10.30 ರಿಂದ.

■ **ಸ್ಪಂದನಾ ಸಾಂಸ್ಕೃತಿಕ ಪರಿಷತ್ತು ಹಾಗೂ ದಕ್ಷ ಪದವಿ ಮತ್ತು ಪದವಿಪೂರ್ವ ಕಾಲೇಜು :** ಯುವ ಲೇಖಕ ಮುತ್ತೇಶ್ ಮೆಣಸಿನಕಾಯಿ ಅವರ ಎರಡು ಪುಸ್ತಕಗಳ ಲೋಕಾರ್ಪಣೆ ಸಮಾರಂಭ, 'ಹೃದಯ ಗರ್ಭದಲ್ಲೊಂದು ಅಗ್ನಿಪಥ' ಹಾಗೂ 'ಬೆಳದಿಂಗಳ ಕಾಣುವ ಕನಸು' ಪುಸ್ತಕಗಳ ಲೋಕಾರ್ಪಣೆ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಹಾಗೂ ಸಾಹಿತಿ ಡಾ.ನೀಲಗಿರಿ ಎಂ.ತಳವಾರ, ಆಶಯ ನುಡಿ : ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಅಧ್ಯಕ್ಷತೆ : ದಕ್ಷ ಕಾಲೇಜಿನ ಅಧ್ಯಕ್ಷ ಡಾ.ಪಿ. ಜಯಚಂದ್ರ ರಾಜು, ಮುಖ್ಯ ಅತಿಥಿಗಳು : ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ.ಗುರುರಾಜ್, ಹಿರಿಯ ಪತ್ರಕರ್ತ ಕೆ.ಆರ್.ನೀಲಕಂಠ, ಸಾರಿಗೆ ನಿಗಮದ ನಿವೃತ್ತ ಘಟಕ ವ್ಯವಸ್ಥಾಪಕ ಜಿ.ಬಿ.ಮಂಟೂರ, ಯುವ ಸಾಹಿತಿ ಹಾಗೂ ಕೃತಿಕಾರ ಮುತ್ತೇಶ್ ಮೆಣಸಿನಕಾಯಿ, ಕಾಲೇಜಿನ ಪ್ರಾಂಶುಪಾಲ ಅಭಿಷೇಕ್, ಸ್ಥಳ: ದಕ್ಷ ಕಾಲೇಜು ಸಭಾಂಗಣ, ಹೂಟಗಳ್ಳಿ, ಸಂಜೆ 4.30ಕ್ಕೆ.

■ **ಸಾಧನ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಶ್ರೀ ದುರ್ಗಾ ಫೌಂಡೇಷನ್ :** ಮನೆ ಮನೆಗಳಲ್ಲಿ ದಸರಾ ಗೊಂಬೆ ಕೂರಿಸುವ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ, ಮುಖ್ಯ ಅತಿಥಿಗಳು: ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷೆ ಹೇಮಾನಂದೀಶ್, ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಅಪೂರ್ವ ಹೋಟೆಲ್ ಸಭಾಂಗಣ, ಚಾಮುಂಡಿಪುರಂ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಗುರುವಾರ 16 ಅಕ್ಟೋಬರ್ 2025

ಬೌದ್ಧ ಮಹಾ ಸಮ್ಮೇಳನ ಸಂಪನ್ನ

ಒಂದು ಸಂಸ್ಥೆ 100 ವರ್ಷಗಳಾದರೂ ಬುದ್ಧಿ ಇಲ್ಲದೆ ದೊಣ್ಣೆ ಹಿಡಿದುಕೊಂಡು ಓಡಾಡುತ್ತಿದೆ


ಆರ್‌ಎಸ್‌ಎಸ್ ವಿರುದ್ಧ ಬಹುಭಾಷಾ ನಟ ಪ್ರಕಾಶ್‌ರಾಜ್ ಪರೋಕ್ಷ ವ್ಯಂಗ್ಯ

ಮೈಸೂರು,ಅ.15(ಪಿಎಂ)– 'ಕತ್ತೆ ವಯಸ್ಸಾದರೂ ಬುದ್ಧಿ ಬಂದಿಲ್ಲ' ಎಂದು ಒಂದು ಗಾದೆ ಮಾತಿದೆ. ಅಂತೆಯೇ ಒಂದು ಸಂಸ್ಥೆಗೆ 100 ವರ್ಷಗಳಾದರೂ ಬುದ್ಧಿ ಬಂದಿಲ್ಲ. ದೊಣ್ಣೆ ಹಿಡಿದುಕೊಂಡು ಓಡಾಡುತ್ತಿದ್ದಾರೆ ಎಂದು ಹೆಸರೇಳದೆ ಆರ್‌ಎಸ್‌ಎಸ್ ವಿರುದ್ಧ ಬಹುಭಾಷಾ ನಟ ಪ್ರಕಾಶ್ ರಾಜ್ ಪರೋಕ್ಷವಾಗಿ ವ್ಯಂಗ್ಯವಾಡಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದ್ದ ಬೌದ್ಧ ಮಹಾ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಬುಧವಾರ ಅವರು ಸಮಾರೋಪ ಭಾಷಣ ಮಾಡಿದರು.

100 ವರ್ಷಗಳಾದರೂ ಅವರಿಗೆ ಬುದ್ಧಿ ಬಂದಿಲ್ಲ. ನಮ್ಮ ಹಿಂದೆ ಇರುವ ಶಕ್ತಿ ಶತಶತಮಾನಗಳ ಬುದ್ಧ ಹಾಗೂ ಬಸವ. ಹಾಗಾಗಿ ಇವರಿಂದ ನಮ್ಮನ್ನು ತುಳಿಯಲು ಸಾಧ್ಯವಿಲ್ಲ. ಇಂತಹ ಶತಶತಮಾನಗಳ ಶಕ್ತಿಯನ್ನು ನಂಬಿ ನಮಗೆ ದಾರಿದೀಪವಾಗಿದ್ದಾರೆ ನಮ್ಮ ಅಂಬೇಡ್ಕರ್. ಶತಮಾನ ಕಂಡ ಈ ಸಂಸ್ಥೆಯವರು ಯಾವುದೇ ಧರ್ಮಕ್ಕೆ ಸೇರಿದವರಲ್ಲ. ಸುಮ್ಮನೆ ಹಿಂದೂ ಧರ್ಮ ಎನ್ನುತ್ತಾರೆ. ಆದರೆ ಅದಕ್ಕೂ ಇವರು ಸೇರಿದವರಲ್ಲ, ಇವರು ಕಳ್ಳರು ಎಂದು ವಾಗ್ದಾಳಿ ನಡೆಸಿದರು.

ಇವರು ಹೇಗೆಂದು ಝೇನ್ ಬುದ್ಧಿಸಂನ ಕಥೆಯೊಂದರ ಮೂಲಕ ಹೇಳಬಹುದು. 'ಒಬ್ಬ ಬಾಣದ ಕಲೆ ಕರಗತ ಮಾಡಿಕೊಳ್ಳಲು ಒಳ್ಳೆಯ ಗುರುವನ್ನು ಹುಡುಕಿಕೊಂಡು ಹೋದನಂತೆ. ಅವನು ಇವರ ತರದ್ದೇ ಒಂದು ಸಂಸ್ಥೆ ನೋಡಿದನಂತೆ. ಆ ಸಂಸ್ಥೆ ಆವರಣ ನೋಡಿದರೆ ಎಲ್ಲಾ ಮರಗಳಲ್ಲಿರುವ ರೌಂಡ್ ಮಾರ್ಕ್‌ನ ಮಧ್ಯೆಯಲ್ಲೇ



ಬೌದ್ಧ ಮಹಾ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಬಹುಭಾಷಾ ನಟ ಪ್ರಕಾಶ್ ರಾಜ್ ಮಾತನಾಡಿದರು.

ಬಾಣಗಳು ಇದ್ದವಂತೆ. ಇವನು ಇಲ್ಲಿನ ಗುರು ಎಂತಹ ಗುರಿಕಾರ ಇರಬಹುದು ಎಂದು ಕೊಂಡನಂತೆ. ಇಂತಹ ಗುರುವಿನ ಬಳಿಯೇ ಬಿಲ್ಲುವಿದ್ಯೆ ಕಲಿಯಬೇಕೆಂದು ನಿರ್ಧಾರ ಮಾಡಿದ ಆತನಿಗೆ ನಾಲ್ಕಾರು ಜನ ಬೇಡವೆಂದು ಬುದ್ಧಿ ಹೇಳಿದರು. ಆದರೆ ಈತ, ನಾನು ಅವನಲ್ಲೇ ಕಲಿಯುತ್ತೇನೆಂದು ಆ ಸಂಸ್ಥೆ ಒಳಗೆ ಹೋಗಿ ನೋಡಿದರೆ ಸತ್ಯ ಗೊತ್ತಾಯಿತು. ಅದೇಂದರೆ, ಆ ಗುರು ಮೊದಲು ಬಾಣ ಬಿಟ್ಟು ನಂತರ ಅದರ ಸುತ್ತಲು ರೌಂಡ್ ಮಾರ್ಕ್ ಹಾಕುತ್ತಿದ್ದನಂತೆ ಎಂದು ಲೇವಡಿ ಮಾಡಿದರು.

ಕ್ರಿಕೆಟ್‌ನಲ್ಲಿ ಆಲ್ ರೌಂಡರ್ಸ್ ಇರುತ್ತಾರೆ. ಅಂತೆಯೇ ಸಗಣಿ ಆಲ್ ರೌಂಡರ್ಸ್. ಇವರು ಹಾಗೆಂದರೆ, ಒಲೆಗೆ ಬಿದ್ದರೆ ಇಂಧನ, ಹೊಲಕ್ಕೆ ಬಿದ್ದರೆ ಗೊಬ್ಬರ. ಅದೇ ರೀತಿ ಸಗಣಿ ತಲೆಗೆ ಬಿದ್ದರೆ ಅಂಧಭಕ್ತ. ಅಷ್ಟೇ ವ್ಯತ್ಯಾಸ. ಇವರು ಸಗಣಿ ತಲೆಯಲ್ಲಿ ತುಂಬಿಕೊಂಡು ಆಲ್ ರೌಂಡರ್ ಅಂದುಕೊಂಡಿದ್ದಾರೆ. ನಮ್ಮ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಮುಂದೆ ನಿಲ್ಲಲು ಇವರಿಂದ ಸಾಧ್ಯವಿಲ್ಲ ಎಂದರು.

ಈಗ ಬಹಳ ಭಾಷಣ ಕೇಳಿದ್ದೇವೆ. ರಾಜಕೀಯ ನಾಯಕರನ್ನು ನೋಡಿದ್ದೇವೆ. ಹಾಗಾಗಿ ನಾವು ಹುಷಾರಾಗಿ ಇರಬೇಕು. ಈ ರಾಜಕಾರಣಿಗಳಿಗೂ ಹೇಳಬೇಕು. ಬರೀ ಸಭೆಯಲ್ಲಿ ಬಂದು ಬುದ್ಧ, ಅಂಬೇಡ್ಕರ್ ಅವರ ಬಗ್ಗೆ ಭಾಷಣ ಮಾಡೋದಲ್ಲ. ಈ ಸಂಘಿಗಳ ಕಾರ್ಯಕ್ರಮಕ್ಕೆ ಹೋಗಿ ಚೀಫ್ ಗೆಸ್ಟ್ ಆಗಬೇಡಿ ಎಂದು ಈ ರಾಜಕಾರಣಿಗಳಿಗೆ ಹೇಳಬೇಕು. ಜೊತೆಗೆ ಸದನದಲ್ಲೂ ಆ ಸಂಘಿಗಳ ಮಂತ್ರಗಳನ್ನು ಪಠಿಸಬಾರದೆಂದೂ ಅವರಿಗೆ ಹೇಳಬೇಕು. ಈ ಎಡಬಿಡಂಗಿತನ ಬೇಡವೆಂದೂ ಅವರಿಗೆ ಹೇಳಬೇಕಿದೆ ಎಂದು ಹೇಳಿದರು.

ನಮಗೆ ಕಷ್ಟ ಎದುರಾದರೆ ನಮ್ಮ ಸಹಾಯಕ್ಕೆ ಬರುವವನು ಇನ್ನೊಬ್ಬ ಮನುಷ್ಯನೇ ಹೊರತು ಯಾವ ದೇವರು ಅಲ್ಲ. ಯಾವ ಧರ್ಮ ಮನುಷ್ಯ ಕೇಂದ್ರಿತ ಅಲ್ಲವೋ ಅದು ಧರ್ಮವಲ್ಲ. ಯಾವ ಧರ್ಮ ಮನುಷ್ಯನನ್ನು ಸಮಾನವೆಂದು ಹೇಳುವುದಿಲ್ಲವೋ ಅದು ಧರ್ಮವಲ್ಲ. ಪ್ರೀತಿ ಹಾಗೂ ಸಮಾನತೆಯಿಂದ ಮಾತ್ರ ಗೆಲ್ಲಲು ಸಾಧ್ಯ. ಈ 100 ವರ್ಷದವರಿಗೆ ನಾವು ಧರ್ಮದ ಏಟು ಕೊಡಬೇಕು ಎಂದು ತಿಳಿಸಿದರು.

ಬೌದ್ಧ ಚಿಂತಕ ಡಾ.ನಟರಾಜ್ ಬೂದಾಳ್ ಮಾತನಾಡಿ, ಬುದ್ಧ ಗುರು ಹಾಗೂ ಡಾ.ಅಂಬೇಡ್ಕರ್ ಅವರ ವಿಚಾರಗಳನ್ನು ನಾವು ಮರು ಮನನ ಮಾಡಿಕೊಳ್ಳಬೇಕಿದೆ. ಜಗತ್ತಿನ ಯಾವ ಧರ್ಮವೂ ಪ್ರಜಾಸತ್ತೆಗಿಂತ ದೊಡ್ಡದಲ್ಲ. ಜಗತ್ತಿನಲ್ಲಿ ಈವರೆಗೆ ಮನುಷ್ಯ ಸಮಾಜದ ಆವಿಷ್ಕಾರದಲ್ಲಿ ಅತ್ಯಂತ ಶ್ರೇಷ್ಠವಾದುದು ಪ್ರಜಾಸತ್ತೆ. ಈ ಪ್ರಜಾಸತ್ತೆಯ ಆಶಯಗಳನ್ನು ಒಳಗೊಂಡಿರುವ ಬೌದ್ಧ ಧರ್ಮ ಮಾತ್ರವೇ ನಮ್ಮ ಬದುಕು ರೂಪಿಸಲಿದೆ. ಲೋಕದ ಎಲ್ಲಾ ಕೇಡುಗಳ ನಿವಾರಣೆಗೆ ಔಷಧ ಕೊಟ್ಟ ವೈದ್ಯ ಬುದ್ಧ ಎಂದು ಹೇಳಿದರು.

ಈ ಹೊತ್ತು ಇಡೀ ಜಗತ್ತು ಅತ್ಯಂತ ತಲ್ಲಣದಿಂದ ಇರಲಿಕ್ಕೆ ಕಾರಣ ಕೆಲವು ಪೊಳ್ಳು ತತ್ವಜ್ಞಾನಗಳಾಗಿವೆ. ಇದು ಕೇವಲ ಭಾರತಕ್ಕೆ ಸಂಬಂಧಿಸಿದ ಸಂಗತಿಯಲ್ಲ. ಪೊಳ್ಳು ತತ್ವಜ್ಞಾನಗಳಿಂದ ಬುದ್ಧ ಗುರುವಿಗೆ ಎದುರಾದ ಸಮಸ್ಯೆಗಳೆ ಅಂಬೇಡ್ಕರ್ ಅವರಿಗೂ ಎದುರಾಯಿತು. ಈ ಹೊತ್ತಿಗೂ ಕೂಡ ಒಬ್ಬ ಸಾಮಾನ್ಯ ನಿಸರ್ಗ ವಿವೇಕವಿರುವ ಮನುಷ್ಯನ ಎದುರಿಗೆ ಅದೇ ಸಮಸ್ಯೆಗಳು ಕಾಡುತ್ತಿವೆ ಎಂದರು.

ಪ್ರಶ್ನಿಸಲಾಗದು ಎನ್ನುವ ನೆಲೆಯ ಕೆಲ ಪುಸ್ತಕಗಳು ಇಡೀ ಪ್ರಪಂಚದ ಬಹುಪಾಲು ಸಮಸ್ಯೆಗಳಿಗೆ ಕಾರಣ. ನಾವು ಮನುಸ್ಮೃತಿ ಬಗ್ಗೆ ಮಾತನಾಡುತ್ತೇವೆ. ಅದನ್ನು ಓದದೇ ಇದ್ದರೂ ನಮ್ಮಲ್ಲಿ ಹಲವರು ಅಲ್ಲಿರುವ ವಿಚಾರಗಳನ್ನೇ ಪಾಲಿಸುತ್ತಿದ್ದೇವೆ. ಇಂತಹ ಪುಸ್ತಕಗಳು ಭಾರತೀಯರ ಬದುಕನ್ನು ದುಸ್ಥಿತಿಗೆ ತಂದಿಟ್ಟಿವೆ. ಯಾವುದೇ ಸರ್ಕಾರ ಬಂದರೂ ಎರಡೂವರೆ ಪರ್ಸೆಂಟ್ ಇವರ ಜನರೇ ಅಧಿಕಾರ ಅನುಭವಿಸುತ್ತಾರಲ್ಲದೆ, ನಿಯಂತ್ರಣ ಮಾಡುತ್ತಾರೆ. ಅದಕ್ಕೆ ಕಾರಣ ಅವರ ಸಾಂಸ್ಕೃತಿಕ ರಾಜಕಾರಣ ಎಂದು ತಿಳಿಸಿದರು.

ಆತಂಕವಿಲ್ಲದೆ ಹೇಳಿ... ನಾವೆಲ್ಲರೂ ಬೌದ್ಧರು....

ಬೌದ್ಧ ಸಮ್ಮೇಳನದ ಸರ್ವಾಧ್ಯಕ್ಷ–ಮಾಜಿ ಮೇಯರ್ ಪುರುಷೋತ್ತಮ್

ಮೈಸೂರು, ಅ.15(ಎಂಕೆ)– ಯಾವುದೇ ಆತಂಕವಿಲ್ಲದೆ ನಾವೆಲ್ಲರೂ ಬೌದ್ಧರು ಎಂದು ಹೇಳಿಕೊಳ್ಳುವಂತೆ ಬೌದ್ಧ ಮಹಾ ಸಮ್ಮೇಳನದ ಸರ್ವಾಧ್ಯಕ್ಷರೂ ಆದ ಮಾಜಿ ಮೇಯರ್ ಪುರುಷೋತ್ತಮ್ ಕರೆ ನೀಡಿದರು.



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಬೌದ್ಧ ಮಹಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಬೌದ್ಧರಿಗೂ ಮೀಸಲಾತಿ ಇದೆ ಎಂದು ಹೇಳಿದ್ದು, ಈ ಮೂಲಕ ಆತಂಕ ವಿಲ್ಲದೆ ನಾವೆಲ್ಲರೂ ಕೂಡ ಬೌದ್ಧರು ಎಂದು ಹೇಳಿಕೊಳ್ಳಲು ಶಕ್ತಿ ತುಂಬಲಾಗಿದೆ ಎಂದರು.

ಭಗವಾನ್ ಬುದ್ಧರ ವೈಜ್ಞಾನಿಕ ಚಿಂತನೆ ಪ್ರಸ್ತುತ ಭಾರತ ದೇಶಕ್ಕೆ ಅವಶ್ಯಕತೆ ಇದೆ. ಇವತ್ತಿಗೂ ಕೂಡ ಮಾನವೀಯತೆ ಇಲ್ಲದ, ಅಸ್ಪೃಶ್ಯತೆ ಇರುವ, ಶೋಷಣೆ ಮಾಡುವ, ಹಾಡಹಗಲಲ್ಲೆ ಕಗ್ಗೊಲೆ ಮಾಡುವ, 8 ವರ್ಷದ ಮಗುವಿನ ಮೇಲೂ ಅತ್ಯಾಚಾರ ಮಾಡುವ ಭಾರತ ದೇಶದಲ್ಲಿ ನಾವು ಬುದ್ಧರ ಚಿಂತನೆಯನ್ನು ಬಿತ್ತುವ ಮೂಲಕ ಬುದ್ಧರ ಪ್ರಜ್ಞೆಯನ್ನು ದೇಶಕ್ಕೆ ಕೊಡಬೇಕಿದೆ ಎಂದು ಹೇಳಿದರು.

ಬುದ್ಧರು ಇಲ್ಲಿ ಹುಟ್ಟಿ 28 ರಾಷ್ಟ್ರಗಳಲ್ಲಿ ಬೆಳಕು ಚೆಲ್ಲಿದ್ದಾರೆ. ಭಾರತ ದೇಶ ಬುದ್ಧರನ್ನು ಸ್ವೀಕಾರ ಮಾಡುವಲ್ಲಿ ವಿಫಲವಾಯಿತು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು, ಬೌದ್ಧ ಧಮ್ಮಕ್ಕೆ ಮರುಜೀವ.. ಮರು ಬೆಳಕನ್ನು ಕೊಟ್ಟಿದ್ದಾರೆ. ಇದನ್ನು ಮನದಟ್ಟು ಮಾಡಿಕೊಂಡು ನಾವೆಲ್ಲರೂ ಬುದ್ಧರ ನಾಡನ್ನು ಕಟ್ಟುತ್ತೇವೆ ಎಂದು ಪ್ರತಿಜ್ಞೆಯನ್ನು ಮಾಡಬೇಕು. ಬುದ್ಧರ ತಾತ್ವಿಕ ಚಿಂತನೆಯಲ್ಲಿ ಸಾಗುತ್ತೇವೆ ಎಂದು ಸಂಕಲ್ಪ ಮಾಡಬೇಕು. ಮಾಜಿ ಸಂಸದರಾದ ದಿವಂಗತ ವಿ.ಶ್ರೀನಿವಾಸ್ ಪ್ರಸಾದ್ ಅವರು ತೋರಿದ 'ಬುದ್ಧರೆಡೆಗೆ ಮರಳಿ ಮನೆಗೆ' ಮಾರ್ಗದಂತೆ ಸಾಗಬೇಕು ಎಂದು ತಿಳಿಸಿದರು.

ಬೌದ್ಧ ಮಹಾ ಸಮ್ಮೇಳನದಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಮನವಿ

- ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪಿಸುವುದು ಮತ್ತು 500 ಕೋಟಿ ರೂ.ಅನುದಾನ ಮೀಸಲಿಡುವುದು ಹಾಗೂ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಬೌದ್ಧ ಅಧ್ಯಯನ ಕೇಂದ್ರ ಸ್ಥಾಪನೆ ಮಾಡುವುದು.
- ರಾಷ್ಟ್ರಕವಿ ಕುವೆಂಪು ಅವರು ಬರೆದಿರುವ ನಾಡಗೀತೆಯ ಮೂಲ ರಚನೆಯಲ್ಲಿರುವ 'ಬೌದ್ಧರುದ್ಯಾನ' ಪದವನ್ನು 'ನಾಡಗೀತೆ'ಗೆ ಸೇರಿಸುವುದು.
- ಬುದ್ಧ ವಿಹಾರ ನಿರ್ಮಾಣಕ್ಕೆ ಪ್ರತೀ ಜಿಲ್ಲಾ ಕೇಂದ್ರಗಳಲ್ಲಿ 2 ಎಕರೆ, ತಾಲೂಕು ಕೇಂದ್ರಗಳಲ್ಲಿ 1 ಎಕರೆ ಜಮೀನು ನೀಡಬೇಕು.
- ಹಜ್ ಯಾತ್ರೆಗೆ ನೀಡುವಂತೆ 'ಬುದ್ಧಗಯಾ' ಮತ್ತು 'ಲುಂಬಿನಿ' ಯಾತ್ರೆಗೆ ವಿಶೇಷ ಅನುದಾನ ಕಲ್ಪಿಸಬೇಕು.
- ರಾಜ್ಯದ ಪ್ರತೀ ಗ್ರಾಮದಲ್ಲಿರುವ ಅಂಬೇಡ್ಕರ್ ಭವನಗಳನ್ನು ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸಿ, ಸ್ಥಳೀಯವಾಗಿ ಮಹಿಳೆಯರು ಮತ್ತು ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗ ಅವಕಾಶ ಕಲ್ಪಿಸುವಂತೆ ಮನವಿ ಸಲ್ಲಿಸಲಾಯಿತು.

ಕುವೆಂಪು ನಾಡಗೀತೆಯಲ್ಲಿ 'ಜೈನ.. ಬೌದ್ಧರುದ್ಯಾನ' ಪದ ಸೇರ್ಪಡೆ ಮಾಡಿ

ಬೌದ್ಧ ಮಹಾ ಸಮ್ಮೇಳನದ ಗೌರವಾಧ್ಯಕ್ಷರೂ ಆದ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಮನವಿ

ಮೈಸೂರು, ಅ.15(ಎಂಕೆ)– ರಾಷ್ಟ್ರಕವಿ ಕುವೆಂಪು ರಚಿತ 'ನಾಡಗೀತೆ'ಯ ಮೂಲ ರಚನೆಯಲ್ಲಿ 'ಬೌದ್ಧರುದ್ಯಾನ' ಎಂದಿದ್ದು, 'ಜೈನ.. ಬೌದ್ಧರುದ್ಯಾನ' ಎಂಬ ಪದವನ್ನು 'ನಾಡಗೀತೆ'ಗೆ ಸೇರಿಸಿ ಆದೇಶ ನೀಡಬೇಕು ಹಾಗೂ



ಧರ್ಮದ ಕಲಂನಲ್ಲಿ 'ಬೌದ್ಧ' ಎಂದು ಬರೆಸಲು ನೀಡಿರುವ ಆದೇಶ ಗೆಜೆಟ್ ನೋಟಿಫಿಕೇಶನ್ ಆಗಿ ಅಧಿಕೃತ ವಾಗಬೇಕು ಎಂದು ಬೌದ್ಧ ಮಹಾ ಸಮ್ಮೇಳನ ಗೌರವಾಧ್ಯಕ್ಷರೂ ಆದ ಗಾಂಧಿನಗರ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಮನವಿ ಮಾಡಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಬೌದ್ಧ ಮಹಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ಮುಂದಿನ ವರ್ಷದ ಬೌದ್ಧ ಮಹಾ ಸಮ್ಮೇಳನ ಚಾಮರಾಜನಗರ ಜಿಲ್ಲೆಯಲ್ಲಿ ನಡೆಯಲಿದ್ದು, ಬೌದ್ಧ ಸಮ್ಮೇಳನ ಪ್ರತೀ ವರ್ಷ ಯಾವುದೇ ಜಿಲ್ಲೆಯಲ್ಲಿ ನಡೆದರೂ ಸರ್ಕಾರದಿಂದ 5 ಕೋಟಿ ರೂ. ಅನುದಾನ ನೀಡಬೇಕು ಎಂದು ಕೋರಿದರು.

ಸಾಮ್ರಾಟ ಅಶೋಕ ಚಕ್ರವರ್ತಿ ದೇಶದ ಉದ್ದಗಲಕ್ಕೂ ಸ್ಥಾಪಿಸಿದ 84 ಸಾವಿರ ಬೌದ್ಧ ಸ್ತೂಪಗಳು ಈಗ ಎಲ್ಲಿವೆ... ದೇಶದ ಯಾವುದೇ ಸ್ಥಳವನ್ನು ಅಗೆದರೂ ಅಲ್ಲಿ ಸಿಗುವುದು ಬುದ್ಧ. ಹಾಗಾಗಿ ರಾಜ್ಯದ ಎಲ್ಲಾ ವಿವಿಗಳಲ್ಲಿ ಬೌದ್ಧ ಅಧ್ಯಯನ ಕೇಂದ್ರಗಳಾಗಬೇಕು. ಅಂಬೇಡ್ಕರ್ ಭವನಗಳು ಜ್ಞಾನ ಕೇಂದ್ರಗಳಾಗಬೇಕು. ಅಂಬೇಡ್ಕರ್ ಅವರ ಸಮಾನತೆ ಸಂದೇಶ ಎಲ್ಲೆಡೆ ಪಸರಿಸುವಂತಾಗಬೇಕು ಎಂದು ತಿಳಿಸಿದರು.

ಆಯುಧಗಳ ಭಾರತವಲ್ಲ ಇದು. ಆಯುಧಗಳು ವಿಜೃಂಭಿಸಿದರೆ ದೇಶ ಸರ್ವನಾಶವಾಗುತ್ತೆ. ಮಕ್ಕಳ ಕೈಯಲ್ಲಿ ಪೆನ್ನು ಕೊಡಬೇಕೇ ಹೊರತು ದೊಣ್ಣೆ ಕೊಡಬಾರದು ಎಂದಿದ್ದ ಅಂಬೇಡ್ಕರ್ ಅವರು, 1956 ಅ.14ರಲ್ಲಿ ನಾನು ನರಕದಿಂದ ಬಿಡುಗಡೆಯಾಗುತ್ತಿದ್ದೇನೆ ಎಂದು ಬೌದ್ಧ ಧಮ್ಮ ಸ್ವೀಕರಿಸಿದರು. ಇವತ್ತಿಗೂ 6 ನಿಮಿಷಕ್ಕೊಮ್ಮೆ ರೇಪು.. ಅದೇ ಅಸಮಾನತೆ ಕಿಚ್ಚು... ಅದೇ ಅಸ್ಪೃಶ್ಯತೆ ಇದೆ. ನಮ್ಮ ದೇಶದ ಪ್ರಧಾನಿಗಳು, ರಾಜಕೀಯ ಗಣ್ಯರು ವಿದೇಶಕ್ಕೆ ಹೋದಾಗ 'ಐ ಕಂ ಫ್ರಂ ಲ್ಯಾಂಡ್ ಆಫ್ ಬುದ್ಧ... ನಾನು ಬುದ್ಧನ ನಾಡಿನಿಂದ ಬಂದಿದ್ದೇನೆ. ನಮ್ಮದು ಬುದ್ಧ ಭಾರತ ಎಂದು ಹೇಳಿಕೊಳ್ಳುತ್ತಾರೆ. ಬುದ್ಧ ಬೇಕು. ಯುದ್ಧ ಬೇಡ ಎನ್ನುತ್ತಾರೆ. ಆದರೆ, ಬುದ್ಧರ ಭಾರತದಲ್ಲಿ ರಕ್ತದ ಕಲೆಗಳು ಉಳಿದುಕೊಳ್ಳುತ್ತಿವೆ. ಹಾಡ ಹಗಲಲ್ಲೇ ಮನುಷ್ಯನನ್ನು ಮನುಷ್ಯ ಕೊಚ್ಚಿ ಕೊಲೆ ಮಾಡ್ತಾ ಇದ್ದಾನೆ ಎಂದು ವಿಷಾಧಿಸಿದರು.

ಎಲ್ಲಾ ಹಕ್ಕುಗಳನ್ನು ಕೊಟ್ಟ ಸರದಾರ ಅಂಬೇಡ್ಕರ್...!: ಯಾವ ಧರ್ಮ ರಕ್ತವನ್ನು ಬಯಸುವುದಿಲ್ಲ. ರಕ್ತವನ್ನು ಬಯಸುವುದು ಧರ್ಮವೇ ಅಲ್ಲ. ಆ ಕಾರಣಕ್ಕಾಗಿಯೇ ಒಂದೇ ಒಂದು ತೊಟ್ಟು ರಕ್ತವನ್ನು ಚೆಲ್ಲದೆ ದೇಶದ ಎಲ್ಲರಿಗೂ ಓಟಿನ ಹಕ್ಕು... ನೋಟಿನ ಹಕ್ಕು... ಸೂಟು–ಬೂಟಿನ ಹಕ್ಕು... ತಾಪಂ ಹಕ್ಕು, ಜಿಪಂ ಹಕ್ಕು, ಎಂಪಿ, ಎಎಲ್ಎ ಸೇರಿದಂತೆ ಎಲ್ಲಾ ಹಕ್ಕುಗಳನ್ನು ಕೊಟ್ಟ ಸರದಾರ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಬಣ್ಣಿಸಿದರು.

ದಕ್ಷಿಣ ಬುದ್ಧಗಯಾ ಟ್ರಸ್ಟ್ ಅಭಿವೃದ್ಧಿಗೆ 10 ಕೋಟಿ ರೂ.ಅನುದಾನಕ್ಕೆ ಮನವಿ...

ಮೈಸೂರು ತಾಲೂಕಿನ ಜಯಪುರ ಹೋಬಳಿ ಹಾರೋಹಳ್ಳಿ (ಅಯೋಧ್ಯೆ ರಾಮಮಂದಿರದಲ್ಲಿ ಪ್ರತಿಷ್ಠಾಪನೆಯಾಗಿರುವ ಬಾಲರಾಮ ವಿಗ್ರಹದ ಶಿಲೆ ದೊರೆತ ಸ್ಥಳ)ಯಲ್ಲಿ ದಕ್ಷಿಣ ಬುದ್ಧಗಯಾ ಟ್ರಸ್ಟ್ ಅಭಿವೃದ್ಧಿಗಾಗಿ ಸರ್ಕಾರದಿಂದ 10 ಕೋಟಿ ರೂ. ಅನುದಾನವನ್ನು ಮಂಜೂರು ಮಾಡಬೇಕು. ಭಗವಾನ್ ಬುದ್ಧರ ಪ್ರಸಾರ ಕೇಂದ್ರವನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡಬೇಕು. ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಂತೆಯೇ ಬುದ್ಧ–ಧಮ್ಮ ಮಾನವ ಮೈತ್ರಿಯೂ ಬೌದ್ಧ ಮಹಾ ಸಮ್ಮೇಳನವೂ ವಿಶ್ವ ವಿಖ್ಯಾತವಾಗಿದೆ.

- ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಗೌರವಾಧ್ಯಕ್ಷರು, ಬೌದ್ಧ ಮಹಾ ಸಮ್ಮೇಳನ

ಬಾಬಾ ಸಾಹೇಬರ 'ನವಯಾನ'ವನ್ನು ಅಹಿಂಸಾ ಸಮಾಜ ನಿರ್ಮಾಣಕ್ಕೆ ಅಸ್ತ್ರವಾಗಿ ಬಳಸಬೇಕು

ನಟ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಸಲಹೆ



ಬೌದ್ಧ ಮಹಾ ಸಮ್ಮೇಳನದಲ್ಲಿ ನಟ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಮಾತನಾಡಿದರು.

ಮೈಸೂರು, ಅ.15(ವಿವಿಹೆಚ್)– ಬಾಬಾಸಾಹೇಬರು 1956 ರಲ್ಲಿ ಸ್ಥಾಪಿಸಿದ 'ನವಯಾನ'ವನ್ನು ಅಹಿಂಸಾತ್ಮಕ ಸಮಾಜ ನಿರ್ಮಾಣಕ್ಕೆ ಅಸ್ತ್ರವಾಗಿ ಬಳಸಬೇಕು ಎಂದು ನಟ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಪ್ರತಿಪಾದಿಸಿದರು.

ಮೈಸೂರು ಮಹಾರಾಜ ಕಾಲೇಜಿನ ಮೈದಾನದಲ್ಲಿ ಬುಧವಾರ ನಡೆದ ಬೌದ್ಧ ಮಹಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ನನಗೆ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಮಾದರಿಯಾಗಿದ್ದಾರೆ. ಬಾಬಾ ಸಾಹೇಬರು ಬುದ್ಧನಿಂದ ಪ್ರೇರಣೆ ಪಡೆದು ಬೌದ್ಧ ಧಮ್ಮಕ್ಕೆ ಮತಾಂತರವಾಗಿ ನವಯಾನ ಸ್ಥಾಪಿಸಿದರು. ಮನುಕುಲದ ಸಾರ, ಜೀವನದ ಪ್ರಮುಖವಾದ ವಿಚಾರಗಳು ಇರುವುದು ಬೌದ್ಧ ಧಮ್ಮದಲ್ಲಿ ಮಾತ್ರ. ದ್ವೇಷ, ಮೋಹದಿಂದ ಹೊರಗೆ ಬಂದು ಸಾತ್ವಿಕ ಜೀವನ ನಡೆಸುವ ಪದ್ಧತಿಯನ್ನು ಕಲಿಸುವ ಬೌದ್ಧಧಮ್ಮ ಎಲ್ಲರಲ್ಲೂ ಪ್ರೀತಿ, ವಿಶ್ವಾಸ, ನಂಬಿಕೆಯನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದೆ ಎಂದು ಅಭಿಪ್ರಾಯಪಟ್ಟರು.

ಸಾಂಸ್ಕೃತಿಕ ವಿಚಾರಗಳ ಜೊತೆಗೆ ರಾಜಕೀಯ ವಿಚಾರಗಳನ್ನು ಪಸರಿಸುವ ಉದ್ದೇಶದಿಂದ ಅಂಬೇಡ್ಕರ್ ಪ್ರಪಂಚದಾದ್ಯಂತ ಹರಡಿರುವ ಬೌದ್ಧ ಧಮ್ಮವನ್ನು ಆಯ್ಕೆ ಮಾಡಿದರು. ನಾವು ಅವರ ವಿಚಾರಗಳನ್ನು ಅನುಸರಿಸಬೇಕು. ವೈಚಾರಿಕವಾಗಿ ಪ್ರಶ್ನಿಸುವವರಾಗಬೇಕು ಎಂದು ಸಲಹೆ ನೀಡಿದರು.

ಬುದ್ಧರು ಪ್ರಕೃತಿಯ ಭಾಗವಾಗಿದ್ದರು: ಬೌದ್ಧ ಮತ್ತು ವಿಜ್ಞಾನ ವಿಷಯದ ಕುರಿತು ಚಿಂತಕ ಪ್ರೊ.ಹರಿರಾಮ್ ಮಾತನಾಡಿ, ಬೌದ್ಧ ಧಮ್ಮ ವೈಜ್ಞಾನಿಕ ಚಿಂತನೆಗಳನ್ನು ಹೊಂದಿ, ಮೌಢ್ಯವನ್ನು ತಳ್ಳಿ ಹಾಕುವ ಧಮ್ಮವಾಗಿದೆ. ಯಾವುದು ನಿಮ್ಮ ಅನುಭವಕ್ಕೆ ಬರುತ್ತದೆ ಹಾಗೂ ನಿಮಗೂ ಮತ್ತೊಬ್ಬರಿಗೂ ಒಳ್ಳೆಯದಾಗುತ್ತದೋ ಅದನ್ನು ಸ್ವೀಕರಿಸು ಎಂದು ಭೌದ್ಧ ಧಮ್ಮ ಹೇಳಿದೆ. ಬುದ್ಧರು ಪ್ರಕೃತಿಯ ಭಾಗವಾಗಿದ್ದರೆ ವಿನಃ ಮೌಢ್ಯವನ್ನು ಬೆಂಬಲಿಸಲಿಲ್ಲ. ಬುದ್ಧನ ಧಮ್ಮದಲ್ಲಿ ಧ್ಯಾನಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತದೆ. ಧ್ಯಾನದ ಮೂಲಕ ಆಧ್ಯಾತ್ಮಿಕತೆಯನ್ನು ಒಳಗೊಂಡಿದೆ ಎಂದು ಪ್ರತಿಪಾದಿಸಿದರು.

> ಭಗವಾನ್ ಬುದ್ಧರ ವಿಚಾರಗಳನ್ನು ಪ್ರತಿಯೊಬ್ಬರು ಅರ್ಥೈಸಿಕೊಳ್ಳಬೇಕು. 2500 ವರ್ಷಗಳ ನಂತರ ಬುದ್ಧರು ಮೈತ್ರಿಯ ರೂಪದಲ್ಲಿ ಬರುತ್ತೇನೆ ಎಂಬುದು ಈ ಸಮ್ಮೇಳನದಲ್ಲಿ ಗೋಚರವಾಗುತ್ತಿದೆ. ಮಾನವರೆಲ್ಲರೂ ಒಪ್ಪುವ ವಿಚಾರ ಬೌದ್ಧ ಧಮ್ಮದಲ್ಲಿದ್ದು, ಸಮಾನತೆಯ ಕ್ರಾಂತಿ ವಿಸ್ತಾರವಾಗಿ ಬೆಳೆಯಲಿ.
>
> -ಹೆಚ್.ವಿ.ರಾಜೀವ್, ಮಾಜಿ ಅಧ್ಯಕ್ಷ, ಮುಡಾ.

> ಬೌದ್ಧ ಧಮ್ಮ ಅತ್ಯಂತ ಶ್ರೇಷ್ಠ ಧಮ್ಮವಾಗಿದ್ದು, ವಿಶ್ವದಲ್ಲಿ ಶಾಂತಿ, ನೆಮ್ಮದಿ, ಕಲ್ಯಾಣ ನೆಲೆಸಲು ಅನಿವಾರ್ಯವಾಗಿದೆ. ಬುದ್ಧ ಮತ್ತು ಅಂಬೇಡ್ಕರ್ ಅವರ ವಾಣಿಗಳನ್ನು ಗೌರವಿಸುತ್ತಾ, ಅವರು ತೋರಿದ ದಾರಿಯಲ್ಲಿ ಸಾಗಬೇಕು. ಹಾಗೆಯೇ ಧರ್ಮದ ಕಾಲಂನಲ್ಲಿ ಬೌದ್ಧರು ಎಂದು ಬರೆಸುವ ತೀರ್ಮಾನ ಸ್ವಾಗತಾರ್ಹವಾಗಿದ್ದು, ಒಳಮೀಸಲಾತಿ ರೋಸ್ಟರ್ ವಿಚಾರದಲ್ಲಿ ಮತ್ತೆ ಮರುಪರಿಶೀಲನೆಗೆ ಸರ್ಕಾರ ನಿರ್ಧರಿಸಿದೆ.
>
> -ಎ.ಆರ್.ಕೃಷ್ಣಮೂರ್ತಿ, ಶಾಸಕರು.

> ಮೌನವಾಗಿ ಧ್ಯಾನಿಸಿ ತಿಳಿದುಕೊಳ್ಳುವುದೇ ಬೌದ್ಧ ಧಮ್ಮ. ಇವತ್ತು ಜಗತ್ತು ಮೈತ್ರಿಗಾಗಿ ಹಾತೊರೆಯುತ್ತಿದೆ. ಮೈತ್ರಿ ಎಂದರೆ ಜೋಡಿಸು, ಸೇರಿಸು ಎಂದರ್ಥ. ಮೈತ್ರೇಯ ಎಂದರೆ ಸ್ನೇಹಿತೆ ಎಂದರ್ಥ. ಮೈತ್ರಿಯೆ ವಿಶ್ವವನ್ನು ಮುನ್ನಡೆಸಲಿದೆ.
>
> -ಎನ್.ಮಹೇಶ್, ಮಾಜಿ ಸಚಿವ.

ಬುದ್ಧನ ತತ್ವದಡಿ ನಡೆಯಲು ಇಡೀ ವಿಶ್ವ ಚಿಂತನೆ ನಡೆಸಿದೆ

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಭಿಮತ

ಮೈಸೂರು, ಅ.15(ವಿವಿಹೆಚ್)– ಇಡೀ ವಿಶ್ವ ಬುದ್ಧನ ತತ್ವದ ಅಡಿಯಲ್ಲಿ ನಡೆಯಲು ಚಿಂತನೆ ನಡೆಸಿದ್ದು, ಭಾರತದಲ್ಲಿಯೂ ಶಾಂತಿ ನೆಲೆಸಬೇಕು ಎಂಬ ಕೂಗು ಕೇಳಿ ಬರುತ್ತಿದೆ ಎಂದು ಗೃಹಸಚಿವ ಡಾ.ಜಿ. ಪರಮೇಶ್ವರ್ ಹೇಳಿದರು.



ಬೌದ್ಧ ಮಹಾ ಸಮ್ಮೇಳನದಲ್ಲಿ ಮಾತನಾಡಿದ ಅವರು, 19 ವರ್ಷದ ನಂತರ ಮತ್ತೊಂದು ಬಾರಿ ಮೈಸೂರಿನಲ್ಲಿ ಬುದ್ಧನ ಕೂಗು ಕೇಳಿಸಿದೆ. ಇದಕ್ಕೂ ಮೊದಲು ಮೈಸೂರಿನವರೇ ಆದ ವಿ.ಶ್ರೀನಿವಾಸ ಪ್ರಸಾದ್ ಅವರು ಬುದ್ಧ ಪಯಣವನ್ನು ಪ್ರಾರಂಭಿಸಿದ್ದರು. ಮೈಸೂರಲ್ಲಿ ಸಮ್ಮೇಳನ ನಡೆಯುತ್ತಿರುವುದು ಸಂತಸ ತಂದಿದೆ ಎಂದರು.

ಜಾತಿ ಸಂಘರ್ಷಗಳ ನಡುವೆ ಧರ್ಮದ ಸಂಘರ್ಷಗಳ ನಡುವೆ ಬುದ್ಧ ಮತ್ತೊಮ್ಮೆ ಎದ್ದು ನಿಲ್ಲುತ್ತಿದ್ದಾನೆ. ಈ ದೇಶಕ್ಕೆ ಬೇಕಾಗಿರೋದು ಸಂಘರ್ಷ ಅಲ್ಲ ಶಾಂತಿಯ ಮಂತ್ರವಾಗಿದ್ದು, ಅದು ಬುದ್ಧನ ಧಮ್ಮದಲ್ಲಿದೆ ಎಂದು ಒತ್ತಿ ಹೇಳಿದರು. ಅಂಬೇಡ್ಕರ್ ಅವರು 'ನಾನು ಹಿಂದೂವಾಗಿ ಹುಟ್ಟಿದ್ದೇನೆ. ಹಿಂದೂವಾಗಿ ಸಾಯಲ್ಲ' ಎಂದು ಹೇಳಿದರು. ಇದಕ್ಕೆ ಕಾರಣ ಹಿಂದೂಗಳು ಸಮಾನತೆ ಅಳವಡಿಸಿಕೊಳ್ಳಲಿ ಎಂದು ಅವರು ಬಯಸಿದರು. ಆದರೆ ಹಿಂದೂ ಸಮಾಜ ಆ ಮಾತನ್ನು ಒಪ್ಪಿಕೊಳ್ಳಲಿಲ್ಲ. ಆದ್ದರಿಂದ ಅನಿವಾರ್ಯವಾಗಿ ಅಂಬೇಡ್ಕರ್ ಬುದ್ಧ ಧಮ್ಮಕ್ಕೆ ಹೋದರು ಎಂದು ವಿವರಿಸಿದರು.

ಶಿಕ್ಷಣ, ಸಂಘಟನೆ, ಹೋರಾಟ ಸ್ಲೋಗನ್ ಕೊಟ್ಟವರು ಡಾ.ಬಿ.ಆರ್.ಅಂಬೇಡ್ಕರ್

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ಮೈಸೂರು, ಅ.15(ವಿವಿಹೆಚ್)– ಎರಡು ದಿನಗಳ ಸಮ್ಮೇಳನ ಬುದ್ಧ ಮತ್ತು ಅಂಬೇಡ್ಕರ್ ಅವರನ್ನು ಸ್ಮರಿಸಿ ಮನೆಗೆ ಹೋಗುವ ಕಾರ್ಯಕ್ರಮವಲ್ಲ. 2500 ವರ್ಷಗಳ ಹಿಂದೆ ಶೋಷಿತ ಸಮುದಾಯಗಳು ಅನುಭವಿಸಿದ್ದ ಸಮಸ್ಯೆಯನ್ನು ಸ್ಮರಿಸುವ ದಿನವಾಗಿದೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಬೌದ್ಧ ಮಹಾ ಸಮ್ಮೇಳನ ಭಾಗವಹಿಸಿ ಅವರು ಮಾತನಾಡಿದರು. 1924 ರಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಬಹಿಷ್ಕೃತ ಹಿತಕಾರಿಣಿ ಸಭೆ ಕಟ್ಟಿದ್ದರು. ಆ ಮೂಲಕ ಶೋಷಣೆ, ವಂಚನೆ, ಸಾಮಾಜಿಕ, ಅಸಮಾನತೆ ಒಳಗಾದವರ ಪರವಾಗಿ ಎಲ್ಲರೂ ಸೇರಿ ರಾಷ್ಟ್ರವ್ಯಾಪಿ ಕೆಲಸ ಮಾಡಲು ಪ್ರೇರೇಪಿಸಿದರು. ಇದೇ ಮಾದರಿಯಲ್ಲಿ ಪ್ರಜಾಪ್ರಭುತ್ವ ಉಳಿವಿಗಾಗಿ ಯಾವ ಮುಲಾಜಿಗೂ ಒಳಗಾಗದೆ ಇಂದು ರಾಜ್ಯ ರಾಜಕೀಯ ಬೇರೆ ದಿಕ್ಕಿನತ್ತ ಸಾಗಿದೆ ಎಂದರು. 'ಶಿಕ್ಷಣ, ಸಂಘಟನೆ, ಹೋರಾಟ' ಸ್ಲೋಗನ್ ನನ್ನು 1924 ರಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಕೊಟ್ಟರು. ಅದರೊಂದಿಗೆ ತಮ್ಮ



ಬದುಕನ್ನು ಕಟ್ಟಿಕೊಳ್ಳಲು ಸಾರಿದರು. ಅದರೆ 1925 ರಲ್ಲಿ ಆರ್‌ಎಸ್‌ಎಸ್ ಅಸ್ತಿತ್ವಕ್ಕೆ ಬಂದು ಮನುವಾದದ ಮನಸ್ಥಿತಿಯಾದ ಶ್ರೇಣೀಕೃತ ಬದುಕನ್ನು ಜೀವಂತವಾಗಿಡುವತ್ತ ತಮ್ಮ ಚಿತ್ತ ನೆಟ್ಟರು. ಬಾಬಾ ಸಾಹೇಬ್ ಅಂಬೇಡ್ಕರ್ ನಮ್ಮ ವಿಮೋಚನೆಗಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟರು. ತಮ್ಮ ವಿದ್ಯಾರ್ಜನೆ, ಬುದ್ಧಿ ಶಕ್ತಿಗಳ ಮೂಲಕ ಪ್ರಪಂಚದಲ್ಲೇ ಶ್ರೇಷ್ಠ ಸಂವಿಧಾನವನ್ನು ಭಾರತೀಯರಿಗೆ ನೀಡುವ ಮೂಲಕ ತುಳಿತಕ್ಕೊಳಗಾದ ವರ್ಗಗಳ ಮೇಲೆತ್ತಲು ಶ್ರಮಿಸಿದರು. ಅಮೇರಿಕಾ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ಸಹಾ ಭಾರತ ಸಂವಿಧಾನ ಶ್ರೇಷ್ಠ ಸಂವಿಧಾನ ಎಂದು ಹೇಳಿದ್ದಾರೆಂದು ಶ್ಲಾಘಿಸಿದರು.

ಭಾರತ ದೇಶದಲ್ಲಿ ಎರಡು ಸ್ವಾತಂತ್ರ್ಯವನ್ನು ನೋಡಬಹುದು. ಒಂದು ಕೋರೆಂಗಾವ್ ಯುದ್ಧ, ಮತ್ತೊಂದು 1956 ಅಕ್ಟೋಬರ್ 14 ರಂದು ಲಕ್ಷಾಂತರ ಜನ ಅನುಯಾಯಿಗಳ ಜೊತೆ ಬಾಬಾ ಸಾಹೇಬರು ಬೌದ್ಧ ಧಮ್ಮವನ್ನು ಸೇರಿದ ದಿನ. ಇವು ಸ್ವಾತಂತ್ರ್ಯ ಚಳುವಳಿ ಇದ್ದಹಾಗೆ. ಇವುಗಳನ್ನು ಮನನ ಮಾಡಿಕೊಂಡು ದಲಿತ ವರ್ಗಗಳು ಸಂಘಟಿತರಾಗಬೇಕು. ವೈಜ್ಞಾನಿಕವಾಗಿ ಚಿಂತನೆ ಮಾಡಿ, ಬಾಬಾ ಸಾಹೇಬರು ಹಾಕಿಕೊಟ್ಟ ದಾರಿಯಲ್ಲಿ ನಡೆಯಬೇಕು. ಇಲ್ಲವಾದಲ್ಲಿ ಮರಳಿ ವರ್ಣಾಶ್ರಮ ವ್ಯವಸ್ಥೆಗೆ ಹೋಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಕ್ಕಳಲ್ಲಿ ಬುದ್ಧನ ಸಂದೇಶ ಬಿತ್ತಬೇಕು ಸಚಿವ ಸತೀಶ್ ಜಾರಕಿಹೊಳಿ ಸಲಹೆ

ಮೈಸೂರು, ಅ.15(ವಿವಿಹೆಚ್)– ಭಾರತದಲ್ಲಿ ಬೌದ್ಧಧಮ್ಮ ವಿಸ್ತಾರವಾಗಬೇಕಾದರೆ, ಭಗವಾನ್ ಬುದ್ಧರ ಮತ್ತು ಡಾ.ಬಿ. ಆರ್. ಅಂಬೇಡ್ಕರ್ ವಿಚಾರಗಳನ್ನು ಮಕ್ಕಳಿಗೆ, ಮಹಿಳೆಯರಿಗೆ ತಿಳಿಸುವ ಕಾರ್ಯಕ್ರಮಗಳನ್ನು ರೂಪಿಸುವಂತೆ



ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕರೆ ನೀಡಿದರು.

ಬೌದ್ಧ ಮಹಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ಬುದ್ಧರ ವಿಚಾರಗಳನ್ನು ಬಿತ್ತರಿಸುವ ಉದ್ದೇಶದಿಂದ ಇಷ್ಟು ದೊಡ್ಡ ಮಟ್ಟದಲ್ಲಿ ಬೌದ್ಧ ಸಮ್ಮೇಳನವನ್ನು ಆಯೋಜಿಸಲಾಗಿದೆ. ಬೌದ್ಧ ಧಮ್ಮ ನಮ್ಮ ದೇಶದಲ್ಲಿ ಬೆಳೆಯಬೇಕಿತ್ತು. ಆದರೆ ಬೇರೆ ದೇಶದಲ್ಲಿ ಬೆಳೆದಿದೆ. ಇಲ್ಲಿ ಬೆಳೆಯಲಿಕ್ಕೆ ಮನುವಾದಿಗಳು ಅವಕಾಶ ಕೊಡಲಿಲ್ಲ. ಹಾಗಾಗಿ ಬೌದ್ಧ ಧಮ್ಮದ ಬಗ್ಗೆ ಮತ್ತೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮೂಲಕ ತಿಳಿಸಬೇಕಿದೆ ಎಂದರು.


ಈ ಸಮ್ಮೇಳನ ಹೀಗೆ ಮುಂದುವರಿಯಬೇಕು. ಮುಂದಿನ ಬಾರಿ ನಿಮ್ಮ ಮಕ್ಕಳನ್ನು ಹೆಚ್ಚು ಹೆಚ್ಚು ಇಂತಹ ಕಾರ್ಯಕ್ರಮಗಳಿಗೆ ಕರೆತಂದು ನಮ್ಮ ಮೂಲ ಇತಿಹಾಸದ ಬಗ್ಗೆ ತಿಳಿಸಬೇಕು. ನಿಮ್ಮ ಮಕ್ಕಳಿಗೆ ಬುದ್ಧನ ಸಂದೇಶಗಳನ್ನು ಬಿತ್ತಬೇಕು. ಆಗ ಮಾತ್ರ ಬೌದ್ಧ ಧಮ್ಮವನ್ನು ಬೆಳೆಸಬಹುದು ಎಂದು ಸಲಹೆ ನೀಡಿದರು.

ಡಾ.ಬಾಬಾ ಸಾಹೇಬರ ಸಂವಿಧಾನವನ್ನು ಬದಲಾಯಿಸುವ ಪ್ರಯತ್ನ ನಡೆಯುತ್ತಿದೆ. ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಒಗ್ಗಟ್ಟಾಗಿ ನಿಲ್ಲಬೇಕು. ಇಲ್ಲವಾದಲ್ಲಿ ಮತ್ತೆ ಮನುವಾದಿಗಳ ಕೈಗೆ ದೇಶ ಹೋಗುತ್ತದೆ ಎಂದು ಎಚ್ಚರಿಸಿದರಲ್ಲದೆ ಅಂಬೇಡ್ಕರ್ ಅಭಿಮಾನಿಗಳಾಗಿ ಅವರ ತತ್ವ ಆದರ್ಶಗಳ ಪಾಲಿಸುವ ಜೊತೆಗೆ ಬೇರೆ ಸಮುದಾಯದ ಜನರಿಗೆ ಮನವರಿಕೆ ಮಾಡಿಕೊಡಬೇಕು. ಬುದ್ಧ, ಬಾಬಾ ಸಾಹೇಬರು ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು ಎಂದು ಪ್ರತಿಪಾದಿಸಿದವರು. ಆ ದಿಕ್ಕಿನಲ್ಲಿ ನಾವೆಲ್ಲಾ ಸಾಗಬೇಕು. ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಇಂತಹ ಕಾರ್ಯಕ್ರಮ ಮಾಡುವ ಮೂಲಕ ಬುದ್ಧ, ಅಂಬೇಡ್ಕರ್ ವಿಚಾರಗಳ ಬಿತ್ತುವ ಕೆಲಸ ಮಾಡಿ ಎಂದರು.

ಅಧಿಕಾರ ಹಂಚಿಕೆ ಹೇಳಿಕೆಗಳಿಂದ ಪಕ್ಷಕ್ಕೆ ತೀವ್ರ ಹಾನಿ

ಬೆಂಗಳೂರು, ಅ.15– ಮುಖ್ಯಮಂತ್ರಿ ಆಗಲು ಹೈಕಮಾಂಡ್ ಬೆಂಬಲ ಬೇಕು ಅಥವಾ ಶಾಸಕರ ಬೆಂಬಲ ಬೇಕೆನ್ನುವ ಹೇಳಿಕೆ ಸೇರಿ ಅಧಿಕಾರ ಹಂಚಿಕೆ ಮತ್ತಿತರ ಹೇಳಿಕೆಗಳಿಂದ ಪಕ್ಷಕ್ಕೆ ತೀವ್ರ ಹಾನಿ ಆಗುತ್ತದೆ. ನಮ್ಮ ನಾಯಕರಿಗೆ ಇದು ಯಾಕೆ ಅರ್ಥವಾಗುತ್ತಿಲ್ಲವೋ ಗೊತ್ತಿಲ್ಲ. ಇದಕ್ಕೆ ಹೈಕಮಾಂಡ್ ಬ್ರೇಕ್ ಹಾಕಬೇಕು, ನಾವೂ ಕೂಡ ಬ್ರೇಕ್ ಹಾಕಿಕೊಳ್ಳಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬೇಸರ ವ್ಯಕ್ತಪಡಿಸಿದರು.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪಕ್ಷಕ್ಕೆ 138 ಸ್ಥಾನಗಳ ಭರ್ಜರಿ ಬಹುಮತದೊಂದಿಗೆ ಜನ ಅಧಿಕಾರ ನೀಡಿದ್ದಾರೆ. ಪ್ರಣಾಳಿಕೆಯಲ್ಲಿನ 5 ಗ್ಯಾರಂಟಿ ಈಡೇರಿಸಿದ್ದೇವೆ. ಉತ್ತಮ ಆಡಳಿತ ನೀಡುತ್ತಿದ್ದೇವೆ. ಹೀಗಿರುವಾಗ ಶುರುವಿನಿಂದಲೇ 2 ವರ್ಷ ಅವರು, 2 ವರ್ಷ ಇವರು ಮುಖ್ಯಮಂತ್ರಿ ಎನ್ನುವುದು ಸೇರಿದಂತೆ ಅನಗತ್ಯ ಹೇಳಿಕೆಗಳನ್ನು ನೀಡಿ ಪಕ್ಷಕ್ಕೆ ತೀವ್ರ ಹಾನಿ ಉಂಟು ಮಾಡಿದ್ದಾರೆ ಎಂದು ಕಿಡಿ ಕಾರಿದರು.



ಮೂರು ಜನ ಉಪ ಮುಖ್ಯಮಂತ್ರಿ ಎಂದು ಬಹಿರಂಗವಾಗಿ ಯಾಕೆ ಹೇಳಬೇಕು. ಇದಲ್ಲದೆ ಕೆ.ಎನ್.ರಾಜಣ್ಣ ಅವರು ವಿಧಾನಸಭೆಯಲ್ಲಿ ನೀಡಿದ ನವೆಂಬರ್ ಕ್ರಾಂತಿ ಹೇಳಿಕೆ. ಇದೀಗ ಮುಖ್ಯಮಂತ್ರಿ ಆಯ್ಕೆ ಅಂತಿಮ ತೀರ್ಮಾನ ಹೈಕಮಾಂಡ್ (ಡಿ.ಕೆ.ಶಿವಕುಮಾರ್ ಹೇಳಿದ್ದು) ಮಾಡುತ್ತದೆ ಎನ್ನುವುದು. ಅದಕ್ಕೆ ಪ್ರತಿಯಾಗಿ ಶಾಸಕರ ಸಂಖ್ಯೆಯೇ (ಸಿದ್ದರಾಮಯ್ಯ ಹೇಳಿದ್ದು) ಅಂತಿಮ ಎನ್ನುವುದರಿಂದ ಪಕ್ಷಕ್ಕೆ ಹಾನಿ ಯಾಗುತ್ತದೆ ಎಂದು ರಾಮಲಿಂಗಾರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದರು. ಡಿ.ಕೆ.ಶಿವಕುಮಾರ್ ಅವರ ಪರ ರಾಮನಗರ, ಕುಣಿಗಲ್, ಚನ್ನಗಿರಿ, ಮಾಗಡಿ ಶಾಸಕರು ಮಾತನಾಡುತ್ತಾರೆ. ಸಿದ್ದರಾಮಯ್ಯ ಅವರ ಪರ ಅವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿದ್ದಾರೆ. ಜತೆಗೆ ಆರ್.ವಿ. ದೇಶಪಾಂಡೆ, ರಾಯರೆಡ್ಡಿ, ಬಿ.ಆರ್.ಪಾಟೀಲ್ ಹೇಳಿಕೆಗಳೆಲ್ಲವೂ ಬಹಿರಂಗವಾಗಿ ಮಾತನಾಡುವ ಅಗತ್ಯವಿಲ್ಲ ಎಂದು ಹೇಳಿದರು. ಇವುಗಳಿಂದ ಪಕ್ಷಕ್ಕೆ ಹಾನಿಯಾಗುತ್ತಿದೆ ಎಂಬುದನ್ನು ನಮ್ಮ ನಾಯಕರು ಯಾಕೆ ಅರ್ಥ ಮಾಡಿಕೊಳ್ಳುತ್ತಿಲ್ಲ. ಹೈಕಮಾಂಡ್ ಅನೇಕ ಸಲ ಹೇಳಿದೆ. ಏಳೆಂಟು ಸಲ ಶಾಸಕರಾಗಿ ಸಚಿವರಾದವರೂ ಅರ್ಥ ಮಾಡಿಕೊಳ್ಳುತ್ತಿಲ್ಲ. ಇದು ನಮ್ಮ ದುರಾದೃಷ್ಟ ಎಂದರು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ನಿಮಗೆ ಮರ್ಯಾದೆ ಇಲ್ದೇ ಇರೋ ಕಡೆ ಯಾವತ್ತೂ ಹೋಗಬೇಡಿ!

ಗಂಡ : ಅಂದ್ರೆ ನಾನು ಮನೆಗೆ ಬರೋದು ಬೇಡ ಅಂಥಾನಾ....?

ಮೈಸೂರು ಮಿತ್ರ

ಗುರುವಾರ, 16 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಹಣತೆ ಹಚ್ಚುತ್ತೇನೆ. ನಾನೂ ಆ ಕತ್ತಲನ್ನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ, ಲೆಕ್ಕವೇ ಇರದ ದೀಪಾವಳಿಯ ಹಡಗುಗಳೇ ಇದರಲ್ಲಿ ಮುಳುಗಿ ಹೋಗಿರುವಾಗ ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ. – ಜಿ.ಎಸ್. ಶಿವರುದ್ರಪ್ಪ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲೋಕ ತಿಳೀಬೇಕು ಲೆಕ್ಕ ಕಲೀಬೇಕು.

ನಿಮ್ಮ ಪತ್ರಗಳು

ದೀಪಾವಳಿ ಹಬ್ಬ: ಪಟಾಕಿ ಸಿಡಿಸುವಾಗ ಇರಲಿ ಮುನ್ನೆಚ್ಚರ



ಮಾನ್ಯರೆ,

ಇನ್ನೇನು ಬೆಳಕಿನ ಹಬ್ಬ ದೀಪಾವಳಿ ಬರುತ್ತಿದೆ. ದೀಪ ಹಚ್ಚುವುದು, ಪಟಾಕಿ ಸಿಡಿಸುವುದು ಈ ಹಬ್ಬದ ವಿಶೇಷ. ಆದರೆ ಪಟಾಕಿ ಸಿಡಿಸುವಾಗ ಕೆಲವೊಂದು ಮುನ್ನೆಚ್ಚರಿಕೆ ವಹಿಸುವುದು ಸೂಕ್ತ. ಅದು ಇಲ್ಲಿದೆ.

* ಆದಷ್ಟೂ ಕಡಿಮೆ ತೀವ್ರತೆಯ ಪಟಾಕಿ ನಿಮ್ಮ ಆಯ್ಕೆ ಆಗಿರಲಿ. 80 ಡೆಸಿಬೆಲ್‌ಗಿಂತ ಹೆಚ್ಚು ಶಬ್ದ ಕಿವಿಗಳಿಗೆ ಹಾನಿಕರ. ಕೆಲವೊಂದು ಸಲ ಶಾಶ್ವತ ಕಿವುಡು ಮಾಡಲೂ ಬಹುದು.

* ಮಕ್ಕಳು ಪಟಾಕಿ ಸಿಡಿಸುವಾಗ ಹಿರಿಯರು ಅವರ ಸಮ್ಮುಖದಲ್ಲಿಯೇ ಇದ್ದು ನಿಗಾ ವಹಿಸಬೇಕು. * ಪಟಾಕಿ ಸಿಡಿಸುವ ಮುನ್ನ ಒಂದು ಬಕೆಟ್‌ನಲ್ಲಿ ನೀರು ಇರಲಿ. ಅಗತ್ಯವಿದ್ದಾಗ ಬೇಗನೆ ಬೆಂಕಿ ನಂದಿಸಲು ಸಾಧ್ಯ. * ಕಣ್ಣುಗಳಿಗೆ ರಕ್ಷಣೆಯಾಗಿ ಕನ್ನಡಕ ಧರಿಸಿ ಪಟಾಕಿ ಸಿಡಿಸಿ. ಕಿವಿಗಳಿಗೂ ಹತ್ತಿಯಿಂದ ರಕ್ಷಣೆ ಇದ್ದರೆ ಉತ್ತಮ. * ಪಟಾಕಿ ಸಿಡಿಸುವಾಗ ನೀವು ಧರಿಸಿರುವ ಉಡುಪನ್ನು ಸಂರಕ್ಷಿಸಿ ಬೆಂಕಿ ತಾಗದಂತೆ ಜಾಗ್ರತೆ ವಹಿಸಿ. * ರಾತ್ರಿ ಹತ್ತು ಗಂಟೆಯ ಒಳಗೇ ಪಟಾಕಿ ಸಿಡಿಸಿ. * ಪಟಾಕಿ ಸಿಡಿಸುವಾಗ ವೃದ್ಧರು, ರೋಗಿಗಳು, ಹಸುಳೆಗಳು ಮತ್ತು ಚಿಕ್ಕ ಮಕ್ಕಳ ಮೇಲೆ ಆಗುವ ದುಷ್ಪರಿಣಾಮದ ಬಗ್ಗೆ ಕಾಳಜಿ ಇರಲಿ.

* ರಸ್ತೆಯಲ್ಲಿ ಪಾದಚಾರಿಗಳು, ವಾಹನ ಸವಾರರ ಸುರಕ್ಷತೆ ಬಗ್ಗೆ ಗಮನ ಹರಿಸಿ.

* ಪಶು ಪಕ್ಷಿಗಳಿಗೆ ಪಟಾಕಿಗಳಿಂದ ಹೆಚ್ಚು ಉಪಟಳ ಆಗದಂತೆ ಜಾಗ್ರತೆ ವಹಿಸಿ.

* ತುರ್ತು ಪರಿಸ್ಥಿತಿಯಲ್ಲಿ ಸುಟ್ಟ ಗಾಯಗಳಿಗೆ ಮತ್ತು ಕಣ್ಣುಗಳ ಗಾಯಗಳಿಗೆ ಚಿಕಿತ್ಸೆ ದೊರೆಯುವ ಆಸ್ಪತ್ರೆಗಳ ಮಾಹಿತಿ, ಫೋನ್ ನಂಬರ್ ಗೊತ್ತಿರಲಿ. ಕೆಲವು ಆಸ್ಪತ್ರೆಗಳು ದೀಪಾವಳಿ ಹಬ್ಬದಲ್ಲಿ ತುರ್ತು ಚಿಕಿತ್ಸೆ ನೀಡಲು ಸದಾ ಸನ್ನದ್ಧ ಸ್ಥಿತಿಯಲ್ಲಿ ಇರುತ್ತವೆ.

* ಪಟಾಕಿ ಖರೀದಿಸಿ ಮನೆಯೊಳಗೆ ಸುರಕ್ಷಿತ ಸ್ಥಳದಲ್ಲಿ ಸಂಗ್ರಹಿಸಿ ಇಡಿ.

* ಪಟಾಕಿ ಸಿಡಿಸುವುದು ನಮ್ಮ ಪರಿಸರಕ್ಕೆ ಹಾನಿಕರ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು, ಪರಿಸರ ಮಾಲಿನ್ಯವನ್ನು ಆದಷ್ಟೂ ಕಡಿಮೆ ಮಾಡಲು ಪ್ರಯತ್ನಿಸಿ. ದೀಪಾವಳಿ ಎಲ್ಲರಿಗೂ ಸುರಕ್ಷಿತವಾಗಿರಲಿ, ಸಂತಸ, ಸಂಭ್ರಮ ತರಲಿ.

–ಲಕ್ಷ್ಮಣ್ ಗೋರ್ಲಕಟ್ಟೆ, ಬೋಗಾದಿ ಮೈಸೂರು.

ರೌಡಿ ಪ್ರತಿಬಂಧಕ ದಳ ಮತ್ತೆ ಅಸ್ತಿತ್ವಕ್ಕೆ ಶ್ಲಾಘನೀಯ

ಮಾನ್ಯರೆ,

1993–94ರಲ್ಲಿ ಮೈಸೂರು ಆಯುಕ್ತರಾಗಿದ್ದ ಕಸ್ತೂರಿ ರಂಗನ್ ಅವರ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ರೌಡಿ ಪ್ರತಿಬಂಧಕ ದಳ, 1999ರ ನಂತರ ನಿಷ್ಕ್ರಿಯಗೊಂಡಿದ್ದು ಸರಿಯಷ್ಟೆ, ಈಗಿನ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಮತ್ತೆ ರೌಡಿ ನಿಗ್ರಹ ದಳವನ್ನು ಅಸ್ತಿತ್ವಕ್ಕೆ ತಂದಿರುವುದು ತುಂಬಾ ಶ್ಲಾಘನೀಯ. ಮೈಸೂರಿನಲ್ಲಿ ಇತ್ತೀಚಿನ ದಿನಗಳಲ್ಲಿ ರೌಡಿಗಳ ಅಟ್ಟಹಾಸ, ಕೊಲೆ, ಸುಲಿಗೆ, ಬೆದರಿಕೆ, ಡಕಾಯಿತಿ, ಅತ್ಯಾಚಾರ, ರಿಯಲ್ ಎಸ್ಟೇಟ್ ಮಾಫಿಯಾ ದಂಧೆಯಿಂದ ಸಾಮಾನ್ಯ ಜನತೆ ಪರಿತಪಿಸಿ ತತ್ತರಿಸಿ ಹೋಗಿದ್ದಾರೆ. ರೌಡಿಗಳ ಅಟ್ಟಹಾಸವನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ರೌಡಿ ಪ್ರತಿಬಂಧಕ ದಳ ಆದಷ್ಟು ಬೇಗ ಕಾರ್ಯಪ್ರವೃತ್ತರಾಗಬೇಕು. ರೌಡಿ ನಿಗ್ರಹ ದಳಕ್ಕೆ ಹಿರಿಯ ಅಧಿಕಾರಿಗಳು ಪ್ರೋತ್ಸಾಹ ಹಾಗೂ ಅಭಯವನ್ನು ನೀಡುವುದು ಅತ್ಯಗತ್ಯ. ಯಾವುದೇ ರಾಜಕೀಯ ಪಕ್ಷಗಳ ಜನಪ್ರತಿನಿಧಿಗಳ ಹಸ್ತಕ್ಷೇಪ ಇರಕೂಡದು. ರೌಡಿ ಪ್ರತಿಬಂಧಕ ದಳಕ್ಕೆ ದಕ್ಷ ಅಧಿಕಾರಿಗಳನ್ನು ನಿಯೋಜಿಸಿ ಸಂಪೂರ್ಣ ಅಧಿಕಾರವನ್ನು ನೀಡುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಪತ್ರ ಬರೆಯಿರಿ ಪ್ಲೀಸ್....!

ಮಾನ್ಯರೆ,

ಪ್ರಿಯ ಪ್ರಿಯಾಂಕ್ ಖರ್ಗೆಯವರೇ....

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ–ಮದ್ಯಪಾನ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಸಾರ್ವಜನಿಕರ ಆರೋಗ್ಯಕ್ಕೆ ತೊಂದರೆಯಾಗುತ್ತಿದೆ. ಸಾರ್ವಜನಿಕ ಶೌಚಾಲಯಗಳ ಕೊರತೆಯಿಂದಾಗಿ ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜಿಸುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಕಸ ಬಿಸಾಕುವವರ ಸಂಖ್ಯೆಯೂ ಹೆಚ್ಚುತ್ತಿದೆ. ಇದರಿಂದ ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ನಿಮ್ಮ ಪತ್ರಕ್ಕೆ ಮುಖ್ಯಮಂತ್ರಿಗಳು ತಕ್ಷಣ ಪ್ರತಿಕ್ರಿಯೆ ನೀಡುತ್ತಾರೆ. ಕ್ರಮ ಕೈಗೊಳ್ಳುತ್ತಾರೆ. ಹಾಗಾಗಿ ಈ ಕೂಡಲೇ ತಾವು ಈ ವಿಚಾರವಾಗಿ ಮುಖ್ಯಮಂತ್ರಿಗಳಿಗೊಂದು ಈ ಮೂಲಕ ಪತ್ರ ಬರೆದು ಸಾರ್ವಜನಿಕರ ಋಣ ತೀರಿಸಬೇಕಾಗಿ ವಿನಂತಿ!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಲೈಂಗಿಕ ಶಿಕ್ಷಣ : ಮಕ್ಕಳ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲವೇ?

ಮಾನ್ಯರೆ,

ಇತ್ತೀಚೆಗೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಅಲೋಕ ಆರಾಧೆ ಅವರು ಲೈಂಗಿಕ ಶಿಕ್ಷಣವನ್ನು ಮಕ್ಕಳಿಗೆ ಪ್ರಾಥಮಿಕ ಶಾಲಾ ಹಂತದಲ್ಲೇ ಹೇಳಿಕೊಡುವಂತಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಲೈಂಗಿಕ ಶಿಕ್ಷಣವನ್ನು ಬೋಧಿಸುವ ಅವಶ್ಯಕತೆ ಇದೆಯೇ? ಇದು ಮಕ್ಕಳ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲವೇ? ಸಾಮಾನ್ಯವಾಗಿ ಮಕ್ಕಳಿಗೆ ಕಲಿಕಾ ಹಂತ ಇರುವುದೇ ಪ್ರಾಥಮಿಕ ಶಾಲಾ ಹಂತದಲ್ಲಿ. ಇಲ್ಲಿ ಲೈಂಗಿಕ ಶಿಕ್ಷಣ ಹೇಳಿಕೊಟ್ಟರೆ ಮಕ್ಕಳು ಕುತೂಹಲಕ್ಕಾಗಿ ಅಡ್ಡ ದಾರಿ ಹಿಡಿದರೆ ಅದಕ್ಕೆ ಹೊಣೆಗಾರರು ಯಾರು? ಕೆಲವು ಮಕ್ಕಳು ಪಾಠ ಪ್ರವಚನಗಳಿಗಿಂತ ಲೈಂಗಿಕ ಶಿಕ್ಷಣದ ಬಗ್ಗೆಯೇ ಹೆಚ್ಚು ಆಕರ್ಷಣೆಗೊಳಗಾಗಿ ಓದಿನಲ್ಲಿ ಹಿಂದೆ ಬೀಳುವುದಿಲ್ಲವೇ? ಖ್ಯಾತ ಮನೋವಿಜ್ಞಾನಿಗಳು ಹೇಳುವಂತೆ ಮಕ್ಕಳಿಗೆ 10 ವರ್ಷಗಳೊಳಗೆ ನಾವು ಕಲಿಸುವ ಪಾಠವೇ ಅತಿಮುಖ್ಯವಾದದ್ದು. ಮಕ್ಕಳ ಮನಸು ಹಸಿಯಾಗಿದ್ದು ಒಳ್ಳೆಯ ಶಿಕ್ಷಣ ದೊರೆತರೆ ಮಾತ್ರ ಅವರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯ ಎನ್ನುತ್ತಾರೆ. ಲೈಂಗಿಕ ಶಿಕ್ಷಣವನ್ನು ಅವರ ವಯಸ್ಸಿಗೆ ಅನುಗುಣವಾಗಿ ಅವರೇ ಕಲಿಯಲು ಆಸಕ್ತಿ ಹೊಂದುತ್ತಾರೆ. ಈ ಬಗ್ಗೆ ಶಿಕ್ಷಣ ತಜ್ಞರು ಮತ್ತು ಮನೋವಿಜ್ಞಾನಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಮೈಸೂರು ಆಯ್ತು ಕೊಳೆತ-ಊರು...?!



ಮೈಸೂರಲ್ಲಿ ಕಳೆದ ವಾರ ಮೂರೇ ದಿನದಲ್ಲಿ ಎರಡು ಕೊಲೆಗಳಾಗಿವೆ. ಹಾಡಹಗಲಿನಲ್ಲೇ ಒಂದು ಕೊಲೆ ನಡೆದಿದ್ದರೆ, ಮತ್ತೊಂದು ಪ್ರಕರಣದಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಬಳಿಕ ಹತ್ಯೆಗೈಯ್ಯಲಾಗಿದೆ.

ದುರಂತದ ಸಂಗತಿ ಎಂದರೆ, ಈ ಎರಡೂ ಕೊಲೆಗಳು ನಗರದ ಹೃದಯ ಭಾಗದಲ್ಲಿ ನಡೆದಿವೆ. ಶಾಂತವಾಗಿದ್ದ ಮೈಸೂರು ಈಗ ಬೆಚ್ಚಿಬಿದ್ದಿದೆ. ಅಪರಾಧಿಗಳು ರಾಜಾರೋಷವಾಗಿ ತಿರುಗುತ್ತಿದ್ದಾರೆಯೇ? ಎನ್ನುವ ಆತಂಕ ಮೈಸೂರಿಗರಲ್ಲಿ ಉಂಟಾಗಿದೆ.

ವಸುಮತಿ ಹತ್ಯೆಯಿಂದ ಹಿಡಿದು ಆರ್.ಎನ್. ಕುಲಕರ್ಣಿ ಪ್ರಕರಣದವರೆಗೆ ; ಚಾಮುಂಡಿಬೆಟ್ಟದ ತಪ್ಪಲಲ್ಲಿನ ಸಾಮೂಹಿಕ ಅತ್ಯಾಚಾರದಿಂದ ಇತ್ತೀಚೆಗೆ (ಅ.9) ಬೆಳಕಿಗೆ ಬಂದ ಬಾಲಕಿಯ ಮೇಲಿನ ಭಯಾನಕ ಅತ್ಯಾಚಾರ ಹಾಗೂ ಹತ್ಯೆಯುವರೆಗಿನ ಪರಿಸ್ಥಿತಿ ಅವಲೋಕಿಸಿದರೆ ಮೈಸೂರು, ಕಾನೂನುಬಾಹಿರ ಚಟುವಟಿಕೆಗಳ ಏರಿಕೆಯಿಂದ ಆತಂಕಕಾರಿ ವಾತಾವರಣಕ್ಕೆ ಸಾಕ್ಷಿಯಾಗುತ್ತಿದೆ.

ಸದರಿ ಪ್ರಕರಣಗಳಲ್ಲಿ ಅನೇಕ ಅಪರಾಧಿಗಳು ತಲೆಮರೆಸಿ ಕೊಂಡಿದ್ದರೆ, ಕೆಲವಕ್ಕೆ ಪೊಲೀಸರು ಅಂತ್ಯ ಹಾಡಿದ್ದಾರೆ. ಅಲ್ಲದೆ ಬಂಧನವಾದ ಪ್ರಕರಣಗಳಲ್ಲಿ ವಿಚಾರಣೆ ಇನ್ನೂ ನಡೆಯುತ್ತಲೇ ಇದೆ. ಅಪರಾಧಿಗಳಿಗೆ ಇನ್ನೂ ಯಾವುದೇ ಶಿಕ್ಷೆಯಾಗಿಲ್ಲ.

ಒಂದು ಕಾಲದಲ್ಲಿ ಸುರಕ್ಷಿತವಾಗಿದ್ದ ನಮ್ಮ ನಗರದ ಬೀದಿಗಳಲ್ಲೀಗ ಗೂಂಡಾಗಳು ಯಾವುದೇ ಅಳುಕಿಲ್ಲದೇ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಇಂತಹ ದುಸ್ಥಿತಿಗೆ ಕಾರಣವಾದರೂ ಏನು?

ಇದಕ್ಕೆ ಕಾರಣ, ನ್ಯಾಯ ವಿಳಂಬವಾದಾಗ, ಸಮಾಜಘಾತುಕರಿಗೆ ಧೈರ್ಯ ಹೆಚ್ಚಾಗುತ್ತದೆ. ಕಾನೂನು ನಿದ್ರೆ ಹೋದರೆ, ಅಪರಾಧಿಗಳು ಎದ್ದು ಮುಕ್ತವಾಗಿ ಸಂಚರಿಸುತ್ತಾರೆ.

1969ರಲ್ಲಿ ಸ್ಟ್ಯಾನ್‌ಫೋರ್ಡ್ ಮನಶಾಸ್ತ್ರಜ್ಞ ಫಿಲಿಪ್ ಜಿಂಬಾರ್ಡೋ ಅವರು ಒಂದು ಕಾರು ಪ್ರಯೋಗವನ್ನು ನಡೆಸಿದರು. ಇದು ಕಾನೂನು ಕಣ್ಣು ಮುಚ್ಚಿ ಕುಳಿತಾಗ ಏನಾಗುತ್ತದೆ ಎಂಬುದನ್ನು ಸಾರಿ ಸಾರಿ ಹೇಳುತ್ತದೆ.

ಜಿಂಬಾರ್ಡೋ ಒಂದೇ ರೀತಿಯ ಎರಡು ಕಾರುಗಳನ್ನು ಪ್ರತ್ಯೇಕ ಸ್ಥಳಗಳಲ್ಲಿ ನಿಲ್ಲಿಸಿ ಹೋಗಿದ್ದರು. ಒಂದನ್ನು ನ್ಯೂಯಾರ್ಕ್‌ನ ಅಹಿತಕರ ಘಟನೆಗಳಿಗೆ ಹೆಸರಾದ ಪ್ರದೇಶದಲ್ಲಿ ಬಿಟ್ಟರೆ, ಮತ್ತೊಂದನ್ನು ಕ್ಯಾಲಿಫೋರ್ನಿಯಾದ ಶ್ರೀಮಂತ ಜನರಿರುವ ಪ್ರದೇಶದಲ್ಲಿ ನಿಲ್ಲಿಸಿದ್ದರು.

ನ್ಯೂಯಾರ್ಕ್‌ನಲ್ಲಿ ನಿಲ್ಲಿಸಿದ್ದ ಕಾರನ್ನು ಕೆಲವೇ ನಿಮಿಷಗಳಲ್ಲಿ ಧ್ವಂಸ ಮಾಡಲಾಯಿತು. ಆದರೆ ಕ್ಯಾಲಿಫೋರ್ನಿಯಾದಲ್ಲಿ ನಿಲ್ಲಿಸಲಾಗಿದ್ದ ಕಾರು 7 ದಿನವಾದರೂ ಯಾವುದೇ ಹಾನಿಯಾಗದೇ ಹಾಗೇ ನಿಂತಿತ್ತು.

ಜಿಂಬಾರ್ಡೋ ಸ್ವತಃ ಅದನ್ನು ಒಮ್ಮೆಗೆ ಸುತ್ತಿಗೆಯಿಂದ ಬಡಿದು ಕಣ್ಣಿಗೆ ಕಾಣುವಂತೆ ಹಾನಿ ಉಂಟು ಮಾಡಿದ. ಆಗ ಕಾನೂನು ಏನೂ ಮಾಡಲಿಲ್ಲ.

ಪೊಲೀಸರ ಒಂದೇ ಒಂದು ಸಣ್ಣ ನಿರ್ಲಕ್ಷ್ಯ ಅವ್ಯವಸ್ಥೆಗೆ ನಾಂದಿ ಹಾಡಿತು. ಮರುದಿನ ಇತರರು ಸೇರಿಕೊಂಡು ಕಾರನ್ನು ಸಂಪೂರ್ಣ ನಾಶಪಡಿಸಿದರು.

ಈ ಪ್ರಯೋಗದಿಂದ ಒಂದು ಸಂದೇಶ ಸ್ಪಷ್ಟವಾಯಿತು; ಕಂಡೂ ನಿರ್ಲಕ್ಷ್ಯ ವಹಿಸಿದರೆ ಮುಂದೆ ಬಾರೀ ಅಪರಾಧಗಳಿಗೆ ಆಹ್ವಾನ ನೀಡಿದಂತೆಯೇ ಸರಿ.!

ತಪ್ಪು ಮಾಡಿದವರಿಗೆ ಶಿಕ್ಷೆಯಾಗದಿದ್ದಾಗ, ಯಾರು, ಯಾವ ತಪ್ಪು ಮಾಡಿದರೂ ಏನಾಗದು ಎಂಬ ಭಾವ ಸಮಾಜದಲ್ಲಿ ಮೂಡುತ್ತದೆ. ಇಂತಹ ಸನ್ನಿವೇಶ ದಿಂದ ದುಷ್ಕರ್ಮಿಗಳು ಹಾಗೂ ಅಪರಾಧ ಮನೋಭಾವವುಳ್ಳವರು ಧೈರ್ಯವಾಗಿ ಕುಕೃತ್ಯಗಳಲ್ಲಿ ತೊಡಗುತ್ತಾರೆ.

ಕಾನೂನು ತನ್ನ ಕರ್ತವ್ಯವನ್ನು ಮರೆತಾಗ, ಅಪರಾಧಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತದೆ. ಹೀಗಾಗಿ ಭಾರತದಲ್ಲಿ ಅಪರಾಧಿಗಳ ಸಂಖ್ಯೆ ಎಷ್ಟರ ಮಟ್ಟಿಗೆ ಹೆಚ್ಚಾಗಿದೆಯೆಂದರೆ, ***'ಒಂದು ಕಾಲದಲ್ಲಿ ಕಾನೂನು ಉಲ್ಲಂಘಿಸಿದ್ದವರೇ ಇಂದು ಕಾನೂನು ರಚಿಸುವ ಜನಪ್ರತಿನಿಧಿಗಳಾಗಿದ್ದಾರೆ!'***

ಯಾವುದೇ ಪೊಲೀಸ್ ವ್ಯವಸ್ಥೆಯು ಪ್ರತಿ ಅಪರಾಧ ಅಥವಾ ಅಪರಾಧಿಯನ್ನು ತಡೆಯಲು ಸಾಧ್ಯವಿಲ್ಲ ನಿಜ. ಆದರೆ.... ಪರಿಣಾಮಕಾರಿ ಹಾಗೂ ಪ್ರಾಮಾಣಿಕವಾಗಿ ಕಾನೂನು ಸುವ್ಯವಸ್ಥೆ ಕಾಪಾಡಲು ಮುಂದಾದರೆ, ಎಷ್ಟೋ ಕೃತ್ಯಗಳನ್ನು ತಡೆಗಟ್ಟಬಹುದು.

ದುರದೃಷ್ಟವಶಾತ್, ಇಂದು ಭಾರತದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ನಿಷ್ಕ್ರೀಯತೆ, ಜಾತಿ ರಾಜಕೀಯ, ನ್ಯಾಯಾಂಗದ ವಿಳಂಬ ಹಾಗೂ ರಾಜಕೀಯ ಹಸ್ತಕ್ಷೇಪವೆಂಬ ವಿಷಕಾರಿ ಅಂಶ ಮಿಶ್ರಣವಾಗಿದೆ.

ಪೊಲೀಸ್ ವ್ಯವಸ್ಥೆಯಲ್ಲಿ ಇಂದು ಸಾರ್ವಜನಿಕ ಸೇವೆ ಅತ್ಯಲ್ಪ. ಆದರೆ ವರ್ಗಾವಣೆ ಹಾಗೂ ಪ್ರತಿಫಲಾಪೇಕ್ಷೆಯೇ ಅಧಿಕ. **ನ್ಯಾಯಮೂರ್ತಿ ಆರ್. ದೇವದಾಸ್** ಅವರು ಉಲ್ಲೇಖಿಸಿದಂತೆ, **'ಹಣಕಾಸಿನ ಮಾನದಂಡದ ಪ್ರಕಾರವೇ ಉತ್ತಮ ಉನ್ನತ ಹುದ್ದೆಗಳಿಗೆ ನಿಯೋಜನೆ ನಡೆಯುತ್ತದೆ'**.

> **"ಇಂದು ಭಾರತದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ನಿಷ್ಕ್ರೀಯತೆ, ಜಾತಿ ರಾಜಕೀಯ, ನ್ಯಾಯಾಂಗದ ವಿಳಂಬ ಹಾಗೂ ರಾಜಕೀಯ ಹಸ್ತಕ್ಷೇಪವೆಂಬ ವಿಷಕಾರಿ ಅಂಶ ಮಿಶ್ರಣವಾಗಿದೆ.**
>
> **ಪ್ರತಿಯೊಂದು ಪಕ್ಷವೂ ಈಗ ಜಾತಿ, ಸಿದ್ಧಾಂತ ಅಥವಾ ತಮಗೆ ನಿಷ್ಠರಾದ ಪೊಲೀಸ್ ಅಧಿಕಾರಿಗಳನ್ನು ಹೊಂದಿವೆ.**
>
> **ಮೀಸಲಾತಿಯಂತೆ ಈಗ ನ್ಯಾಯವೂ ಜಾತಿ ಆಧಾರಿತವಾಗಿದೆ. ಸಂತ್ರಸ್ತರು ಹಾಗೂ ಆರೋಪಿಗಳು ಪೊಲೀಸ್ ಅಧಿಕಾರಿಯು ಯಾವ ಜಾತಿ ಅಥವಾ ಸಮುದಾಯಕ್ಕೆ ಸೇರಿದವರು ಎಂಬುದರ ಆಧಾರದಲ್ಲಿ ಎಫ್‌ಐಆರ್‌ಗಳನ್ನು ಮಾಡಲು ವಿಳಂಬ ಮಾಡಲಾಗುತ್ತದೆ. ಒಂದೊಮ್ಮೆ ಮಾಡಿದರೂ ದುರ್ಬಲಗೊಳಿಸಲಾಗುತ್ತದೆ.**
>
> **ಮೈಸೂರು ಈಗ 'ಪಿಂಚಣಿದಾರರ ಸ್ವರ್ಗ'ವಾಗಿ ಉಳಿದಿಲ್ಲ! ಕಾನೂನು ಉಲ್ಲಂಘಿಸುವವರ 'ಆಟದ ಮೈದಾನ'ವಾಗಿ ಪರಿವರ್ತನೆಯಾಗಿದ್ದು, ಇಂತಹ ಸ್ಥಿತಿ ರಾತ್ರೋರಾತ್ರಿ ಉದ್ಭವಿಸಿದ್ದಲ್ಲ. ಒಂದು ಎಫ್‌ಐಆರ್ ದಾಖಲಿಸುವುದನ್ನು ಕಡೆಗಣಿಸಿ ಕೈಬಿಟ್ಟಾಗ, ವಿಚಾರಣೆಯ ವಿಳಂಬ, ಜಾತಿ ಆಧಾರದಲ್ಲಿ ಮಣೆ ಹಾಕಿದಾಗ, ರಾಜಕಾರಣಿಗಳ ಒಂದು ಫೋನ್ ಕರೆ.... ಹೀಗೆ ಒಂದಾದ ಮೇಲೊಂದರಂತೆ ಸೇರುತ್ತಾ ಮೈಸೂರು ಇಂದಿನ ದುಸ್ಥಿತಿಗೆ ದೂಡಲ್ಪಟ್ಟಿದೆ.**
>
> **ಹೀಗಾಗಿಯೇ ಕಾನೂನು ಪಾಲಿಸುವ ಮೈಸೂರಿನ ನಾಗರಿಕರು ಭಯದಿಂದಲೇ ಬದುಕುತ್ತಿದ್ದರೆ, ಕೊಲೆ ಗಡುಕರು ಧೈರ್ಯದಿಂದ ರಾಜಾರೋಷವಾಗಿ ಓಡಾಡುತ್ತಿದ್ದಾರೆ.**

ಪರಿಸ್ಥಿತಿ ಹೀಗಿದ್ದಾಗ ಅಂತಹ ಅಧಿಕಾರಿ ತಾನು ಹಾಕಿದ ಬಂಡವಾಳ ದಕ್ಕಿಸಿಕೊಳ್ಳಲು ಕೆಲಸ ಮಾಡುತ್ತಾನೆಯೇ ವಿನಃ ಜನರ ರಕ್ಷಣೆಯನ್ನು ತನ್ನ ಉದ್ದೇಶವಾಗಿ ಹೊಂದಿರಲ್ಲ. ಇದರರ್ಥ ಅಧಿಕಾರಿಗಳ ಸೇವೆಯಲ್ಲಿ ನ್ಯಾಯದ ನಿರೀಕ್ಷೆ ಸಾಧ್ಯವಿಲ್ಲ ಎಂಬುದಾಗಿದೆ.

30 ವರ್ಷಗಳ ಹಿಂದೆ ಶಾಸಕರು ನಾಗರಿಕರ ರಕ್ಷಣೆಗೆ ಪ್ರಾಮಾಣಿಕ ಇನ್ಸ್‌ಪೆಕ್ಟರ್‌ಗಳನ್ನು ತಮ್ಮ ಕ್ಷೇತ್ರಗಳಿಗೆ ನಿಯೋಜಿಸಿಕೊಳ್ಳಲು ಮುಗಿ ಬೀಳುತ್ತಿದ್ದರು. ಆದರೆ, ಇಂದು ಎಲ್ಲರೂ ಅವರ ಜೇಬುಗಳನ್ನು ತುಂಬುವಂತಹ ಇನ್ಸ್‌ಪೆಕ್ಟರ್‌ಗಳನ್ನೇ ಬಯಸುತ್ತಿದ್ದಾರೆ.

ಇಂತಹ ವಾತಾವರಣದಲ್ಲಿ ಅಪರಾಧಿಯು ಪೊಲೀಸ್ ಪೇದೆಗೆ ಹೇಗೆ ತಾನೆ ಹೆದರುತ್ತಾನೆ? ತನ್ನ ಪ್ರದೇಶದಲ್ಲಿ ಛಾಪು ಮೂಡಿಸಿಕೊಳ್ಳಲು ಪೊಲೀಸ್ ಪೇದೆಯನ್ನ ಸಹಾಯದ (ಫೈನಾನ್ಸ್) ಅವಕಾಶವಾಗಿ ಬಳಸಿ ಕೊಳ್ಳುತ್ತಾನೆ. ಬಳಿಕ ತನ್ನ ಕಲೆಕ್ಷನ್ ಹಾಗೂ ರಕ್ಷಣೆಗಾಗಿ ಈ ಪೇದೆಯ ಬಳಸಿಕೊಳ್ಳುತ್ತಾನೆ.

ಇಂತಹ ವಿಷಕಾರಿ ಪಾನೀಯಕ್ಕೆ ಜಾತಿ ರಾಜಕೀಯವನ್ನು ಸೇರಿಸಿ ಇಡೀ ವ್ಯವಸ್ಥೆಯನ್ನು ನಿಷ್ಕ್ರೀಯಗೊಳಿಸಲಾಗುತ್ತಿದೆ.

ಪ್ರತಿಯೊಂದು ಪಕ್ಷವೂ ಈಗ ಜಾತಿ, ಸಿದ್ಧಾಂತ ಅಥವಾ ತಮಗೆ ನಿಷ್ಠರಾದ ಪೊಲೀಸ್ ಅಧಿಕಾರಿಗಳನ್ನು ಹೊಂದಿವೆ.

ವರ್ಗಾವಣೆ ಎಂಬುದು ಸಾಮರ್ಥ್ಯಕ್ಕೆ ಅನು ಗುಣವಾಗಿ ನಡೆಯದೇ ಸಮುದಾಯದ ಆಧಾರದ ಮೇಲೆ ನಡೆಯುವಂತಾಗಿದೆ.

ಆಡಳಿತ ನಡೆಸುವವರ ಜಾತಿ ಲೆಕ್ಕಾಚಾರಕ್ಕೆ ಬಗ್ಗದ ಪೊಲೀಸ್ ಅಧಿಕಾರಿಗಳನ್ನು ನೀರು–ನೆರಳಿಲ್ಲದ ಜಾಗಕ್ಕೆ ವರ್ಗಾವಣೆ ಮಾಡಲಾಗುತ್ತದೆ.

ಮೀಸಲಾತಿಯಂತೆ ಈಗ ನ್ಯಾಯವೂ ಜಾತಿ ಆಧಾರಿತವಾಗಿದೆ. ಸಂತ್ರಸ್ತರು ಹಾಗೂ ಆರೋಪಿಗಳು ಯಾರು, ಪೊಲೀಸ್ ಅಧಿಕಾರಿಯು ಯಾವ ಜಾತಿ ಇಲ್ಲವೇ ಸಮುದಾಯಕ್ಕೆ ಸೇರಿದವರು ಎಂಬುದರ ಆಧಾರದಲ್ಲಿ ಎಫ್‌ಐಆರ್‌ಗಳನ್ನು ವಿಳಂಬ ಮಾಡಲಾಗುತ್ತದೆ. ಒಂದೊಮ್ಮೆ ಮಾಡಿದರೂ ದುರ್ಬಲಗೊಳಿಸಲಾಗುತ್ತದೆ.

ಪದೇ ಪದೆ ರಾಜಕಾರಣಿಗಳು ಕಾನೂನು ಅನುಷ್ಠಾನದ ವಿಚಾರದಲ್ಲಿ ಮೂಗು ತೂರಿಸಿದಾಗ ಅಥವಾ ಅಪರಾಧಿಗಳನ್ನು ರಕ್ಷಿಸಲು ಜಾತಿ ಮತ್ತು ಸಮುದಾಯವನ್ನು ಮಧ್ಯೆ ತಂದಾಗಲೆಲ್ಲಾ ನಮ್ಮ ಪ್ರಜಾಪ್ರಭುತ್ವದ ನೈತಿಕತೆಯ ಬೆನ್ನೆಲುಬು ಕುಂದುತ್ತಾ ಹೋಗುತ್ತದೆ.

ಇಂತಹ ದುಸ್ಥಿತಿಯು ಕೇವಲ ಪೊಲೀಸ್ ಠಾಣೆ ಮತ್ತು ರಾಜಕಾರಣಿಗಳ ಹಂತಕ್ಕೆ ಸೀಮಿತವಾಗುವುದಿಲ್ಲ. ಇದು ನ್ಯಾಯಾಲಯಗಳಿಗೂ ವ್ಯಾಪಿಸುತ್ತದೆ. ನ್ಯಾಯಾಲಯಗಳಲ್ಲಿ 3 ಕೋಟಿಗೂ ಹೆಚ್ಚು ಪ್ರಕರಣಗಳು ಬಾಕಿ ಇರುವಾಗ ಭಾರತದಲ್ಲಿ ನ್ಯಾಯ ಕೇವಲ ಕುರುಡು ಮಾತ್ರವಲ್ಲ... ಅದು ಹಾಸಿಗೆಯನ್ನೂ ಹಿಡಿದಿದೆ !

ಪರಿಸ್ಥಿತಿ ಹೀಗಿರುವಾಗ, ಅಪರಾಧಿಗಳು ಹೇಗೆ ತಾನೆ ಧೈರ್ಯ ತೋರದೇ ಇರುತ್ತಾರೆ ಹೇಳಿ?

ಹೀಗಾಗಿಯೇ ಕಾನೂನು ಪಾಲಿಸುವ ಮೈಸೂರಿನ ನಾಗರಿಕರು ಭಯದಿಂದಲೇ ಬದುಕುತ್ತಿದ್ದರೆ, ಕೊಲೆ ಗಡುಕರು ಧೈರ್ಯದಿಂದ ರಾಜಾರೋಷವಾಗಿ ಓಡಾಡುತ್ತಿದ್ದಾರೆ.

ಹಣ, ಸಮುದಾಯ ಇಲ್ಲವೇ ಜಾತಿ ಆಧಾರದ ಮೇಲೆ ಎಫ್‌ಐಆರ್ ಅನ್ನು ದುರ್ಬಲಗೊಳಿಸುವುದರಿಂದ ತಮಗೆ ಜಾಮೀನು ಸಿಕ್ಕೇ ಸಿಗುತ್ತದೆ ಎಂದು ದುಷ್ಕರ್ಮಿಗಳು ಹಾಡ ಹಗಲಲ್ಲೇ ನಿರ್ಭಯವಾಗಿ ಹತ್ಯೆಗಳನ್ನ ಮಾಡುತ್ತಾರೆ.

ಮೈಸೂರು ಈಗ ***'ಪಿಂಚಣಿದಾರರ ಸ್ವರ್ಗ'*** ವಾಗಿ ಉಳಿದಿಲ್ಲ! ಕಾನೂನು ಉಲ್ಲಂಘಿಸುವವರ **'ಆಟದ ಮೈದಾನ'** ವಾಗಿ ಪರಿವರ್ತನೆಯಾಗಿದ್ದು, ಇಂತಹ ಸ್ಥಿತಿ ರಾತ್ರೋರಾತ್ರಿ ಉದ್ಭವಿಸಿದ್ದಲ್ಲ!

ಒಂದು ಎಫ್‌ಐಆರ್ ದಾಖಲಿಸುವುದನ್ನು ಕಡೆಗಣಿಸಿ ಕೈಬಿಟ್ಟಾಗ, ವಿಚಾರಣೆಯಲ್ಲಿ ವಿಳಂಬವಾದಾಗ, ಜಾತಿ ಆಧಾರದಲ್ಲಿ ಮಣೆ ಹಾಕಿದಾಗ, ರಾಜಕಾರಣಿಗಳ ಒಂದು ಫೋನ್ ಕರೆ ಮಾಡಿದಾಗ.... ಹೀಗೆ ಒಂದಾದ ಮೇಲೊಂದರಂತೆ ಸೇರುತ್ತಾ ಹೋಗಿ ಮೈಸೂರು ಈಗ ದುಸ್ಥಿತಿಗೆ ದೂಡಲ್ಪಟ್ಟಿದೆ.

ಪೊಲೀಸರು ತಮ್ಮ ದಕ್ಷತೆಯೆಂಬ ಬೆನ್ನೆಲುಬನ್ನು ಮರಳಿ ಪಡೆಯದಿದ್ದರೆ, ನ್ಯಾಯಾಲಯಗಳು ವೇಗವನ್ನು ರೂಢಿಸಿಕೊಳ್ಳದಿದ್ದರೆ, ***'ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ'*** ಶೀಘ್ರದಲ್ಲಿ ***'ಸಂಸ್ಕೃತಿ ಹೀನ ರಾಜಧಾನಿ'*** ಯಾಗಿ ಪರಿವರ್ತನೆಯಾಗಲಿದೆ.

ಇದು ಯಾವುದೇ ದರೋಡೆ, ಅತ್ಯಾಚಾರ ಇಲ್ಲವೆ ಗಲಭೆಗೂ ಮೀರಿದ ದುರಂತವಾಗಲಿದೆ. ಮಾತ್ರವಲ್ಲ ಭವ್ಯವಾದ ಐತಿಹಾಸಿಕ ನಗರದ ಆತ್ಮದ ಹತ್ಯೆ ಹಾಗೂ ಇದನ್ನು ನಿರ್ಮಿಸಿದ ಪೀಳಿಗೆಗೆ ಮಾಡಿದ ದ್ರೋಹವಾಗುತ್ತದೆ.

ನಮ್ಮ ಮುಖ್ಯಮಂತ್ರಿಗಳು ನಮ್ಮೂರಿನವರು. ಇಂತಹ ಸಮಯದಲ್ಲಿ ಮೈಸೂರು, ಕೊಳೆತ–ಊರಾಗಿ ಪರಿಣಮಿಸಿದರೆ ಅದು ನಿಜವಾಗಿಯೂ ದುರಂತವೇ ಸರಿ.

Email: vikram@starofmysore.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಪೆನ್ಷನ್ ಟೆನ್ಷನ್'

ವಿವಿ ಖಜಾನೆ ಖಾಲಿ: ಮುಂದಿನ ತಿಂಗಳಿಂದ ಪಿಂಚಣಿ ಚಡಪಡಿಕೆ

- ಹಾಲಿ ಆದಾಯ ವಿವಿ ನಿರ್ವಹಣೆಗೆ ಸಾಕಾಗ್ತಿಲ್ಲ
- ಪಿಂಚಣಿ ನೀಡಲೂ ಹಣವಿಲ್ಲ
- ಎಲ್ಐಸಿಯಿಂದ ಬರುತ್ತಿದ್ದ ಹಣವೂ ಖಾಲಿ
- 1,900 ನಿವೃತ್ತಿದಾರರು ಅತಂತ್ರ

ಮೈಸೂರು, ಅ.15(ಬಿಎಲ್‌ಯು)– ಆರ್ಥಿಕ ಮುಗ್ಗಟ್ಟಿನ ಕಾರಣ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತಿದಾರರಿಗೆ ಮುಂದಿನ ತಿಂಗಳು ನಿವೃತ್ತಿ ವೇತನ (ಪಿಂಚಣಿ) ನೀಡಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಬುಧವಾರ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆದ ಅಕಾಡೆಮಿಕ್ ಕೌನ್ಸಿಲ್ (ಶೈಕ್ಷಣಿಕ ಮಂಡಳಿ) ಸಭೆಯಲ್ಲಿ ಈ ವಿಚಾರ ಪ್ರತಿಧ್ವನಿಸಿತು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಸೇರಿದಂತೆ 1,900 ನಿವೃತ್ತಿದಾರರಿದ್ದಾರೆ. ಇವರಿಗೆ ಮಾಸಿಕ 10.50 ಕೋಟಿಯಂತೆ ವಾರ್ಷಿಕವಾಗಿ 150 ಕೋಟಿ ಬೇಕಾಗುತ್ತದೆ. ಆದರೆ ಸರ್ಕಾರ ಈ ತನಕ 50 ಕೋಟಿ ರೂ. ಮಾತ್ರ ನೀಡಿದೆ. ನಿವೃತ್ತಿದಾರರಿಗೆ ತೊಂದರೆ ಆಗಬಾರದೆಂದು ಇದುವರೆಗೆ ಎಲ್ಐಸಿ ಹಣದಿಂದ ನೀಡಲಾಗುತ್ತಿತ್ತು. ಆದರೆ ಈಗ ಈ ಹಣ ಕೂಡ ಖಾಲಿಯಾಗಿದೆ ಎಂದು ಹಣಕಾಸು ಅಧಿಕಾರಿ ರೇಖಾ ಅವರು ಸಭೆಗೆ ಅಂಕಿ ಅಂಶ ಸಹಿತ ಮಾಹಿತಿ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಇತರೆ ಮೂಲದಿಂದ ಬರುವ ಹಣ ವಿವಿ ಆಡಳಿತ ನಿರ್ವಹಣೆಗೆ ಸಾಕಾಗುತ್ತಿದೆ. ಆದರೆ ಪಿಂಚಣಿ ನೀಡಲು ಸಾಧ್ಯವಾಗುತ್ತಿಲ್ಲ ಎಂದು ರೇಖಾ ಅವರು ಅಸಹಾಯಕತೆ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ನಿವೃತ್ತಿದಾರರಿಗೆ ಪಿಂಚಣಿ ನೀಡುವುದು ಬಹಳ ಮುಖ್ಯ. ಇಳಿ ವಯಸ್ಸಿನಲ್ಲಿ ನಾನಾ ಖಾಯಿಲೆಯಿಂದ ಬಳಲುವ ಅವರಿಗೆ ಔಷಧಿ ಖರ್ಚಿಗೆ ಪಿಂಚಣಿ ಹಣದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಗಮನಕ್ಕೆ ತಂದು ಸಮಸ್ಯೆ ಪರಿಹಾರ ಮಾಡಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ತರುವಾಯ ಮಾತನಾಡಿದ ಕುಲಪತಿ ಪ್ರೊ.ಲೋಕನಾಥ್, ಈ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ 157 ಕೋಟಿ ಅನುದಾನ ನೀಡುವಂತೆ ಸರ್ಕಾರವನ್ನು ಕೋರಲಾಗಿತ್ತು. ಆದರೆ ಸರ್ಕಾರ 50 ಕೋಟಿ ಮಾತ್ರ ನೀಡಿದೆ. ಇದರಲ್ಲಿ 3ನೇ ಹಂತದ ಹಣ ಮಾತ್ರ ಸಂದಾಯವಾಗಿದ್ದು, 4ನೇ ಹಂತದ ಕಂತು ಡಿಸೆಂಬರ್ ವೇಳೆಗೆ ಬರುವ ಸಾಧ್ಯತೆ ಇದೆ. ಆದ ಕಾರಣ ಮುಂದಿನ ತಿಂಗಳು ಪಿಂಚಣಿ ನೀಡಲು ನಮಗೆ ಸಾಧ್ಯವಾಗುತ್ತಿಲ್ಲ ಎಂದು ಪ್ರೊ.ಲೋಕನಾಥ್ ಅವರು ವಾಸ್ತವಾಂಶವನ್ನು ಸಭೆಗೆ ಮನದಟ್ಟು ಮಾಡಿದರು.

ವಿಶ್ವವಿದ್ಯಾನಿಲಯದ ಪರಿಸ್ಥಿತಿಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ನಿವೃತ್ತಿದಾರರ ಬಾಕಿ ಹಣ ಮಾಸಾಂತ್ಯಕ್ಕೆ ಬರುತ್ತದೆ ಎಂಬ ಆಶಾಭಾವನೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ವಿವೇಕಾನಂದ, ವಿಶ್ವವಿದ್ಯಾನಿಲಯದಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಯೊಬ್ಬರಿಗೆ ನಮ್ಮ ತಂದೆ ಕರೀಗೌಡ ಹಾಗೂ ತಾಯಿ ಚಿಕ್ಕತಾಯಮ್ಮ ಅವರ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿ ನಗದು ಬಹುಮಾನದ ದತ್ತಿ ಸ್ಥಾಪನೆ ಮಾಡುವುದಾಗಿ ಘೋಷಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸೆನೆಟ್ ಸಭಾಂಗಣದಲ್ಲಿ ಬುಧವಾರ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ಅಕಾಡೆಮಿಕ್ ಕೌನ್ಸಿಲ್ ಸಭೆ ನಡೆಯಿತು.

ಏಕರೂಪ ಪರೀಕ್ಷಾ ವ್ಯವಸ್ಥೆಗೆ ಚಿಂತನೆ

ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಏಕರೂಪದ ಪರೀಕ್ಷಾ ವ್ಯವಸ್ಥೆ ಜಾರಿಗೊಳಿಸಲು ಚರ್ಚೆ ನಡೆಸಲಾಯಿತು. ಎಫ್‌ಸಿಬಿಸಿಎಸ್ (ಫ್ಲೆಕ್ಸಿಬಲ್ ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಂ) ವ್ಯವಸ್ಥೆ ಇರುವ ಗಣಕ ವಿಜ್ಞಾನ, ಸಂಖ್ಯಾಶಾಸ್ತ್ರ, ಗಣಿತ ಶಾಸ್ತ್ರ, ವಾಣಿಜ್ಯ ಶಾಸ್ತ್ರ, ಭೌತಶಾಸ್ತ್ರ, ಜೆನೆಟಿಕ್ಸ್ ಜೀಯೋಮಿಕ್ಸ್ ವಿಭಾಗಗಳಲ್ಲಿ ಸಿಬಿಎಸ್ (ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಂ) ಜಾರಿಗೆ ತರುವ ಬಗ್ಗೆ ವಿಷಯ ಮಂಡನೆಯಾಯಿತು. ಆದರೆ ಎಂಕಾಂ ಫೈನಾನ್ಸ್ ಸರ್ವೀಸ್ ಕೋರ್ಸ್‌ಗಳಿಗೆ ಇದು ಸಾಧ್ಯವಾಗುವುದಿಲ್ಲ ಎಂದು ಸದಸ್ಯರು ಅಭಿಪ್ರಾಯಪಟ್ಟರು. ಇನ್ನುಳಿದ ವಿಭಾಗಗಳಲ್ಲಿಯಾದರೂ ಇದನ್ನು ಅಳವಡಿಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಮುಂದಿನ ಸಭೆಯಲ್ಲಿ ಮತ್ತಷ್ಟು ಚರ್ಚಿಸಿ ನಿರ್ಧಾರ ಕೈಗೊಳ್ಳಲು ಸಭೆ ಒಮ್ಮತದ ತೀರ್ಮಾನ ಕೈಗೊಂಡಿತು.

ಸಂಶೋಧನಾ ಭತ್ಯೆ ಪಡೆದ 70 ಅಭ್ಯರ್ಥಿಗಳು ನಾಪತ್ತೆ

ಫೆಲೋಶಿಪ್ ಪಡೆದುಕೊಂಡು ಇನ್ನು ಪಿಎಚ್.ಡಿ ಪ್ರಬಂಧ ಮಂಡಿಸದವರಿಗೆ ಡಿಸೆಂಬರ್ 31ರ ಗಡುವು (ಡೆಡ್ ಲೈನ್) ನೀಡಿದ್ದು, ತರುವಾಯ ಮಂಡಿಸಿದರೂ ಅವುಗಳ ರದ್ದುಗೊಳಿಸಲು ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆ ಮಿಕ್ ಕೌನ್ಸಿಲ್ ಮಹತ್ವದ ತೀರ್ಮಾನ ಕೈಗೊಂಡಿದೆ.

ಐದು ವರ್ಷ ಹಾಗೂ ಏಳು ವರ್ಷದ ಅವಧಿಯ ಪಿಎಚ್.ಡಿ ಮಹಾ ಪ್ರಬಂಧ ಮಂಡನೆಗೆ 1,164 ಅಭ್ಯರ್ಥಿಗಳು ಸಂಶೋಧನೆ ನಡೆಸುತ್ತಿದ್ದಾರೆ. ಸಂಶೋಧನೆ ನಡೆಸುವ ಅಭ್ಯರ್ಥಿಗಳಿಗೆ ವಿಷಯದ ಆಧಾರದ ಮೇಲೆ ಮಾಸಿಕ 28ರಿಂದ 52 ಸಾವಿರದವರೆಗೆ ಭತ್ಯೆ ನೀಡಲಾಗುತ್ತಿದೆ. ಆದರೆ, ವಿಶ್ವವಿದ್ಯಾನಿಲಯ ನೀಡುವ ಮಾಸಿಕ ಭತ್ಯೆಯನ್ನು ಪಡೆದ 70 ಅಭ್ಯರ್ಥಿಗಳು ಪ್ರಬಂಧ ಮಂಡಿಸದೆ, ನಾಪತ್ತೆಯಾಗಿದ್ದಾರೆ ಎಂದು ಪರಿಕ್ಷಾಂಗ ಕುಲಸಚಿವ ಪ್ರೊ.ನಾಗರಾಜು ಸಭೆಗೆ ಮಾಹಿತಿ ನೀಡಿದರು. ಸಂಶೋಧನಾ ಕಾರ್ಯ ತೃಪ್ತಿಕರವಾಗಿದೆ ಎಂದು ಸಂಶೋಧನಾ ಅಭ್ಯರ್ಥಿಗಳ ಗೈಡ್‌ಗಳು ವರದಿ ನೀಡುವ ಕಾರಣ ಇಂತಹ ಪ್ರಮಾದ ಆಗುತ್ತಿದೆ. ಬಹಳಷ್ಟು ಮಾರ್ಗದರ್ಶಕರು ಕೊನೆ ವರ್ಷದವರೆಗೂ ತೃಪ್ತಿಕರವಾಗಿದೆ ಎಂದೇ ವರದಿ ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಆರು ತಿಂಗಳಿಗೊಮ್ಮೆ ಪ್ರಗತಿಯ ವರದಿ ಸಲ್ಲಿಸುವ ಸಂದರ್ಭದಲ್ಲಿ ಗೈಡ್ (ಮಾರ್ಗದರ್ಶಕರು)ಗಳು ವಾಸ್ತವಾಂಶ ಆಧರಿಸಿ ವರದಿ ನೀಡುವಂತೆ ತಾಕೀತು ಮಾಡಿದರೆ ಉತ್ತಮ ಎಂದು ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾದ ಡಾ.ರಾಕೇಶ್ ತಿಳಿಸಿದರು.

ಸಂಶೋಧನೆ ಮಾಡುವ ಅಭ್ಯರ್ಥಿಗಳು ಗಡುವಿನಲ್ಲಿ ಪ್ರಬಂಧ ಮಂಡಿಸಿದರೆ, ತರುವಾಯ ಸಂಶೋಧನೆ ಮಾಡಲು ಇಚ್ಛಿಸುವ ಇತರೆ ಅಭ್ಯರ್ಥಿಗಳಿಗೆ ಅವಕಾಶ ನೀಡಬಹುದು ಎಂದು ಅಭಿಪ್ರಾಯಪಟ್ಟರು. ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯಿಂದ ಅನುಮೋದನೆಯಾಗಿ ಖಾಯಂ ನೇಮಕಾತಿ ಪಡೆದುಕೊಂಡಿರುವ ಉಪನ್ಯಾಸಕರು ಕೂಡ ಪಿಎಚ್ ಡಿ ಪ್ರಬಂಧ ಮಂಡಿಸಿ ಯುಜಿಸಿಯಿಂದ ಮಾನ್ಯತೆ ಪಡೆದುಕೊಳ್ಳುತ್ತಿದ್ದಾರೆ. ಆದರೆ ಅವರು ಮಂಡಿಸುವ ಪ್ರಬಂಧ ಗುಣಮಟ್ಟದಿಂದ ಇರುವುದಿಲ್ಲ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕಳೆದ 20ರಿಂದ 25 ವರ್ಷಗಳಿಂದ ಪಿಎಚ್.ಡಿ ಪಡೆಯಲು ಸಾಧ್ಯವಾಗದವರು ಇದ್ದಾರೆ. ಆದರೆ ಖಾಸಗಿ ಕಾಲೇಜುಗಳ ಅಧ್ಯಾಪಕರು ಬಹುಳ ಸುಲಭವಾಗಿ ಪಿಎಚ್.ಡಿ ಪಡೆದುಕೊಳ್ಳುತ್ತಿದ್ದಾರೆ ಎಂದು ಕೆಲವು ಸದಸ್ಯರು ಆಕ್ಷೇಪಿಸಿದರು.

ಖಾಸಗಿ ಶಿಕ್ಷಣ ಸಂಸ್ಥೆಯ ಉಪನ್ಯಾಸಕರು ಪ್ರಬಂಧ ಮಂಡಿಸಿದ ಸಂದರ್ಭದಲ್ಲಿ ಅದು ಗುಣಮಟ್ಟದಿಂದ ಇಲ್ಲ ಎಂದಾದರೆ ತಿರಸ್ಕಾರ ಮಾಡಬೇಕು. ಇದರಿಂದ ಮುಂದೆ ಗುಣಮಟ್ಟದ ಪ್ರಬಂಧ ಮಂಡನೆಯಾಗುತ್ತದೆ. ಪ್ರಬಂಧಗಳನ್ನು ಮೌಲ್ಯ ಮಾಪನ ಮಾಡುವ ಸಮಿತಿಯವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಕುಲಪತಿ ಪ್ರೊ.ಲೋಕನಾಥ್ ಸಲಹೆ ನೀಡಿದರು.

ಗಡುವು ಮುಗಿದರೂ ಪ್ರಬಂಧ ಮಂಡಿಸದ ಅಭ್ಯರ್ಥಿಗಳು ಡಿಸೆಂಬರ್ 31ರೊಳಗೆ ಮಂಡನೆ ಮಾಡಬೇಕು. ಇಲ್ಲವೆಂದರೆ ಅವರ ಅನುಮತಿ ರದ್ದು ಮಾಡಲಾಗುವುದು. ತರುವಾಯ ಅವರು ಪ್ರಬಂಧ ಮಂಡಿಸಿದರೂ ಅದನ್ನು ಪರಿಗಣಿಸುವುದಿಲ್ಲ ಎಂದು ಡಾ.ನಾಗರಾಜು ಎಚ್ಚರಿಸಿದರು.

ನಾವು ಸಂಬಳ ನೀಡುವವರು ನಮ್ಮ ನಿಯಂತ್ರದಲ್ಲಿಲ್ಲ: ಮೈಸೂರು ವಿಶ್ವ ವಿದ್ಯಾನಿಲಯದಿಂದ ಬೇರ್ಪಡಿಸಿ ಹೊರ ಜಿಲ್ಲೆಯಲ್ಲಿ ಸ್ಥಾಪಿಸಿರುವ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರು, ಪ್ರಾಧ್ಯಾಪಕರು ಹಾಗೂ ನೌಕರರಿಗೆ ನಮ್ಮ ವಿಶ್ವವಿದ್ಯಾನಿಲಯದಿಂದ ವೇತನ ನೀಡಲಾಗುತ್ತಿದೆ. ಆದರೆ ದುರದೃಷ್ಟಕರ ಸಂಗತಿ ಎಂದರೆ ಅವರನ್ನು ನಾವು ನಿಯಂತ್ರಣ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಪ್ರೊ.ಲೋಕನಾಥ್ ಅಸಹಾಯಕತೆ ವ್ಯಕ್ತಪಡಿಸಿದರು.

ವಿಶ್ವ ವಿದ್ಯಾನಿಲಯವನ್ನು ವಿಭಜನೆ ಮಾಡುವ ಸಂದರ್ಭದಲ್ಲಿ ಸರ್ಕಾರ ಸರಿಯಾದ ನೀತಿ–ನಿಯಮ ರೂಪಿಸಬೇಕಿತ್ತು. ಆದರೆ ಅಂದು ಸರ್ಕಾರ ಮಾಡಿದ ಪ್ರಮಾದದಿಂದ ಇಂತಹ ಅವ್ಯವಸ್ಥೆ ಎದುರಾಗುತ್ತಿದೆ ಎಂದು ಪ್ರೊ.ಸೋಮಶೇಖರ್ ಹೇಳಿದರು.

ಕುಟುಂಬ ಸಮೇತ ಹಾಸನಾಂಬೆ ದರ್ಶನ ಪಡೆದ ಸಾಹಿತಿ ಬಾನು ಮುಷ್ತಾಕ್



ಸಾಹಿತಿ ಬಾನು ಮುಷ್ತಾಕ್ ಹಾಸನಾಂಬೆ ದರ್ಶನ ಪಡೆದರು.

ಹಾಸನ, ಅ.15– ಈ ಬಾರಿ ಮೈಸೂರು ದಸರಾ ಉದ್ಘಾಟನೆ ಮಾಡಿದ ಬೂಕರ್ ಪ್ರಶಸ್ತಿ ವಿಜೇತೆ ಸಾಹಿತಿ ಬಾನು ಮುಷ್ತಾಕ್ ತಮ್ಮ ಕುಟುಂಬಸ್ಥರ ಜೊತೆ ಹಾಸನಾಂಬೆ ದರ್ಶನ ಪಡೆದರು.


ಹಾಸನದ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ಬಾನು ಮುಷ್ತಾಕ್, ಚಿಕ್ಕ ವಯಸ್ಸಿನಿಂದಲೇ ಸಾಹಿತ್ಯ ಮತ್ತು ಸಾಮಾಜಿಕ ಕಾರ್ಯದಲ್ಲಿ ತೊಡಗಿದ್ದರು. ಪತ್ರಕರ್ತೆಯಾಗಿ, ನ್ಯಾಯವಾದಿಯಾಗಿ ಮತ್ತು ಹೋರಾಟಗಾರ್ತಿಯಾಗಿ ಅವರು ಕರ್ನಾಟಕದಲ್ಲಿ ಮೂಲಭೂತವಾದಿ ಚಿಂತನೆಗಳು ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಡಿದ್ದಾರೆ. ಇದೀಗ ಹಾಸನಾಂಬೆ ದೇವಿಯ ದರ್ಶನ ಪಡೆಯುವ ಮೂಲಕ ಅವರು ಕೋಮು ಸೌಹಾರ್ದತೆಯನ್ನು ಮೆರೆದಿದ್ದಾರೆ.

ಬಾಲ್ಯದಿಂದಲೂ ಬರುತ್ತಿದ್ದೇನೆ: ನಾನು ಚಿಕ್ಕವಳಿದ್ದಾಗ ನನ್ನ ತಾಯಿಯ ಕೈ ಬೆರಳು ಹಿಡಿದು ಇಲ್ಲಿಗೆ ಬರುತ್ತಿದ್ದ ದಿನಗಳು ನೆನಪಾದವು. ಇವತ್ತು ನಿಮ್ಮ ಧ್ಯಾನಕ್ಕೆ ಬಿದ್ದಿದ್ದೇನೆ. ಹಿಂದೆ ಮುಸ್ಲಿಂ ಸಮುದಾಯವೂ ಹಾಸನಾಂಬೆಯನ್ನು ಪೂಜಿಸುತ್ತಿದ್ದರು. ನಮ್ಮ ತಾಯಿಯ ಕಾಲದಲ್ಲಿ ದೇವಿಯನ್ನು 'ಹಸನ್ ಬಿ ಹುಸೇನ್ ಬೀ' ಎಂಬ ನಂಬಿಕೆಯಲ್ಲಿ ಪರಿಚಯಿಸುತ್ತಿದ್ದರು. ಆ ಕಾಲದಲ್ಲಿ ಮುಸ್ಲಿಂ ಪೂಜೆಯಂತೆ ಸಕ್ಕರೆ, ಊದಿನ ಕಡ್ಡಿ ತಂದು ದೇವಿಗೆ ಪೂಜಿಸುತ್ತಿದ್ದರು. ಅಂದು ಹೆಚ್ಚಿನ ಮುಸ್ಲಿಮರು ಇಲ್ಲಿಗೆ ಬರುತ್ತಿದ್ದರು. ಈಗಲೂ ಕೆಲವರು ಬರುತ್ತಾರೆ. ಹಾಸನಾಂಬೆ ಒಂದು ಉತ್ತಮ ಭಾವೈಕ್ಯತಾ ಜಾಗ. ಇದು ನಮ್ಮ ಊರ ಹಬ್ಬ. ನಾವೆಲ್ಲಾ ಈ ದೇವಿ ಜಾತ್ರೆಯಲ್ಲಿ ಸಂಭ್ರಮದಿಂದ ಭಾಗಿಯಾಗಬೇಕು, ಈ ದರ್ಶನವು ನನಗೆ ಆಂತರಿಕ ಶಾಂತಿಯನ್ನು ನೀಡಿದೆ ಎಂದು ಬಾನು ಮುಷ್ತಾಕ್ ಹೇಳಿದರು.

ಹಾಸನಾಂಬ ದೇವಿಯ ಸಾರ್ವಜನಿಕ ದರ್ಶನದ 6ನೇ ದಿನವಾದ ಇಂದೂ ಸಹ ಸಾಗರೋಪಾದಿಯಲ್ಲಿ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದಿದ್ದಾರೆ. ನಿರಂತರ ದರ್ಶನ ಇರುವ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ದರ್ಶನ ಪಡೆಯಲಿದ್ದಾರೆ. ಇಂದೂ ಸಹ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ದೇವಾಲಯದ ಆವರಣ ಹಾಗೂ ಸುತ್ತಮುತ್ತ ಸರತಿ ಸಾಲುಗಳಲ್ಲಿ ನಿಂತಿದ್ದ ಭಕ್ತರನ್ನು ಮಾತನಾಡಿಸಿ ಮೂಲಸೌಕರ್ಯಗಳ ಪರಿಶೀಲನೆ ನಡೆಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೃಷ್ಣಭೈರೇಗೌಡ, ಕಳೆದ ಐದು ದಿನಗಳಿಂದ 6,40,700 ಮಂದಿ ದರ್ಶನ ಮಾಡಿದ್ದಾರೆ. ಇಂದು ಬೆಳಗ್ಗೆ 1,22,600 ಮಂದಿ ದರ್ಶನ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು. ಇಂದು ಒಂದೇ ದಿನ ಭಕ್ತರ ಸಂಖ್ಯೆ 2.50 ಲಕ್ಷ ದಾಟಬಹುದು ಎಂದ ಅವರು ಎಷ್ಟೇ ಜನ ಬಂದರೂ ಎಲ್ಲರಿಗೂ ಸುಗಮ ದರ್ಶನ ಆಗಲಿದೆ. ಎಲ್ಲಾ ವ್ಯವಸ್ಥೆ ಸರಿಯಾಗಿದ್ದು ದರ್ಶನ ಪಡೆಯಲು ಜನರಿಗೆ ಸ್ವಲ್ಪ ಸಮಯ ಹೆಚ್ಚಾಗಲಿದೆ. ಸದ್ಯದ ಪರಿಸ್ಥಿತಿಯಲ್ಲಿ ನಾಲ್ಕು ಗಂಟೆ ಸಮಯ ತಗುಲುತ್ತಿದ್ದು ಮುಂದಿನ ದಿನಗಳಲ್ಲಿ ಬರುವವರು ನಾಲ್ಕರಿಂದ ಐದು ಗಂಟೆ ಸರತಿ ಸಾಲಿನಲ್ಲಿ ನಿಲ್ಲಲು ತಯಾರಾಗಿ ಬನ್ನಿ ಎಂದರು.

ಆಲಿಯಾ ಭಟ್ ಮಗಳ ಬಂಗಲೆಗೆ ಅರುಣ್ ಯೋಗಿರಾಜ್ ರೂಪಿಸಿದ ಗಣಪತಿ ವಿಗ್ರಹ ಸ್ಥಾಪನೆ



ಪುತ್ರಿ ರಾಹಾ ಜೊತೆ ಆಲಿಯಾ ಭಟ್ ದಂಪತಿ.



ಶಿಲ್ಪಿ ಅರುಣ್ ಯೋಗಿರಾಜ್ ರೂಪಿಸಿರುವ ಗಣಪನ ಮೂರ್ತಿ

ಮೈಸೂರು, ಅ.15– ರಣಬೀರ್ ಕಪೂರ್ ಹಾಗೂ ಆಲಿಯಾ ಭಟ್ ಬಾಲಿವುಡ್ ತಾರಾ ದಂಪತಿ ಮುಂಬೈನ ಬಾಂದ್ರಾದಲ್ಲಿ ತಮ್ಮ ಪುತ್ರಿ ರಾಹಾ ಅವರಿಗಾಗಿ ಸುಮಾರು 200 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹೊಸ ಬಂಗಲೆಯಲ್ಲಿ ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರು ಕೆತ್ತಲ್ಪಟ್ಟಿರುವ ಸುಂದರ ಗಣಪನ ಮೂರ್ತಿ ವಿರಾಜಮಾನವಾಗಲಿದೆ.



ನಾಲ್ಕು ಅಡಿಯ ಗಣಪ, ಮೂರಡಿ ಪೀಠ ಉಳ್ಳ ವಿಗ್ರಹ ಹೊಯ್ಸಳ ಹಾಗೂ ಮೈಸೂರು ಶೈಲಿಯಲ್ಲಿ ಕೆತ್ತನೆ ಮಾಡಲಾಗಿದೆ. ಕಳೆದ ಆರು ತಿಂಗಳಿಂದ ನಿರಂತರ ಕೆತ್ತನೆ ಕಾರ್ಯ ನಡೆದಿದ್ದು, ಅ.17ರಂದು ಆಲಿಯಾ ಭಟ್ ಕುಟುಂಬಸ್ಥರಿಂದ ಪೂಜೆ ಕೂಡ ನಡೆಯಲಿದೆ. ಅದಕ್ಕಾಗಿ ಇಂದು ಮೈಸೂರಿನಿಂದ ವಿಗ್ರಹವನ್ನು ರಸ್ತೆ ಮೂಲಕ ಕೊಂಡೊಯ್ಯಲಾಗಿದೆ. ಆಲಿಯಾ ಭಟ್ ಅವರು ಅರುಣ್ ಅವರ ಅಯೋಧ್ಯೆಯ ಶ್ರೀರಾಮಲಲ್ಲಾ ಮೂರ್ತಿಯಿಂದ ಪ್ರಭಾವಿತರಾಗಿದ್ದರು. ತಾವು ಪುತ್ರಿಗಾಗಿ ನಿರ್ಮಿಸುತ್ತಿರುವ ಅದ್ದೂರಿ ಬಂಗಲೆಗೆ ಗಣಪ ಮೂರ್ತಿಯನ್ನು ಮಾಡಿ ಕೊಡುವಂತೆ ಅವರು ಅರುಣ್ ಯೋಗಿರಾಜ್ ಅವರನ್ನು ಕೇಳಿದ್ದರು.

ತಮ್ಮನ್ನು ಆಲಿಯಾಭಟ್ ಅವರು ಮುಂಬೈಗೆ ಕರೆಸಿಕೊಂಡು ನಿರ್ಮಾಣ ಹಂತದ ಬಂಗಲೆ ತೋರಿಸಿದ್ದರು. ತಾವು ಬಂಗಲೆಯ ಸ್ಥಳ ಎಲ್ಲವನ್ನೂ ಗಮನಿಸಿ, ಅದಕ್ಕೆ ಹೊಂದಿಕೊಳ್ಳುವಂತೆ ಗಣಪನನ್ನು ಸತತ 6 ತಿಂಗಳ ಕಾಲ ಕೆತ್ತಿದ್ದೇನೆ. ಆಲಿಯಾ ಭಟ್ ಅವರ ಬಂಗಲೆಯ ಪ್ರವೇಶದ್ವಾರದಲ್ಲಿ ಈ ಸುಂದರ ಗಣಪ ಮೂರ್ತಿ ವಿರಾಜಮಾನವಾಗಲಿದ್ದು, ಅವರು ಅ.17ರಂದು ಪೂಜೆ ಮಾಡಿ ದೀಪಾವಳಿ ವೇಳೆಗೆ ಬಂಗಲೆ ಪ್ರವೇಶಿಸಲಿದ್ದಾರೆ ಎಂದು ಶಿಲ್ಪಿ ಅರುಣ್ ಯೋಗಿರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಫೇಸ್‌ಬುಕ್ ಖಾತೆಯಲ್ಲಿ ಕುಟುಂಬ ಸದಸ್ಯರ ಫೋಟೋ ; ಪ್ರಕರಣ ದಾಖಲಿಸಿದ ಲಕ್ಷ್ಮಣ್



ಮೈಸೂರು,ಅ.15– ಫೇಸ್‌ಬುಕ್ ಖಾತೆಯಲ್ಲಿ ಅಪರಿಚಿತ ವ್ಯಕ್ತಿಯುು ತಮ್ಮ ಕುಟುಂಬ ಸದಸ್ಯರ ಫೋಟೋ ಹಾಕುವ ಮೂಲಕ ದುರುಪಯೋಗ ಮಾಡಿಕೊಳ್ಳುತ್ತಿದ್ದು, ಇದರಿಂದ ತಮಗೆ ಮತ್ತು ತಮ್ಮ ಕುಟುಂಬಕ್ಕೆ ಆಘಾತವಾಗಿದೆ ಎಂದು ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಈ ಸಂಬಂಧ ಪ್ರಕರಣ ದಾಖಲಾಗಿದೆ.

'ದಂಡಂ ದಶಗುಣಂ' ಎಂಬ ಫೇಸ್‌ಬುಕ್ ಖಾತೆಯಲ್ಲಿ ನನ್ನ ಒಪ್ಪಿಗೆ ಇಲ್ಲದೇ ನನ್ನ ಹಾಗೂ ನನ್ನ ಪತ್ನಿ ಮತ್ತು ಪುತ್ರಿಯ ಫೋಟೋಗಳನ್ನು ಹಾಕಿಕೊಂಡು ದುರುಪಯೋಗ ಮಾಡಿಕೊಳ್ಳುತ್ತಿದ್ದು, ಸಾಮಾಜಿಕ ಜಾಲತಾಣದ ಸದರಿ ಖಾತೆದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿ ಬಂಧನ ಕಾನೂನು ಬಾಹಿರವೆಂದು ಘೋಷಿಸಲು ಹೈಕೋರ್ಟ್ ನಕಾರ



ಬೆಂಗಳೂರು, ಅ.15– ಅಕ್ರಮವಾಗಿ ಬೆಟ್ಟಿಂಗ್ ಕಂಪನಿ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ಚಿತ್ರದುರ್ಗ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಬಂಧನ ಕಾನೂನುಬಾಹಿರ ಎಂದು ಘೋಷಿಸಲು ಹೈಕೋರ್ಟ್ ಬುಧವಾರ ನಿರಾಕರಿಸಿದೆ.

ತಮ್ಮ ಪತಿ ವೀರೇಂದ್ರ ಪಪ್ಪಿಯನ್ನು ಬಂಧಿಸಿರುವ ಜಾರಿ ನಿರ್ದೇಶನಾಲಯದ ಕ್ರಮ ಕಾನೂನುಬಾಹಿರ ಎಂದು ಘೋಷಿಸಿ, ಬಿಡುಗಡೆಗೆ ಆದೇಶಿಸಬೇಕು ಎಂದು ಕೋರಿ ಶಾಸಕರ ಪತ್ನಿ ಡಿ.ಆರ್. ಚೈತ್ರಾ ಅವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಇಂದು ವಜಾಗೊಳಿಸಿದೆ.

ವೀರೇಂದ್ರ ಪಪ್ಪಿ ಅವರನ್ನು ಪಿಎಂಎಲ್ ಕಾಯ್ದೆಯಡಿ ಬಂಧಿಸಿರುವ ಜಾರಿ ನಿರ್ದೇಶನಾಲಯದ ಕ್ರಮ ಕಾನೂನುಬಾಹಿರ ಎಂದು ಘೋಷಿಸುವಂತೆ ಪತ್ನಿ ಚೈತ್ರಾ ತಮ್ಮ ಅರ್ಜಿಯಲ್ಲಿ ಕೋರಿದ್ದರು. ಅರ್ಜಿಯ ವಿಚಾರಣೆ ಪೂರ್ಣಗೊಳಿಸಿದ್ದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕ ಸದಸ್ಯ ಪೀಠ, ಆದೇಶವನ್ನು ಇಂದಿಗೆ ಕಾಯ್ದಿರಿಸಿತ್ತು. ಅಕ್ರಮ ಬೆಟ್ಟಿಂಗ್ ಆರೋಪ ಸಂಬಂಧ ಅರ್ಜಿದಾರರ ಪತಿಯ ವಿರುದ್ಧ ಐದು ಪ್ರಕರಣಗಳು ದಾಖಲಾಗಿದ್ದು, ನಾಲ್ಕು ಪ್ರಕರಣಗಳು ಅವರ ಪರವಾಗಿಯೇ ಇದೆ. ಆದರೆ, ಮತ್ತೊಂದು ಪ್ರಕರಣ ವಿಚಾರಣಾ ಹಂತದಲ್ಲಿದ್ದು, ಈ ಸಂದರ್ಭದಲ್ಲಿ ಬಿಡುಗಡೆಗೆ ಆದೇಶ ನೀಡಲಾಗದು ಎಂದು ನ್ಯಾಯಪೀಠ ತಿಳಿಸಿದೆ.

ಜನರ ಬದುಕಿಗೆ ಭದ್ರತೆ ನೀಡುವ ಪೊಲೀಸ್ ಇಲಾಖೆ ಗೌರವಿಸಿ; ಸಹಕರಿಸಿ

- ಹಿರಿಯ ಐಪಿಎಸ್ ಅಧಿಕಾರಿ ರವಿ ಡಿ.ಚೆನ್ನಣ್ಣವರ್
- ಮಾನಸಗಂಗೋತ್ರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ
- ಸುಂದರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಸಹಕರಿಸಲು ಮನವಿ

ಮೈಸೂರು, ಅ.15(ಎಸ್‌ಪಿಎನ್)– ಯುವ ಸಮೂಹ, ಜಗತ್ತಿನ ಎಲ್ಲಾ ದಾರ್ಶನಿಕರ ಒಳ್ಳೆಯ ಅಂಶಗಳನ್ನು ಮನನ ಮಾಡಿಕೊಂಡು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಿ, ಶಾಂತಿಯುತ ಬದುಕು ನಡೆಸಿ ಎಂದು ರಾಜ್ಯ ವಿಪತ್ತು ಸ್ಪಂದನಾ ಪಡೆ ಮತ್ತು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೊಲೀಸ್ ಉಪ ಮಹಾ ನಿರೀಕ್ಷಕ ರವಿ.ಡಿ.ಚೆನ್ನಣ್ಣವರ್ ಕಿವಿಮಾತು ಹೇಳಿದರು.

ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದ ವಿಜ್ಞಾನ ಭವನದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅಣ್ಣ ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್, ಭಕ್ತ ಕನಕದಾಸ, ಪುರಂದರ ದಾಸರು ಸೇರಿದಂತೆ ಇತರೆ ದಾರ್ಶನಿಕರು ಸಾಧನೆಯ ಪುಟವನ್ನು ಒಮ್ಮೆ ತಿರುಗಿಸಿ ನೋಡಿ, ಅದರಲ್ಲಿನ ಅಂಶಗಳನ್ನು ಅರ್ಥ ಮಾಡಿಕೊಳ್ಳಿ. ಅವರೆಲ್ಲರೂ ತಮ್ಮ ತಮ್ಮ ಭಾಷೆ, ಭೌಗೋಳಿಕ ವ್ಯಾಪ್ತಿಯಲ್ಲಿ ಸರ್ವಜನರ ಸುಖವನ್ನ ಬಯಸಿದ್ದಾರೆ. ದೇವನೊಬ್ಬ ನಾಮ ಹಲವು ಎಂಬ ತತ್ವವನ್ನು ಜಗತ್ತಿಗೆ ಸಾರಿದ್ದಾರೆ ಎಂದರು.

ಕುವೆಂಪು ರಚಿತ ನಾಟಕಗಳು ನನಗೆ ಅಚ್ಚುಮೆಚ್ಚು: ಕುವೆಂಪು ರಚಿಸಿದ ನಾಟಕಗಳಾದ 'ಶೂದ್ರ ತಪಸ್ವಿ'ಯ ಶಂಭುಕನ ಪಾತ್ರ ನನಗೆ ಅಚ್ಚುಮೆಚ್ಚು ಹಾಗೂ 'ಸ್ಮಶಾನ ಕುರುಕ್ಷೇತ್ರ' ನಾಟಕದಲ್ಲಿ ಕಾಲೇಜು ವ್ಯಾಸಂಗದ ವೇಳೆ ನಟಿಸಿದ್ದೇನೆ. ಈ ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರದರ್ಶನವಾಗಿದೆ. ಜಾತಿ ಸೂಚಕವಾದ ಶಂಬುಕ ಪಾತ್ರವನ್ನು ಅಂಬೇಡ್ಕರ್ ಅವರು, ಜಾತಿ ವ್ಯವಸ್ಥೆಯನ್ನು ಟೀಕಿಸುವಾಗ ಬಳಸಿಕೊಂಡಿದ್ದಾರೆ. ಅದರಂತೆ ದೊಡ್ಡವರ ಪ್ರತಿಷ್ಠೆಗಾಗಿ ಕುರುಕ್ಷೇತ್ರ ಯುದ್ಧದಲ್ಲಿ ಲಕ್ಷಾಂತರ ಸೈನಿಕರು ಸಾವನ್ನಪ್ಪಿರುವ ದೃಶ್ಯಗಳನ್ನು ಈ ಸ್ಮಶಾನ ಕುರುಕ್ಷೇತ್ರ ನಾಟಕದಲ್ಲಿ ಕಟ್ಟಿಕೊಂಡಿದ್ದಾರೆ. ಈ ನಾಟಕಗಳು ನನ್ನ ಬಹು ಆಕರ್ಷಿಸಿವೆ ಎಂದರು.

ವಾಲ್ಮೀಕಿ ರಾಮಾಯಣ ರಾಮನ ಬದುಕನ್ನು ಕಟ್ಟಿಕೊಡುತ್ತದೆ. ಮಹಾಭಾರತ ಸಾಮೂಹಿಕ ನಾಯಕತ್ವದ ಬಿಂಬಿಸುತ್ತದೆ. ಅದರಲ್ಲಿ ಕುರುಕ್ಷೇತ್ರ ಪ್ರಮುಖ ಪಾತ್ರವಹಿಸಿದರೆ, ರಾಮಾಯಣದಲ್ಲಿ ದಶರಥನ ಮಕ್ಕಳು ಪಿತೃವಾಕ್ಯ ಪರಿಪಾಲಕರಾಗಿ, ಅಣ್ಣ–ತಮ್ಮಂದಿರ ಒಗ್ಗಟ್ಟು ರಾಮಾಯಣದಲ್ಲಿ ಅಮೋಘವಾಗಿ ಮೂಡಿ ಬಂದಿದೆ. ರಾಮ–ರಾವಣ ಎರಡೂ ಪಾತ್ರಗಳು ವಿಭಿನ್ನವಾಗಿದ್ದರೂ ಎರಡೂ ಪಾತ್ರಗಳು ಭಾರತೀಯ ಪರಂಪರೆಯ ಸಂಕೇತವಾಗಿದ್ದು, ಕುವೆಂಪು ರಾಮಾಯಣ ಇಷ್ಟಪಟ್ಟಿದ್ದೇನೆ ಎಂದು ಅಭಿಪ್ರಾಯಪಟ್ಟರು.

ಸಮಾಜಕ್ಕೆ ಕೇಡು ಬಯಸಬೇಡಿ: ನಾವು ಸಮಾಜಕ್ಕೆ ಯಾವುದೇ ಕೊಡುಗೆ ನೀಡದಿದ್ದರೂ ಪರವಾಗಿಲ್ಲ. ಆದರೆ, ಸಮಾಜಕ್ಕೆ ಕೇಡು ಬಯಸುವ ಹಂತಕ್ಕೆ ಹೋಗಬಾರದು. ವ್ಯವಸ್ಥೆಯಲ್ಲಿ ಹಲವು ಲೋಪಗಳಿರುತ್ತವೆ. ಆದರೆ, ಆ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ನಮ್ಮ ಆಲೋಚನಾ ಲಹರಿ ಇರಬೇಕೇ ವಿನಃ, ಕಾನೂನು ಸುವಸ್ಥೆಗೆ ಭಂಗ ತಂದು ಪೊಲೀಸ್ ಇಲಾಖೆಯೊಂದಿಗೆ ಘರ್ಷಣೆಗಿಳಿಯದಂತೆ ಕಿವಿಮಾತು ಹೇಳಿದರು.

ಸುಂದರ ಸಮಾಜ ನಿರ್ಮಾಣಕ್ಕೆ ಸಹಕರಿಸಿ: ಪೊಲೀಸ್ ಇಲಾಖೆ ಎಂದರೆ, ಜನರ ಬದುಕಿಗೆ ಭದ್ರತೆ ನೀಡುವ ಇಲಾಖೆ. ಈ ಇಲಾಖೆ ಬಗ್ಗೆ ತಿಳಿದುಕೊಳ್ಳುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯ. ಡಾ.ಅಂಬೇಡ್ಕರ್ ಅವರು ಸುಂದರ ಸಂವಿಧಾನ ರಚಿಸಿ, ಎಲ್ಲರೂ ಸುಂದರ ಬದುಕು ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಮಹರ್ಷಿ ವಾಲ್ಮೀಕಿ, ಅಣ್ಣ ಬಸವಣ್ಣ, ಕನಕದಾಸರು, ತುಳಸಿದಾಸ್, ಕಬೀರ್ ದಾಸ್, ಶಿಶುನಾಳ ಷರೀಫ ಹಾಗೂ ಸ್ವಾಮಿ ವಿವೇಕಾನಂದ ಸೇರಿದಂತೆ ಹಲವರ ಆದರ್ಶಗಳನ್ನು ಮೈಗೂಡಿಸಿಕೊಂಡು ಸುಂದರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ನಾನು ಕರುನಾಡ ಸಿಂಗಂ ಅಲ್ಲ: ನನ್ನನ್ನು ಸಭೆಗೆ ಪರಿಚಯಿಸುವಾಗ ಕರುನಾಡ ಸಿಂಗಂ, ಹಸಿವು, ಬಡತನದ ವಿರುದ್ಧ ಹೋರಾಡಿ ಈ ಹಂತಕ್ಕೆ ಬಂದಿದ್ದೇನೆ ಎಂದು ಪ್ರೊ.ಲೋಲಾಕ್ಷಿ ಅವರು ಸಭೆಗೆ ತಿಳಿಸಿದ್ದರು. ಮೊದಲಿಗೆ ನಾನು 'ಕರುನಾಡ ಸಿಂಗಂ' ಅಲ್ಲ. ಹಾಗೆ ಕರೆಯಬೇಡಿ. ಬದಲಾಗಿ ನಾನೊಬ್ಬ ಪೊಲೀಸ್ ಅಧಿಕಾರಿ ಅಷ್ಟೆ ಎಲ್ಲಾ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿದಂತೆ ನಾನು ಕೂಡ ಕಾನೂನು ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತೇನೆ ಎಂದರು.

ವೇದಿಕೆಯಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕಾನಾಥ್, ಕುಲಸಚಿವ(ಪರೀಕ್ಷಾಂಗ) ಪ್ರೊ.ಎನ್. ನಾಗರಾಜು, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಉಪ ಕುಲಸಚಿವ ಕೆ.ಎನ್. ಮಂಜುನಾಥ್ ಉಪಸ್ಥಿತರಿದ್ದರು.



ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ವಿಜ್ಞಾನ ಭವನದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಹಿರಿಯ ಪೊಲೀಸ್ ಅಧಿಕಾರಿ ರವಿ.ಡಿ.ಚೆನ್ನಣ್ಣವರ್ ಮಾತನಾಡುತ್ತಿರುವುದು.

ವಿದ್ಯೆ ಕಲಿತವರಿಗೆ ಉನ್ನತ ಗೌರವ

"ವರ್ಣಾಶ್ರಮ ವ್ಯವಸ್ಥೆ ಜಾರಿಯಲ್ಲಿದ್ದ ಕಾಲಘಟ್ಟದಲ್ಲಿ ಮಹರ್ಷಿ ವಾಲ್ಮೀಕಿ ರಾಮಾಯಣ ರಚಿಸಿದ್ದಾರೆ. ರಾಮಾಯಣ ರಚಿಸುವ ಮೊದಲು ಆತ ಬೇಟೆಗಾರನಾಗಿದ್ದ ಹಾಗೂ ಬೇರೆ ಬೇರೆ ಉದ್ಯೋಗ ಸೂಚಿತ ವಿಶೇಷಣಗಳಿಂದ ಕರೆಯಲಾಗಿತ್ತು. ಆದರೆ, ಮಹರ್ಷಿ ವಾಲ್ಮೀಕಿಯವರು ವಿದ್ಯೆ ಕಲಿತು ರಾಮಾಯಣ ರಚಿಸಿದ ಮೇಲೆ ಅವರ ಮೇಲಿನ ಗೌರವ ಹೆಚ್ಚಾಗಿ, ಜನ ಸಮುದಾಯದಲ್ಲಿ ಉನ್ನತ ಗೌರವ ದೊರಕಿದೆ. ಅಂದರೆ, ಶಿಕ್ಷಣ ಪಡೆದವರಿಗೆ ಈ ಸಮಾಜ ಗೌರವ ನೀಡುತ್ತದೆ ಎಂಬುದನ್ನು ಮಹರ್ಷಿ ವಾಲ್ಮೀಕಿ ಕಥನ ನಮಗೆ ತಿಳಿಸಿಕೊಡುತ್ತದೆ. **–ಪ್ರೊ.ಜಿ. ಪ್ರಶಾಂತ ನಾಯಕ್, ಕನ್ನಡ ಪ್ರಾಧ್ಯಾಪಕರು, ಕುವೆಂಪು ವಿವಿ, ಶಿವಮೊಗ್ಗ**

ವಿದ್ಯಾರ್ಥಿಗಳು ಸ್ಪರ್ಧಾ ಮನೋಭಾವನೆ ಬೆಳೆಸಿಕೊಳ್ಳಿ



ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬಹುಮಾನ ಪಡೆದ ವಿಜೇತರನ್ನು ಸನ್ಮಾನಿಸಲಾಯಿತು.

ಮಂಡ್ಯ : ವಿದ್ಯಾರ್ಥಿ ಮತ್ತು ಯುವಕರು ಪ್ರತಿಭಾವಂತರಾಗಲು ಎಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ಪ್ರಾಧ್ಯಾಪಕಿ ಡಾ. ಪ್ರಮೀಳ ತಿಳಿಸಿದ್ದಾರೆ

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯುವ ಜನತೆ ದೇಶದ ಅಭಿವೃದ್ಧಿಗೆ ಶ್ರಮಿಸಿದಾಗ ಮಾತ್ರ ಸದೃಢ ದೇಶವನ್ನು ಕಟ್ಟಲು ಸಾಧ್ಯ ಎಂಬುದು ಸ್ವಾಮಿ ವಿವೇಕಾನಂದರ ನಂಬಿಕೆ ಜಿಲ್ಲೆಯ ಯುವ ಜನತೆ ವಿವೇಕಾನಂದರ ನಂಬಿಕೆಯನ್ನು ಉಳಿಸಿ, ಅವರ ಕನಸು ನನಸಾಗಿಸಬೇಕೆಂದರು. ಕಲೆ, ಸಾಹಿತ್ಯ, ರಂಗಭೂಮಿ, ಜಾನಪದ ಹಾಗೂ ನಾಟಕ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಜಿಲ್ಲೆ ಮಹತ್ವ ಹೊಂದಿದೆ. ಪ್ರತಿಭಾನ್ವಿತರು ಎಲೆ ಮರೆ ಕಾಯಿಯಂತಿರದೆ ಇಲಾಖೆ ಒದಗಿಸುವ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಕಿವಿ ಮಾತು ಹೇಳಿದರು.

ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತ ನಾಗರಾಜು ಮಾತನಾಡಿ, ಯುವಕರು ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸುವುದರಿಂದ ವಿದ್ಯಾವಂತಿಕೆ ಜತೆಗೆ ಪ್ರತಿಭಾನ್ವಿತರಾಗಿ ಬೆಳೆಯಬಹುದು. ಜಿಲ್ಲೆಯ ಯುವಕರು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದನ್ನು ಹವ್ಯಾಸವನ್ನಾಗಿಸಿಕೊಳ್ಳಿ ಮುಂದೆ ಅದು ಜೀವನದ ವೃತ್ತಿಯಾಗಿ ಬದುಕು ಬೆಳಗುತ್ತದೆ ಎಂದು ತಿಳಿಸಿದರು.ಯುವಜನೋತ್ಸವದಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬಹು ಮಾನ ಪಡೆದ ವಿಜೇತರನ್ನು ಸನ್ಮಾನಿಸಲಾಯಿತು. ರಾಜ್ಯ ಯುವ ಪ್ರಶಸ್ತಿ ವಿಜೇತೆ ಮಂಗಳ ಯೋಗೇಶ್, ಕ್ರೀಡಾ ಇಲಾಖೆ ಉಪ ನಿರ್ದೇಶಕ ಓಂ ಪ್ರಕಾಶ್, ಶೃತಿ, ಯುವ ಪ್ರಶಸ್ತಿ ವಿಜೇತ ಅನಿಲ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಕೃಷಿಯನ್ನು ಕೆಲಸವಾಗಿ ಮಾಡದೇ ಉದ್ದಿಮೆಯಾಗಿ ಸ್ವೀಕರಿಸಿದರೆ ಆರ್ಥಿಕ ಪ್ರಗತಿ: ಜಿಪಂ ಸಿಇಓ

ಮಂಡ್ಯ, ಅ.15– ಕೃಷಿಯನ್ನು ಕೇವಲ ಕೆಲಸವಾಗಿ ಮಾಡದೆ ಉದ್ದಿಮೆಯಾಗಿ ಮೌಲ್ಯವರ್ಧನೆ ಮಾಡಿದಾಗ ಮಾತ್ರ ಗ್ರಾಮೀಣ ಭಾಗದ ರೈತ ಮಹಿಳೆಯರ ಆರ್ಥಿಕ ಪ್ರಗತಿ ಸಾಧ್ಯ ಎಂದು ಜಿ.ಪಂ. ಸಿಇಓ ಕೆ.ಆರ್.ನಂದಿನಿ ಹೇಳಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತಾ ರಾಷ್ಟ್ರೀಯ ಗ್ರಾಮೀಣ ಮಹಿಳಾ ದಿನದ ಅಂಗವಾಗಿ ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣೆ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯಡಿ ಸ್ವಸಹಾಯ ಸಂಘದ ಮಹಿಳಾ ಸದಸ್ಯರಿಗೆ ತಾಂತ್ರಿಕ ಕಾರ್ಯಾಗಾರವನ್ನು ಕಡಲೆ ಎಣ್ಣೆಯನ್ನು ಯಂತ್ರದಿಂದ ತೆಗೆಯುವ ಮೂಲಕ ಉದ್ಘಾಟಿಸಿ, ರೈತ ಮಹಿಳೆಯರು ಬೆಳೆಯುವ ಬೆಳೆಗಳನ್ನು ನೇರವಾಗಿ ಮಾರಾಟ ಮಾಡುವ ಬದಲು ಬೆಳೆಯನ್ನು ಮೌಲ್ಯ ವರ್ಧನೆಗೊಳಿಸಿ, ಪ್ಯಾಕಿಂಗ್ ಹಾಗೂ ಬ್ರಾಂಡಿಂಗ್ ಮಾಡಿ ಮಾರಾಟ ಮಾಡಿದರೆ ಆದಾಯ ಹೆಚ್ಚಿಸಿಕೊಳ್ಳಬಹುದು ಎಂದರು.

ಮಹಿಳೆಯರು ನನ್ನಿಂದಾಗದು ಎಂಬ ಕೀಳರಿಮೆ ಧೋರಣೆಯನ್ನು ಬಿಟ್ಟು ಕೃಷಿಯಲ್ಲಿ ತೊಡಗಿಸಿಕೊಂಡಾಗ ಆರ್ಥಿಕವಾಗಿ ಅಭಿವೃದ್ಧಿ ಕಾಣಬಹುದು, ಸರ್ಕಾರದ ವಿವಿಧ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದರ ಮೂಲಕ ಕೃಷಿ ಉದ್ದಿಮೆಯನ್ನು ವೃದ್ಧಿಸಿಕೊಳ್ಳಲು ಗ್ರಾಮೀಣ ಮಹಿಳೆಯರು ಮುಂದೆ ಬರಬೇಕು, ಮುಂದಿನ ದಿನಗಳಲ್ಲಿ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಲ್ಲೂ ಮಹಿಳಾ ಸ್ವಸಹಾಯ ಸಂಘಗಳಿಂದ ತಯಾರಿಸಿದ ತಿಂಡಿ ತಿನಿಸು ಕೊಡುವಂತೆ ಆಗಬೇಕು, ಅದಕ್ಕಾಗಿ ನೀವು ಆಹಾರ ಗುಣಮಟ್ಟವನ್ನು ವೃದ್ಧಿಸಬೇಕು ಎಂದು ಕಿವಿಮಾತು ಹೇಳಿದರು.



ಜಿ.ಪಂ. ಸಿಇಓ ಕೆ.ಆರ್.ನಂದಿನಿ ಕಡಲೆ ಎಣ್ಣೆಯನ್ನು ಯಂತ್ರದಿಂದ ತೆಗೆಯುವ ಮೂಲಕ ಕಾರ್ಯಾಗಾರವನ್ನು ವಿನೂತನವಾಗಿ ಉದ್ಘಾಟಿಸಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ್, ತೋಟಗಾರಿಕೆ ಉಪನಿರ್ದೇಶಕಿ ರೂಪಶ್ರೀ ಪಶು ಸಂಗೋಪನಾ ಉಪ ನಿರ್ದೇಶಕ ಶಿವಲಿಂಗಯ್ಯ, ಮೀನುಗಾರಿಕೆ ಉಪನಿರ್ದೇಶಕ ಬಾಬಾಸಾಬ್ ಮಾತನಾಡಿದರು. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗಾನಂದ್, ಲೀಡ್ ಬ್ಯಾಂಕ್ ಮ್ಯಾನೇಜರ್ ಅರುಣ್ ಕುಮಾರ್, ಕೃಷಿ ವಿಜ್ಞಾನಿ ಡಾ. ಶ್ರೀದೇವಿ, ಕರಸ್ವಾಡಿ ಮಹದೇವ, ಕೃಷಿ ಉಪನಿರ್ದೇಶಕ ಮುನೇಗೌಡ, ವಿಕಸನ ಸಂಸ್ಥೆಯ ನಿರ್ದೇಶಕ ಮಹೇಶ್ ಚಂದ್ರಗುರು, ರಾಕೇಶ್ ಇನ್ನಿತರರು ಉಪಸ್ಥಿತರಿದ್ದರು.

ಕಿಕ್ಕೇರಿ ಪಿಯು ಕಾಲೇಜಿನಲ್ಲಿ ಅಣುಕು ಸಂಸತ್



ಸರ್ಕಾರಿ ಪಿಯು ಕಾಲೇಜಿನಲ್ಲಿ ಸಂಸತ್ ಅಣುಕು ಸಭೆ ವಿದ್ಯಾರ್ಥಿಗಳಿಂದ ನಡೆಯಿತು.

ಕಿಕ್ಕೇರಿ, ಅ.15–ಪಟ್ಟಣದ ಕೆಪಿಎಸ್ ಶಾಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಸಂಸತ್ ಅಣುಕು ಸಭೆಯಲ್ಲಿ ಭಾಗವಹಿಸಿ ರಾಜಕೀಯ ಕರಾಮತ್ತುಗಳನ್ನು ಪ್ರದರ್ಶಿಸಿ ಚಪ್ಪಾಳೆ ಗಿಟ್ಟಿಸಿದರು.

ಸಭಾಧ್ಯಕ್ಷರು, ಪ್ರಧಾನಮಂತ್ರಿ ವಿರೋಧ ಪಕ್ಷ ನಾಯಕರು, ಮಂತ್ರಿಗಳ ಆಸನ ವ್ಯವಸ್ಥೆ, ಅಧಿಕಾರಿಗಳ ಜವಾಬ್ದಾರಿ ಅಚ್ಚುಕಟ್ಟಾಗಿ ನಿರ್ವಹಿಸಲಾಗಿತ್ತು. ಅಣುಕು ಸಂಸತ್‌ನಲ್ಲಿ ಸಭಾಧ್ಯಕ್ಷರು ಬಲು ತಾಳ್ಮೆಯಿಂದ ಆಡ ಳಿತ, ವಿರೋಧ ಪಕ್ಷದ ನಾಯಕರು ಮಂಡಿ ಸಿದ ವಿಷಯ ಅವಲೋಕಿಸಿದರು. ಚರ್ಚೆ, ವಾಕ್ಸಮರ, ಹಕ್ಕು ಒತ್ತಾಯಗಳನ್ನು ತಾಳ್ಮೆಯಿಂದ ಎಲ್ಲವನ್ನೂ ಕೇಳುತ್ತ, ಸೂಚ್ಯ ಉತ್ತರ ನೀಡಿದರು.

ವಿದ್ಯಾರ್ಥಿಗಳು ಸಕಾಲಿಕ ವಿದ್ಯಮಾನ, ರಾಜಕೀಯ ಬೆಳವಣಿಗೆಗಳ ಬಗ್ಗೆ ಸಮಗ್ರವಾಗಿ ಅರಿತರೆ ಮುಂದೆ ಉತ್ತಮ ರಾಜಕಾರಣಿಯಾಗಿ ಸುಭದ್ರ ನಾಡು ಕಟ್ಟಲು ಸಹಕಾರಿಯಾಗಲಿದೆ. ರಾಜಕೀಯ ವ್ಯಕ್ತಿಗಳ ಜವಾಬ್ದಾರಿ, ಕರ್ತವ್ಯ ತಿಳಿದರೆ ನೇರವಾಗಿ ಪ್ರಶ್ನಿಸಿ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದೆಂದು ರಾಜ್ಯಶಾಸ್ತ್ರ ಉಪನ್ಯಾಸಕ ಜಿ.ಎಸ್. ಕುಮಾರಸ್ವಾಮಿ ತಿಳಿಸಿದರು. ಪ್ರಾಂಶುಪಾಲ ಎಂ.ಆರ್. ಸಹದೇವ, ಉಪನ್ಯಾಸಕರಾದ ಎ.ಎಂ.ಮಂಜುನಾಥ್, ಎಸ್.ಡಿ. ಹರೀಶ್, ಅರ್ಪಿತಾ, ಚಂದ್ರಿಕಾ, ಲಾವಣ್ಯ ಇದ್ದರು.

ಕುಟುಂಬದೊಂದಿಗೆ ಹಿರಿಯರ ಹೊಂದಾಣಿಕೆ ಅಗತ್ಯ



ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್.ಮಹೇಶ್ ಉದ್ಘಾಟಿಸಿದರು.

ಪಾಂಡವಪುರ, ಅ.15–ಅರವತ್ತು ವರ್ಷದ ನಂತರ ಆರೋಗ್ಯ ಕಾಪಾಡಿಕೊಳ್ಳಲು ಪ್ರತಿಯೊಬ್ಬರೂ ಗಮನಹರಿಸಬೇಕು. ಆರೋಗ್ಯವೇ ನಿಜವಾದ ಭಾಗ್ಯ ಹಿರಿಯರು ಕುಟುಂಬದ ಇತರರೊಂದಿಗೆ ಹೊಂದಾಣಿಕೆಯಿಂದ ಇದ್ದು, ಪ್ರೀತಿ ಸ್ನೇಹದಿಂದ ವ್ಯವಹರಿಸಬೇಕೆಂದು ಪ್ರಧಾನ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಆರ್.ಮಹೇಶ್ ತಿಳಿಸಿದ್ದಾರೆ.

ಪಟ್ಟಣದ ವಿಜಯ ಬಿ.ಇಡಿ.ಕಾಲೇಜ್ ಆವರಣದಲ್ಲಿ ನಡೆದ ಮಾನಸಿಕ ಆರೋಗ್ಯ ದಿನಾಚರಣೆ ಮತ್ತು ಹಿರಿಯ ನಾಗರಿಕರ ದಿನದ ಅಂಗವಾಗಿ ಏರ್ಪಡಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ, ಇತ್ತೀಚಿನ ದಿನಗಳಲ್ಲಿ ಹಿರಿಯ ನಾಗರಿಕರನ್ನು ಕಡೆಗಣಿಸುತ್ತಿರುವುದು ವಿಷಾದನೀಯ. ಅವರಲ್ಲಿ ಒಂಟಿತನ ಕಾಡದಂತೆ ಕಾಳಜಿಯಿಂದ ನೋಡಿಕೊಳ್ಳಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಕೆ.ವೆಂಕಟೇಗೌಡ ಮಾತನಾಡಿ, ನೆಮ್ಮದಿ ಜೀವನಕ್ಕಾಗಿ ಹಿರಿಯರ ಮೇಲೆ ದಬ್ಬಾಳಿಕೆ, ದೌರ್ಜನ್ಯ, ವಂಚಿಸುವುದು, ಆಸ್ತಿ ಪಡೆದು ಮನೆಯಿಂದ ಹೊರ ಹಾಕುವುದು ಕಂಡುಬಂದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದರು.

ಡಾ.ಸಿ.ಎ.ಅರವಿಂದ, ವಕೀಲರಾದ ಕೆ.ಎಸ್. ಮನು, ಹಿರಿಯ ನಾಗರೀಕ ಸಂರಕ್ಷಣಾ ಕಾಯ್ದೆ ಬಗ್ಗೆ ಮಾತನಾಡಿದರು. ವಕೀಲ ಸಂಘದ ಅಧ್ಯಕ್ಷ ಗಂಗರಾಜು, ಕಾರ್ಯದರ್ಶಿ ಕೆ.ಎಸ್.ಮೋಹನ್‌ಕುಮಾರ್, ಶಿಕ್ಷಣಾಧಿಕಾರಿ ಎನ್‌ಸಿ.ಶಿವಮ್ಮ, ನಿರೀಕ್ಷಾಧಿಕಾರಿ ಸಿ.ಪಿ.ವಿಜಯ ಕುಮಾರ್, ವಕೀಲರಾದ ಪುಷ್ಪಲತಾ, ಕೆ ಜಿ.ರಘು, ಅರುಣ್, ಪ್ರಾಂಶುಪಾಲ ಸೋಮಶೇಖರ್ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಎಸ್.ಎಲ್.ಭೈರಪ್ಪರಿಗೆ ಬ್ರಾಹ್ಮಣ ಮಹಾಸಭಾದಿಂದ ನುಡಿನಮನ

ಕೆ.ಆರ್.ಪೇಟೆ, ಅ.15– ಇತ್ತೀಚಿಗೆ ನಿಧನರಾದ ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರಿಗೆ ನುಡಿನಮನ ಕಾರ್ಯಕ್ರಮವು ಪಟ್ಟಣದ ನಾಗಮಂಗಲ ರಸ್ತೆಯಲ್ಲಿನ ಬ್ರಾಹ್ಮಣರ ರಾಮ ಮಂದಿರದಲ್ಲಿ ನಡೆಯಿತು.

ಭೈರಪ್ಪ ಅವರ ನಿಕಟವರ್ತಿಯಾಗಿದ್ದ ಸಾಹಿತಿ ಎಂ.ಎಸ್.ಸೋಮಶೇಖರ್ ಮಾತನಾಡಿ ಡಾ.ಎಸ್.ಎಲ್.ಭೈರಪ್ಪರ ಕಾದಂಬರಿಗಳು ವ್ಯಕ್ತಿಯ ಮಾನಸಿಕ ಸಂದಿಗ್ದತೆ ಮತ್ತು ಭಾರತೀಯ ಪರಂಪರೆಯ ಮೆರುಗನ್ನು ಅನಾವರಣ ಮಾಡು ವಂತಹವಾಗಿವೆ. ಅವರು ಬಳಸಿರುವ ಕಥಾವಸ್ತು, ತಂತ್ರಗಾರಿಕೆ, ಮನುಷ್ಯನ ಆಂತರಿಕ ತುಮುಲಗಳನ್ನು ಧ್ವನಿಸುತ್ತವೆ. ನಮ್ಮ ಮನಸ್ಸಿನೊಳಗೆ ಘಟನೆಗಳು ತಾಕಲಾಟ ನಡೆಸಿದಂತೆ ಭಾಸವಾಗುತ್ತದೆ.ಹಾಗಾಗಿ ಅವರ ಕಾದಂಬರಿ ವಿಶ್ವ ವಿಖ್ಯಾತವಾಗಿವೆ. ಅವರ ಒಡನಾಡಿಯಾಗಿದ್ದ ನಮ್ಮ ಅಣ್ಣ ಎಂ.ಎಸ್.ಪ್ರಭು ಓದಿದ ನಂತರವೇ ಕೃತಿ ಅಚ್ಚಿಗೆ ಹೋಗುತ್ತಿತ್ತು. ಹಾಗಾಗಿ ನನಗೂ ಭೈರಪ್ಪ ಅವರೊಡನೆ ಒಡನಾಟ ಬೆಳೆಯಿತು ಎಂದು ಸ್ಮರಿಸಿದರು.

ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್ ಭೈರಪ್ಪ ಅವರ ಬದುಕು ಬರಹದ ಬಗ್ಗೆ ಪರಿಚಯ ಮಾಡಿಕೊಟ್ಟು ಮಾತನಾಡಿ, ಸನಾತನ ಪರಂಪರೆಯ ಬಗ್ಗೆ ಅಪಾರ ಒಲವು ಇಟ್ಟುಕೊಂಡಿದ್ದ ಅವರು ಪ್ರತಿ ಕಾದಂಬರಿ ರಚನೆಯ ಮುನ್ನ ವಿಷಯದ ತಲಸ್ಪರ್ಷಿ ಅಧ್ಯಯನ, ಸಂಶೋಧನೆ ನಡೆಸಿ ಚರ್ಚಿಸಿ ಬರೆಯುತಿದ್ದರು. ಜೀವನದ ಸಂಧ್ಯಾಕಾಲದಲ್ಲಿ ಅವರು ಮಣ್ಣಿನ ಮಗನಾಗಿ ತಮ್ಮ ಹುಟ್ಟೂರಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಿ ಕೆರೆಗೆ ನೀರು ಹರಿಸಿದ್ದು ಕಡಿಮೆ ಸಾಧನೆಯಲ್ಲ ಎಂದರು.



ಡಾ. ಎಸ್.ಎಲ್.ಭೈರಪ್ಪ ಅವರಿಗೆ ನುಡಿನಮನ ಕಾರ್ಯಕ್ರಮವು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅರವಿಂದ್ ಕಾರಂತ್ ಅಧ್ಯಕ್ಷತೆಯಲ್ಲಿ ನಡೆಯಿತು.

ಜಿಲ್ಲಾ ಬ್ರಾಹ್ಮಣ ಸಭಾದ ನಿರ್ದೇಶಕ ಶಂಕರನಾರಾಯಣ ಶಾಸ್ತ್ರಿ, ತಾಲೂಕು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅರವಿಂದ ಕಾರಂತ್ ಮಾತನಾಡಿದರು. ತಾಲೂಕು ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ರಘುರಾಮ್ ನಾಡಿಗ್, ಕಾರ್ಯದರ್ಶಿಗಳಾದ ಕುಪ್ಪಳ್ಳಿ ಸುಬ್ರಹ್ಮಣ್ಯ, ಸುಬ್ಬು ನರಸಿಂಹ, ಶ್ರೀ ರಾಮ ಮಂದಿರ ಸೇವಾ ಸಮಿತಿಯ ಅಧ್ಯಕ್ಷ ಜಿ.ಆರ್.ಅನಂತ ರಾಮಯ್ಯ ಸೇರಿದಂತೆ ಹಲವು ಗಣ್ಯರು ನೂರಾರು ಅಭಿಮಾನಿ ಗಳು ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸೂಳೆಕೆರೆ ಅಭಿವೃದ್ಧಿಗೆ ಕ್ರಮ

ಭಾರತೀನಗರ, ಅ.15–ಚಿಕ್ಕರಸಿನಕೆರೆ ಹೋಬಳಿಯ ಮುಟ್ಟನಹಳ್ಳಿ–ಅಂಬರಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಂತಿರುವ ಸೂಳೆಕೆರೆಯನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಕೆ.ಎಂ. ಉದಯ್ ತಿಳಿಸಿದರು.

ಕಾವೇರಿ ನೀರಾವರಿ ನಿಗಮದ ವತಿಯಿಂದ ಸೂಳೆಕೆರೆ ಜೀರ್ಣೋದ್ಧಾರ, ರೈತ ಮುಖಂಡರ ಜೊತೆ ಸಮಾಲೋಚನಾ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಚಿಕ್ಕರಸಿನಕೆರೆ ಹೋಬಳಿ ರೈತರು ಶೇ.90 ರಷ್ಟು ಕೃಷಿಗೆ ಅವಲಂಬಿತ ರಾಗಿದ್ದಾರೆ. ಹಾಗಾಗಿ ಈ ಭಾಗದ ರೈತರು ಸೂಳೆಕೆರೆ ನೀರನ್ನೇ ಅವಲಂಬಿಸಿಕೊಂಡಿದ್ದು, ಇದು ಈ ಭಾಗಕ್ಕೆ ಮಿನಿ ಅಣೆಕಟ್ಟೆ ಇದ್ದಂತೆ. ಇದನ್ನು ಮನಗಂಡು ಕೆರೆಯ ಜೀರ್ಣೋದ್ಧಾರ ಹಾಗೂ ನಾಲೆಗಳ ಆಧುನೀಕರಣ ಅಭಿವೃದ್ಧಿಗೆ ಶಾಶ್ವತ ಪರಿಹಾರ ಹುಡುಕಲು ಮುಂದಾಗಿದ್ದೇನೆ ಇದಕ್ಕೆ ರೈತರು ನನ್ನೊಂದಿಗೆ ಕೈಜೋಡಿಸಿ ಸಹಕರಿಸಬೇಕೆಂದು ಹೇಳಿದರು.

ಜಿ.ಪಂ ಮಾಜಿ ಅಧ್ಯಕ್ಷ ಬಿ.ಬಸವರಾಜು ಮಾತನಾಡಿ, ಕ್ಷೇತ್ರದಲ್ಲಿ ಒಂದು ಕೆರೆಗೆ 84 ಕೋಟಿ ಅನುದಾನ ವನ್ನು ತಂದಿರುವ ಉದಾಹರಣೆ ಹಿಂದೆಂದೂ ಇಲ್ಲ. ಇಂತಹ ಯೋಜನೆಯಿಂದ ರೈತರಿಗೆ ಶಾಶ್ವತವಾಗಿ ಕೊನೆಯ ಭಾಗದವರೆಗೂ ನೀರು ತಲುಪಲಿದೆ. ಯಾವುದೇ ಆಕ್ಷೇಪಣೆಯನ್ನು ವ್ಯಕ್ತಪಡಿಸದೆ ಅಭಿವೃದ್ಧಿಯನ್ನು ಬೆಂಬಲಿಸಬೇಕೆಂದು ರೈತರಲ್ಲಿ ಮನವಿ ಮಾಡಿದರು.

ನಿವೃತ್ತ ಸರಕಾರಿ ನೌಕರರಿಗೆ ಸನ್ಮಾನ



ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಪಾಲಹಳ್ಳಿಯ ಪಿ.ಬಿ.ಮಹದೇವ, ಎಸ್.ರಮೇಶ, ಕೆ.ಬಿ.ಚಂದ್ರಕುಮಾರ್, ಎಸ್.ಪಾಪಣ್ಣ, ಪಿ.ಕೆ.ಕುಮಾರ, ಪ್ರಭಾಕರ್ ಶೆಟ್ಟಿ ಜೋನೇಸ್ ಹೈದಾಲಿಖಾನ್, ವಿ.ಎಸ್. ವಿಜಯಲಕ್ಷ್ಮಿ ಅವರನ್ನು ಶಾಸಕ ರಮೇಶ್ ಬಂಡಿಸಿದ್ದೇಗೌಡ ಸನ್ಮಾನಿಸಿದರು ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿಎಸ್.ಚಂದ್ರಶೇಖರ್ ನಿವೃತ್ತ ಶಿಕ್ಷಕ ಪುಟ್ಟಮರಿಗೌಡ, ಸಿ ನಾಗರಾಜು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಗ್ರೇಟರ್ ಮೈಸೂರು ಯೋಜನೆ

ನಾಗರಿಕರ ಬೇಡಿಕೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಅಧಿಕ ಸಂಪನ್ಮೂಲ ಕ್ರೋಢೀಕರಿಸುವ ಮೂಲಕ ನಾಗರಿಕ ಸೌಕರ್ಯ ಕಲ್ಪಿಸುವ ದೂರದೃಷ್ಟಿಯನ್ನು ಹೊಂದಲಾಗಿತ್ತು. ಅಭಿವೃದ್ಧಿ ಹಾಗೂ ಮೂಲ ಸೌಕರ್ಯ ದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳು ಕೂಡ ಗ್ರೇಟರ್ ಮೈಸೂರು ಯೋಜನೆ ಸಾಕಾರಗೊಳಿಸಲು ಒಲವು ಹೊಂದಿದ್ದರು.

ಸರ್ಕಾರದ ನಿಯಮಾನುಸಾರ ಮೈಸೂರು ಜಿಲ್ಲಾಡಳಿತವು ಕಾರ್ಯ ಸಾಧ್ಯತೆ ಬಗ್ಗೆ ಅಧ್ಯಯನ ನಡೆಸಿ ಮೈಸೂರು ಹೊರ ವಲಯದ ಸ್ಥಳೀಯ ಸಂಸ್ಥೆಗಳನ್ನು ಮೈಸೂರು ನಗರಪಾಲಿಕೆ ವ್ಯಾಪ್ತಿಗೆ ತರುವ ಬಗ್ಗೆ ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಅದರ ಪ್ರಕಾರ ಮೈಸೂರು ಜನಸಂಖ್ಯೆ 13.30 ಲಕ್ಷದಿಂದ 16.80 ಲಕ್ಷಕ್ಕೆ ಏರಿಕೆಯಾಗುತ್ತಿತ್ತು. ಪ್ರಮುಖವಾಗಿ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯಲ್ಲಿ ಮೈಸೂರಿಗೆ ಹೊಂದಿಕೊಂಡಂತೆ ಅಭಿವೃದ್ಧಿಪಡಿಸಲಾದ ವಸತಿ ಬಡಾವಣೆಗಳು ಗ್ರೇಟರ್ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುತ್ತಿದ್ದವು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಮುಡಾ ಅಭಿವೃದ್ಧಿಪಡಿಸಿದ ಹಾಗೂ ಅನುಮೋದಿಸಿರುವ ಸುಮಾರು 900 ಬಡಾವಣೆಗಳನ್ನು ಈಗ ಆಯಾಯ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ. ಹಾಗಾಗಿ ಈ ಪ್ರದೇಶಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಆಯಾಯ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗಿದೆ. ಆದರೆ ಅಭಿವೃದ್ಧಿಗೆ ಆ ಸ್ಥಳೀಯ ಸಂಸ್ಥೆಗಳಲ್ಲಿ ಆರ್ಥಿಕ ಕೊರತೆ ಎದ್ದು ಕಾಣುತ್ತಿದೆ ಯಾದ್ದರಿಂದ ಈ ಸವಾಲುಗಳನ್ನು ಗಮನದಲ್ಲಿರಿಸಿಕೊಂಡು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಬೃಹತ್ ಮಹಾನಗರ ಪಾಲಿಕೆ ಯೋಜನೆಯನ್ನು ಬಹಳ ಹಿಂದಿನಿಂದಲೂ ಬೆಂಬಲಿಸುತ್ತಾ ಬಂದಿದ್ದರು.

ಆದಾಗ್ಯೂ, ರಾಜಕೀಯ ಮತ್ತು ಆಡಳಿತಾತ್ಮಕ ಕಾರಣಗಳನ್ನು ಮುಂದಿಟ್ಟು ಕೆಲ ಕಾಂಗ್ರೆಸ್ ನಾಯಕರು ಹಾಗೂ ಕಾರ್ಪೋರೇಟರ್‌ಗಳು ಈ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅದಕ್ಕೆ ಪೂರಕವಾಗಿ ಸರ್ಕಾರದ ಆರ್ಥಿಕ ಇಲಾಖೆಯೂ ಹಣಕಾಸಿನ ಕೊರತೆ ಮುಂದೊಡ್ಡಿ ಮೈಸೂರು ಪಾಲಿಕೆಯನ್ನು ಗ್ರೇಡ್–1 ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸುವ ಯೋಜನೆಯನ್ನು ಸದ್ಯಕ್ಕೆ ಕೈಬಿಡುವ ನಿರ್ಧಾರಕ್ಕೆ ಬಂದಿದೆ.

> “ ಪ್ರಸ್ತುತ ಸರ್ಕಾರದ ಹಣಕಾಸು ಪರಿಸ್ಥಿತಿ ಸರಿಯಿಲ್ಲ ಎಂಬ ಕಾರಣಕ್ಕೆ ಹಣಕಾಸು ಇಲಾಖೆ ಮೈಸೂರು ಮಹಾನಗರ ಪಾಲಿಕೆಯನ್ನು ಬೃಹತ್ ಮೈಸೂರು ನಗರಪಾಲಿಕೆ ಪ್ರಸ್ತಾವನೆಯನ್ನು ತಿರಸ್ಕರಿಸಿದೆ. ಸ್ಥಳೀಯ ಜನಪ್ರತಿನಿಧಿಗಳಿಲ್ಲದ ಕಾರಣ ಪಾಲಿಕೆಗೆ ನೀಡಿದ್ದ 15ನೇ ಹಣಕಾಸು ಆಯೋಗದ ಅನುದಾನವು ವಾಪಸ್ ಹೋಗಿದೆ. ಮುಖ್ಯಮಂತ್ರಿಗಳಿಗೆ ಮೈಸೂರಿನ ಅಭಿವೃದ್ಧಿ ಬಗ್ಗೆ ಚಿಂತೆಯಿಲ್ಲ. ಆದ್ಯತೆ ಮೇರೆಗೆ ಚುನಾವಣೆ ನಡೆಸಿದಲ್ಲಿ ಮೈಸೂರಿನ ಸಮಗ್ರ ಅಭಿವೃದ್ಧಿ ಸಾಧ್ಯವಾಗಲಿದೆ. **–ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು–ಕೊಡಗು ಸಂಸದರು.**

> “ ಮೈಸೂರು ರಿಂಗ್ ರಸ್ತೆಗೆ ಹೊಂದಿಕೊಂಡಿರುವ ಗ್ರಾಮ ಪಂಚಾಯಿತಿಗಳು, ನಗರಸಭೆ, ಪಟ್ಟಣ ಪಂಚಾಯಿತಿ ಒಳಗೊಂಡಂತೆ ಬೃಹತ್ ಮೈಸೂರು ಮಹಾನಗರಪಾಲಿಕೆ ಮಾಡುವ ಯೋಜನೆಯನ್ನು 2020ರಲ್ಲೇ ವಿ. ಸೋಮಣ್ಣ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ರೂಪಿಸಲಾಗಿತ್ತು. 9 ಗ್ರಾಮ ಪಂಚಾಯಿತಿಗಳು, 4 ಪಟ್ಟಣ ಪಂಚಾಯಿತಿ ಹಾಗೂ 1 ನಗರ ಸಭೆಯನ್ನು ಸೇರಿಸಿ ಪಾಲಿಕೆಯನ್ನ ಉನ್ನತೀಕರಿಸಲು ಚಿಂತಿಸ ಲಾಗಿತ್ತು. ಆದರೆ ಶಿವಕುಮಾರ್ ಮೇಯರ್ ಆಗಿದ್ದ ಅವಧಿಯ ಕಡೇ ಪಾಲಿಕೆ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲು ಮಂಡಿಸಲಾಗಿತ್ತಾದರೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಕಾಂಗ್ರೆಸ್ ಕಾರ್ಪೋರೇಟರ್‌ಗಳು ಹಾಗೂ ಪಾಲಿಕೆ ಅಧಿಕಾರಿಗಳನ್ನು ಸಭೆಯ ನೆಪದಲ್ಲಿ ಬೆಂಗಳೂರಿಗೆ ಕರೆಸಿಕೊಂಡು ಅಂದಿನ ಪಾಲಿಕೆ ಕೌನ್ಸಿಲ್ ಸಭೆ ನಡೆಸಲು ಬಿಡಲಿಲ್ಲವಾದ್ದರಿಂದ ಅದರ ಬಗ್ಗೆ ನಿರ್ಣಯ ಮಾಡಲು ಸಾಧ್ಯವಾಗಲಿಲ್ಲ. ಬೆಳೆಯುತ್ತಿರುವ ಮೈಸೂರು ನಗರಕ್ಕೆ ಭವಿಷ್ಯದ ದೃಷ್ಟಿಯಿಂದ ಹೊರ ವರ್ತುಲ ರಸ್ತೆ ಹಾಗೂ ಮೆಟ್ರೋ ರೈಲು ಯೋಜನೆಯನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಜನಸಂಖ್ಯೆಗನು ಗುಣವಾಗಿ ಬೃಹತ್ ಮೈಸೂರು ಮಹಾನಗರ ಪಾಲಿಕೆ ಮಾಡುವ ಸಂಬಂಧ ಅಂದು ಪಾಲಿಕೆ ಆಯುಕ್ತರಾಗಿದ್ದ, ಹಾಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಆದರೆ ಮುಖ್ಯಮಂತ್ರಿಗಳಿಗೆ ವಿಮಾನ ನಿಲ್ದಾಣ ವಿಸ್ತರಣೆ ಸೇರಿದಂತೆ ಇಲ್ಲಿನ ಯಾವುದೇ ಅಭಿವೃದ್ಧಿ ಬಗ್ಗೆ ಆಸಕ್ತಿಯಿಲ್ಲ. **– ಪ್ರತಾಪ್ ಸಿಂಹ, ಮಾಜಿ ಸಂಸದ.**

ಸಾಮಾಜಿಕ ಶಕ್ತಿ ಬಂದರೆ ಸಮಸಮಾಜ ನಿರ್ಮಾಣ

ಎಸ್‌ಇಪಿ/ಟಿಎಸ್‌ಪಿ ಕಾಯ್ದೆ ಮಾಡಿದ್ದು. ಕಾಯ್ದೆ ಮಾಡಿದ ಮೇಲೆ 15 ಸಾವಿರ ಕೋಟಿ ರೂ. ಮೀಸಲಿಡಲಾಗಿತ್ತು. ಈಗ 42 ಸಾವಿರ ಕೋಟಿ ರೂ. ಆಗಿದೆ. ಬಹಳ ಜನರಿಗೆ ಎಸ್‌ಇಪಿ/ಟಿಎಸ್‌ಪಿಯ ಮಹತ್ವವೇ ಗೊತ್ತಿಲ್ಲ. ಜೊತೆಗೆ ಗುತ್ತಿಗೆಯಲ್ಲಿ ಮೀಸಲಾತಿ, ಗ್ಯಾರಂಟಿ ಯೋಜನೆಗಳು, ಪರಿಶಿಷ್ಟ ಜಾತಿ ಅಧಿಕಾರಿಗಳ ಪ್ರಮೋಷನ್ ಅನ್ನು ಕೇಂದ್ರ ಸರ್ಕಾರ ಕಿತ್ತು ಹಾಕಿದ್ದರೂ ರಾಜ್ಯದಲ್ಲಿ ಮತ್ತೆ ಜಾರಿ ಮಾಡಲಾಯಿತು. ಇಂತಹ ಶಕ್ತಿ ತುಂಬುವ ಕೆಲಸಗಳನ್ನು ಮಾಡದಿದ್ದರೆ ಸುಮ್ಮನೆ ಸಮಾನತೆ ಬರುತ್ತಾ ಎಂದು ಪ್ರಶ್ನಿಸಿದರು.

ಶಕ್ತಿ ತುಂಬಿದರೆ ತಾನೇ ಬದಲಾವಣೆ ಸಾಧ್ಯ: ಶಕ್ತಿ ಯೋಜನೆಯಿಂದ ಮಹಿಳೆಯರು ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ಇವತ್ತು ಹಾಸನಾಂಬೆ ದೇವಸ್ಥಾನಕ್ಕೆ ಹೋಗಿದ್ದೆ. ಅಲ್ಲಿದ್ದ ಬಹುತೇಕ ಮಹಿಳೆಯರೇ.. ಸ್ವಾವಲಂಬಿಯಾಗಿ ಜೀವನ ಮಾಡಲು ಪ್ರಯತ್ನ ನಡೆಸುತ್ತಿದ್ದಾರೆ. ಪಕ್ಷಾತೀತವಾಗಿ, ಧರ್ಮಾತೀತವಾಗಿ ಪ್ರತೀ ತಿಂಗಳು 4–5 ಸಾವಿರ ರೂ. ಒಂದು ಕುಟುಂಬಕ್ಕೆ ತಲುಪುತ್ತಿದೆ. ಕೊಂಡುಕೊಳ್ಳುವ ಶಕ್ತಿ ಇದ್ದರೆ ತಾನೇ ಬದಲಾವಣೆ ಸಾಧ್ಯ. ಈ ನಿಟ್ಟಿನಲ್ಲಿ ಇಂತಹ ಬೌದ್ಧ ಸಮ್ಮೇಳನಗಳ ಜೊತೆಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬುವ ಕೆಲಸಗಳನ್ನು ಮಾಡಬೇಕು. ಗುಲಾಮಗಿರಿ ಮನಸ್ಥಿತಿಯನ್ನು ಕಿತ್ತು ಹಾಕುವ ಕೆಲಸ ಮಾಡಬೇಕು. ಎಲ್ಲಿಯವರೆಗೆ ಸ್ವಾಭಿಮಾನಿಗಳಾಗು ವುದಿಲ್ಲವೋ ಅಲ್ಲಿಯವರೆಗೆ ಗುಲಾಮಗಿರಿ ತೆಗೆದುಹಾಕಲು ಸಾಧ್ಯವಿಲ್ಲ ಎಂದರು.

ಬುದ್ಧ, ಬಸವ, ಅಂಬೇಡ್ಕರ್ ತತ್ವಾದರ್ಶಗಳು ಎಲ್ಲರಿಗೂ ಗೊತ್ತಾಗಬೇಕು: ಮೈಸೂರಿನಲ್ಲಿ ದೊಡ್ಡ ಮಟ್ಟದಲ್ಲಿ ಬೌದ್ಧ ಮಹಾ ಸಮ್ಮೇಳನ ಆಯೋಜನೆ ಮಾಡಲಾಗಿದೆ. ಇದರ ಉದ್ದೇಶ ಜನರಿಗೆ ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ತತ್ವ, ಆದರ್ಶಗಳನ್ನು ತಿಳಿಸುವುದಾಗಿದೆ. ಸಾಮಾಜಿಕ ಬದಲಾವಣೆ ಅಷ್ಟು ಸಲಭವಲ್ಲ. ಬುದ್ಧರು ಅಂದೇ... ಸತ್ಯ, ಶಾಂತಿ ಮತ್ತು ಅಹಿಂಸಾ ಸಂದೇಶ ಗಳ ಮೂಲಕ ಪ್ರಯತ್ನ ಪಟ್ಟರೆ, 12ನೇ ಶತಮಾನದಲ್ಲಿ ಬಸವಣ್ಣ ನಂತರ ಅಂಬೇಡ್ಕರ್ ಪ್ರಯತ್ನ ಮಾಡಿದರು. ಅಂಬೇಡ್ಕರ್ ಹಿಂದೂ ಧರ್ಮ ಸುಧಾರಣೆ ಮಾಡಲು ಪ್ರಯತ್ನ ಮಾಡಿ, ವಿಫಲವಾಗಿ ಬೌದ್ಧ ಧರ್ಮ ಸ್ವೀಕರಿಸಿದರು. ಹುಟ್ಟು ನನ್ನ ಕೈಯ್ಯಲ್ಲಿ ಇಲ್ಲ ಹಾಗಾಗಿ ಹಿಂದೂವಾಗಿ ಹುಟ್ಟಿದ್ದೇನೆ... ಸಾವು ನನ್ನ ಕೈಯ್ಯಲ್ಲಿ ಇದೆ... ಹಿಂದೂವಾಗಿ ಸಾಯ ಲಾರೆ ಎಂದು ಬೌದ್ಧ ಧರ್ಮಕ್ಕೆ ಸೇರಿ ದರು ಎಂದು ತಿಳಿಸಿದರು.



ಮೂಢನಂಬಿಕೆ, ಕಂದಾಚಾರ ಹೋಗಬೇಕು ಎಂದು ಬುದ್ಧ, ಬಸವ ಮತ್ತು ಡಾ.ಅಂಬೇಡ್ಕರ್ ಹೇಳಿದರೆ ಹೊರತು ಯಾವ ಜಾತಿಯ ಪರ–ವಿರೋಧ ಮಾತನಾಡಿದವರಲ್ಲ. ಜಾತಿ ವ್ಯವಸ್ಥೆಯಲ್ಲಿ ಬದ ಲಾವಣೆಯಾಗಬೇಕಾದರೆ, ಎಲ್ಲರಿಗೂ ಶಕ್ತಿ ತುಂಬುವ ಕೆಲಸಗಳಾಗಬೇಕು ಎಂದು ಹೇಳಿದರು.

ನಿಮಗೂ ಬೆದರಿಕೆಗಳು ಬರುತ್ತವೆ!: ಪ್ರಿಯಾಂಕ್ ಖರ್ಗೆ ಏನ್ ಹೇಳಿದರು... ಸರ್ಕಾರಿ ಸ್ಥಳಗಳಲ್ಲಿ ಸಂಘಟನೆಗಳ ಕಾರ್ಯಕ್ರಮ ನಡೆಸಬಾರದು ಎಂದು ಹೇಳಿದ್ದಕ್ಕೆ ಬೆದರಿಕೆಗಳು ಬರುತ್ತಿವೆ. ನೀವಿಲ್ಲಿ ಬೌದ್ಧ ಸಮ್ಮೇಳನ ಮಾಡಿದ್ದೀರಿ ನಿಮಗೂ ಬೆದರಿಕೆಗಳು ಬರಬಹುದು ಎಂದ ಮುಖ್ಯಮಂತ್ರಿಗಳು, ಸಮಾಜದಲ್ಲಿ

ಪೂಜ್ಯ ಮನೋರಕ್ಷಿತ ಭಂತೇಜಿ, ಗಾಂಧಿನಗರ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಗೃಹ ಸಚಿವ ಡಾ.ಜಿ.ಪರಮೇಶ್ವರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿ ಹೊಳಿ, ಶಾಸಕರಾದ ಪುಟ್ಟರಂಗಶೆಟ್ಟಿ, ನರೇಂದ್ರಸ್ವಾಮಿ, ಎ.ಆರ್.ಕೃಷ್ಣಮೂರ್ತಿ, ರವಿಶಂಕರ್, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕರಾದ ಕೋಟೆ ಎಂ.ಶಿವಣ್ಣ, ಹೆಜ್ಜಿಗೆ ಶ್ರೀನಿವಾಸಯ್ಯ, ಎಂ.ಕೆ.ಸೋಮಶೇಖರ್, ಕಳಲೆ ಕೇಶವಮೂರ್ತಿ, ಎನ್.ಮಹೇಶ್, ಮಾಜಿ ಎಂಎಲ್‌ಸಿ ಡಿ.ಎಸ್.ವೀರಯ್ಯ, ಬಿ.ಬಿ.ಲಿಂಗಯ್ಯ, ಬಾಲರಾಜ್, ವೇಣುಗೋಪಾಲ್, ಗ್ಯಾರಂಟಿ ಯೋಜನೆ ಉಪಾಧ್ಯಕ್ಷ ಪುಷ್ಪಾ ಅಮರನಾಥ್, ಮಾಜಿ ಮೇಯರ್ ಪುರುಷೋತ್ತಮ್, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಚುನಾವಣೆ ಸುಳಿವು ನೀಡಿದ ಸಿದ್ದರಾಮಯ್ಯ

ತಯಾರಿ ನಡೆಸುವಂತೆ ಸಿಎಂ ಸಂಪುಟ ಸಚಿವರಿಗೂ ಎಲ್ಲಾ ಶಾಸಕರಿಗೂ ಈಗಾಗಲೇ ಸೂಚನೆ ಕೊಟ್ಟಿದ್ದಾರೆ.

ಆರ್‌ಎಸ್‌ಎಸ್‌ಗೆ ಮೂಗುದಾರ: ಯಾವುದೇ ಸಂಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿ ಜನರಿಗೆ ತೊಂದರೆ ಕೊಡಬಾರದು. ತಮಿಳುನಾಡಿನಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಅದನ್ನು ಪರಿಶೀಲಿಸಿ ನಾವು ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದು ಆರ್‌ಎಸ್‌ಎಸ್ ಚಟುವಟಿಕೆಗಳನ್ನು ಸರ್ಕಾರಿ ಸ್ಥಳಗಳಲ್ಲಿ ನಿಯಂತ್ರಿಸುವ ಬಗ್ಗೆ ಪ್ರತಿಕ್ರಿಯೆ ನೀಡಿದರು.

ಜೆಡಿಎಸ್ ಶಾಸಕರಿಂದ ಬಂದಿರುವ ಅನುದಾನ ತಾರತಮ್ಯ ಆರೋಪ ಕುರಿತು ಪ್ರತಿಕ್ರಿಯೆ ನೀಡಿದ ಸಿಎಂ, ಅವರು ಅಧಿಕಾರದಲ್ಲಿದ್ದಾಗ ಎಷ್ಟು ಅನುದಾನ ನೀಡಿದರು. ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರ ಇದ್ದಾಗ ನಮ್ಮ ಶಾಸಕರಿಗೆ ಎಷ್ಟು ಹಣ ಕೊಟ್ಟರು. ಈಗ ಸುಖಾಸುಮ್ಮನೆ ಆರೋಪ ಮಾಡುವುದು ಸರಿಯಲ್ಲ. ಸುಳ್ಳು ಹೇಳಿ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ.

ಇತ್ತೀಚಿನ ಡಿನ್ನರ್ ಪಾರ್ಟಿ ವಿವಾದ ಕುರಿತು ಸ್ಪಷ್ಟನೆ ನೀಡಿದ ಅವರು, ಆ ಔತಣ ಕೂಟಕ್ಕೆ ರಾಜಕೀಯ ಸಂಬಂಧ ಇಲ್ಲ. ನಾವು ಆಗಾಗ ಕೂಡಿ ಊಟ ಮಾಡುತ್ತೇವೆ. ಇದಕ್ಕೆ ರಾಜಕೀಯದ ಥಳುಕು ಹಾಕುವುದು ಬೇಡ ಎಂದು ಪ್ರಕರಣದ ಬಗ್ಗೆ ಕಿಡಿ ಹಚ್ಚಿದ ವಿಪಕ್ಷಗಳ ವಿರುದ್ಧ ಗರಂ ಆದರು. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಶಾಸಕ ಶಿವಲಿಂಗೇಗೌಡ ಹಾಗೂ ಜಿಲ್ಲಾಡಳಿತ ಅತ್ಯುತ್ತಮ ವ್ಯವಸ್ಥೆ ಮಾಡಿದೆ. ಪ್ರತಿವರ್ಷದಂತೆ ಈ ವರ್ಷವೂ ಹಾಸನಾಂಬೆ ದೇವಿ ದರ್ಶನಕ್ಕೆ ಬಂದಿದ್ದೇನೆ. ದೇವಿಯ ಆಶೀರ್ವಾದ ಎಲ್ಲರ ಮೇಲೂ ಇರಲಿ ಎಂದು ಹೇಳಿದರು. ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಶಾಸಕ ಶಿವಲಿಂಗೇಗೌಡ ಹಾಗೂ ಜಿಲ್ಲಾಡಳಿತ ಅತ್ಯುತ್ತಮ ವ್ಯವಸ್ಥೆ ಮಾಡಿದೆ. ಎಲ್ಲರಿಗೂ ಧನ್ಯವಾದಗಳು ಎಂದರು.

ಪಿಯುಸಿ–30 ಪಾಸ್

ಎಸ್‌ಎಸ್‌ಎಲ್‌ಸಿ ಅಂತಿಮ ಲಿಖಿತ ಪರೀಕ್ಷೆಯಲ್ಲಿ 13 ಅಂಕಗಳನ್ನು ಪಡೆದರೆ ಪಾಸ್: ಆಂತರಿಕ ಮತ್ತು ಬಾಹ್ಯ ಅಂಕಗಳನ್ನು ಸೇರಿಸಿ ಒಟ್ಟು 33 ಅಂಕ ಪಡೆದ ವಿದ್ಯಾರ್ಥಿಯನ್ನು ಉತ್ತೀರ್ಣ ಎಂದು ಘೋಷಿಸಲಾಗುತ್ತದೆ. ಈ ಹಿಂದೆ ಇದು ಶೇ.35 ಇತ್ತು. ಈ ಬದಲಾವಣೆಯು ಸಿಬಿಎಸ್‌ಸಿ ಮಾದರಿಯನ್ನು ಅನುಸರಿಸಲಿದ್ದು, ರಾಜ್ಯ ಪಠ್ಯಕ್ರಮದ ಶಾಲೆಗಳಿಗೂ ಅನ್ವಯಿಸುತ್ತದೆ. ಪ್ರತಿ ವಿಷಯದಲ್ಲಿ ಆಂತರಿಕ ಮೌಲ್ಯ ಮಾಪನದಲ್ಲಿ ಪೂರ್ಣ 20ಕ್ಕೆ 20 ಅಂಕಗಳನ್ನು ಪಡೆದರೆ, ಲಿಖಿತ ಪರೀಕ್ಷೆಯಲ್ಲಿ ಕೇವಲ ಶೇ.13 ಅಂಕಗಳನ್ನು ಪಡೆದರೂ ವಿದ್ಯಾರ್ಥಿ ಉತ್ತೀರ್ಣರಾಗಬಹುದು. ಇದುವರೆಗೆ ಆಂತ ರಿಕ ಪರೀಕ್ಷೆಯಲ್ಲಿ ಪಡೆದ ಪೂರ್ಣ ಅಂಕಗಳನ್ನು ಉತ್ತೀರ್ಣಕ್ಕೆ ಪರಿಗಣಿಸುತ್ತಿರಲಿಲ್ಲ. ಉದಾಹರಣೆಗೆ, 20ಕ್ಕೆ 20 ಅಂಕ ಪಡೆದರೂ, ಅದರಲ್ಲಿ ಕೇವಲ 7 ಅಂಕಗಳನ್ನು ಮಾತ್ರ ಲಿಖಿತ ಪರೀಕ್ಷೆಯ ಅಂಕಗಳೊಂದಿಗೆ ಸೇರಿಸಲಾಗುತ್ತಿತ್ತು. ಲಿಖಿತ ಪರೀಕ್ಷೆಯಲ್ಲಿ ಕಡ್ಡಾಯವಾಗಿ 28 ಅಂಕಗಳನ್ನು ಪಡೆಯಬೇಕಿತ್ತು.

ಈ ನಿಯಮವು 2025–26ನೇ ಸಾಲಿನಿಂದ ಜಾರಿಗೆ ಬರಲಿದೆ. ಈ ವರ್ಷ ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು, ಪುನರಾವರ್ತಿತ ಅಭ್ಯರ್ಥಿಗಳು ಮತ್ತು ಖಾಸಗಿ ಅಭ್ಯರ್ಥಿಗಳಿಗೂ ಇದು ಅನ್ವಯವಾಗಲಿದೆ. ಈಗ ಲಿಖಿತ ಪರೀಕ್ಷೆಯಲ್ಲಿ ಶೇಕಡಾ 28 ಅಂಕಗಳ ಕಡ್ಡಾಯ ನಿಯಮವನ್ನು ತೆಗೆದುಹಾಕಲಾಗಿದೆ. ಒಟ್ಟಾರೆಯಾಗಿ 625 ಅಂಕಗಳಿಗೆ 206 ಅಂಕಗಳನ್ನು ಗಳಿಸಿದರೆ ಮತ್ತು ಪ್ರತಿ ವಿಷಯದ ಒಟ್ಟು ಅಂಕಗಳಲ್ಲಿ ಶೇ.30 ಅಂಕಗಳನ್ನು ಪಡೆದರೆ ಅಭ್ಯರ್ಥಿ ಉತ್ತೀರ್ಣನೆಂದು ಘೋಷಿಸಲಾಗುತ್ತದೆ. ಈ ಬದಲಾವಣೆಯು ರಾಜ್ಯ ಪಠ್ಯಕ್ರಮದ ಪರೀಕ್ಷಾ ವ್ಯವಸ್ಥೆಯನ್ನು ಸಿಬಿಎಸ್‌ಇ ಮಾದರಿಗೆ ಹೋಲಿಸಿದರೆ ಸುಲಭಗೊಳಿಸುತ್ತದೆ.

ಸರ್ಕಾರಿ ಜಾಗಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸುವ ವಿಚಾರ

ತಮಿಳುನಾಡಿನಿಂದ ವರದಿ ಪಡೆದು ಅಧ್ಯಯನ ನಡೆಸಿ ತೀರ್ಮಾನ

- ಮೈಸೂರಲ್ಲಿ ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ
- ತಮಿಳುನಾಡಿನ ವರದಿ ಪರಾಮರ್ಶೆಗೆ ಸಿಎಸ್‌ಗೆ ಸೂಚನೆ
- ಪ್ರಿಯಾಂಕ್ ಖರ್ಗೆ ಸಲಹೆ ಗಂಭೀರವಾಗಿ ಪರಿಗಣಿಸಿದ್ದೇವೆ
- ದುಷ್ಟ ಶಕ್ತಿ ಬೆದರಿಕೆಗೆ ಜಗ್ಗಲ್ಲ

ಮೈಸೂರು, ಅ.15(ಬಿಎಲ್‌ಯು)– ತಮಿಳುನಾಡಿನ ಸರ್ಕಾರಿ ಜಾಗಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿರ್ಬಂಧಿಸಿರುವ ಬಗ್ಗೆ ವರದಿ ತರಿಸಿಕೊಂಡು ಪರಾಮರ್ಷೆ ಮಾಡಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನ ಆದೇಶದ ಸಂಪೂರ್ಣ ವರದಿ ತರಿಸಿಕೊಳ್ಳುತ್ತಿದ್ದೇವೆ. ತರುವಾಯ ವರದಿಯನ್ನು ಅಧ್ಯಯನ ಮಾಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರಿಗೆ ಸೂಚನೆ ನೀಡಿದ್ದೇನೆ ಎಂದರು.

ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸುವ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಿರುವ ಪ್ರಿಯಾಂಕ್ ಖರ್ಗೆ ಅವರಿಗೆ ದುಷ್ಟ ಶಕ್ತಿಗಳು ಬೆದರಿಕೆ ಹಾಕುತ್ತಿವೆ. ಅವರ ಬೆದರಿಕೆಗೆ ನಾವು ಜಗ್ಗುವುದಿಲ್ಲ ಎಂದು ತಿರುಗೇಟು ನೀಡಿದ ಸಿದ್ದರಾಮಯ್ಯ ಅವರು, ಪ್ರಿಯಾಂಕ್ ಖರ್ಗೆ ಅವರು ಸಲಹೆ ನೀಡಿರುವುದರಲ್ಲಿ ತಪ್ಪೇನಿದೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

> “ ಬೆಂಗಳೂರು ಬಿಟ್ಟರೆ ರಾಜ್ಯದ ಬೇರೆ ಯಾವ ಜಿಲ್ಲೆಯಲ್ಲೂ ಜಾತಿಗಣತಿ ಸಮೀಕ್ಷೆ ವಿಳಂಬವಾಗಿಲ್ಲ. ಈ ಹಿನ್ನೆಲೆ ಜಾತಿ ಸಮೀಕ್ಷೆ ದಿನಾಂಕವನ್ನು ವಿಸ್ತರಣೆ ಮಾಡುವುದಿಲ್ಲ. –ಸಿದ್ದರಾಮಯ್ಯ

ಪ್ರಿಯಾಂಕ್ ಖರ್ಗೆ ಅವರ ಸಲಹೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಈ ಸಂಬಂಧ ಪರಾಮರ್ಷೆ ನಡೆಸಿ ನಿರ್ಧಾರ ಮಾಡುತ್ತೇವೆ ಎಂದರು.

ಧಮ್ಮಿದ್ದರೆ ಬ್ಯಾನ್ ಮಾಡಿ ಎಂದು ಬಿಜೆಪಿ ನಾಯಕರು ಹೇಳುತ್ತಾರೆ. ಆದರೆ ಕಳೆದ ಚುನಾವಣೆಯಲ್ಲಿ ಇದೇ ರೀತಿ ಹೇಳಿ ಅವರಿಗೆ ಯಾವ ಸ್ಥಿತಿ ಆಯಿತು ಎಂದು ಗೊತ್ತಲ್ಲವೇ ಎಂದು ಸಿದ್ದರಾಮಯ್ಯ ಲೇವಡಿ ಮಾಡಿದರು.

ಬಿಜೆಪಿ ಶಾಸಕರಿಗೆ ಅನುದಾನ ನೀಡಲು ಸರ್ಕಾರ ತಾರತಮ್ಯ ಮಾಡುತ್ತಿದೆ ಎಂಬ ಆರೋಪವನ್ನು ಸಿದ್ದರಾಮಯ್ಯ ಈ ವೇಳೆ ಅಲ್ಲಗಳೆದರು. ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ಶಾಸಕರಿಗೆ ಅನುದಾನ ನೀಡಲು ತಾರತಮ್ಯ ಮಾಡಿತ್ತು. ಆದರೆ ನಾವು ಅವರ ಧೋರಣೆ ತಳೆಯುವುದಿಲ್ಲ. ಎಲ್ಲರಿಗೂ ಸಮಾನವಾಗಿ ಅನುದಾನ ನೀಡುತ್ತಿದ್ದೇವೆ ಎಂದು ಸ್ಪಷ್ಟನೆ ನೀಡಿದರು.

ಮೈಸೂರು ಮಿತ್ರ

ದೇವೇಗೌಡರ ಆರೋಗ್ಯ ವಿಚಾರಿಸಿದ ಯದುವೀರ್



ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಆರೋಗ್ಯ ವಿಚಾರಿಸಿ, ಶೀಘ್ರ ಗುಣಮುಖರಾಗುವಂತೆ ಹಾರೈಸಿದರು.

ಹಾಸನಾಂಬೆ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ

ಹಾಸನ,ಅ.15-ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಸನದ ಅಧಿದೇವತೆ ಹಾಸನಾಂಬೆ ದೇವಿ ದರ್ಶನ ಪಡೆದರು.

ಜಿಲ್ಲಾಡಳಿತ ವ್ಯವಸ್ಥೆ ಮಾಡಿದ ಶಿಷ್ಟಾಚಾರದ ವಾಹನದಲ್ಲೇ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಸ್ವಾಗತಿಸಿದರು. ಸಿಎಂ ಬರುತ್ತಿದ್ದಂತೆ ಜಾನಪದ ಕಲಾತಂಡಗಳು ಜಗ್ಗಲಿಗೆ ಬಾರಿಸಿ, ಕೊಂಬು ಕಂಸಾಳೆ ಊದಿ ಸ್ವಾಗತ ಮಾಡಿದರು. ಸಿದ್ದರಾಮಯ್ಯ ಅವರ ಜೊತೆ ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಆಗಮಿಸಿದ್ದರು. ಬಳಿಕ ಜಿಲ್ಲಾಡಳಿತ ಸಿಎಂ ಅವರನ್ನು ಮಂಗಳವಾದ್ಯಗಳೊಂದಿಗೆ ದೇವಿ ದರ್ಶನಕ್ಕೆ ಕರೆದೊಯ್ಯಿತು.



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಸನಾಂಬೆ ದೇವಿ ದರ್ಶನ ಪಡೆದರು.

ಕಳೆದ 2 ವರ್ಷಗಳಿಂದ ಸಿದ್ದರಾಮಯ್ಯ ದೇವಿ ದರ್ಶನ ಪಡೆಯುತ್ತಿದ್ದು, 3ನೇ ಬಾರೀ ದೇವಿ ದರ್ಶನ ಪಡೆದುಕೊಂಡಿದ್ದಾರೆ. ದೇವಿ ದರ್ಶನ ಪಡೆದು, ದರ್ಬಾರ್ ಗಣಪತಿ ಹಾಗೂ ಸಿದ್ದೇಶ್ವರಸ್ವಾಮಿಯ ದರ್ಶನ ಕೂಡ ಮಾಡಿದರು.

ಈ ವೇಳೆ ಶಾಸಕ ಹಾಗೂ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ದಕ್ಷಿಣ ವಲಯ ಡಿಐಜಿಪಿ ಬೋರಲಿಂಗಯ್ಯ, ಎಸ್ಪಿ ಮಹಮದ್ ಸುಜೀತಾ ಉಪಸ್ಥಿತರಿದ್ದರು. ಸಿಎಂ ಆಗಮನದ ಹಿನ್ನೆಲೆಯಲ್ಲಿ ದೇವಾಲಯದ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು.

ಸಾಮೂಹಿಕ ಧನ್ವಂತರಿ ಯಾಗ

ಮೈಸೂರು, ಅ.15-ಅಮೃತಾಂಶು ಟ್ರಸ್ಟ್ ಮತ್ತು ಆರೋಗ್ಯ ಭಾರತಿ, ಮೈಸೂರು ವತಿಯಿಂದ ಅ.19ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ನಂ.2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ ಇಲ್ಲಿ ಧನ್ವಂತರಿ ಜಯಂತಿ ಪ್ರಯುಕ್ತ ಸಾಮೂಹಿಕ ಧನ್ವಂತರಿ ಯಾಗ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9742634110 ಸಂಪರ್ಕಿಸಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಅ.15-ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ನಾಳೆ (ಅ.16) ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ನಡೆಯಲಿದೆ. ಮಾಹಿತಿಗೆ ದೂ. 0821-4259259.

ಮೈಸೂರಿನ ಬಿವಿಬಿಯಲ್ಲಿ ಲಯ ರಾಗ ಸಮರ್ಪಣಂ: 'ಸ್ತ್ರೀ ತಾಳ ತರಂಗ' ಸಾಂಸ್ಕೃತಿಕ ಕಾರ್ಯಕ್ರಮ



ವಿದುಷಿ ಸುಕನ್ಯಾ ರಾಮಗೋಪಾಲ್ | ವಿದುಷಿ ಶ್ರೀವಿದ್ಯಾ ರಾಮನಾಥ್ | ವಿದುಷಿ ವಾಣಿ ಮಂಜುನಾಥ್ | ವಿದುಷಿ ಲಕ್ಷ್ಮೀ ರಾಜಶೇಖರ್ | ವಿದುಷಿ ಭಾಗ್ಯಲಕ್ಷ್ಮಿ ಕೃಷ್ಣ

ಮೈಸೂರು, ಅ. 15- ಬೆಂಗಳೂರಿನ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ, ಬೆಂಗಳೂರು-ಮೈಸೂರು ಸಂಯುಕ್ತ ಆಶ್ರಯದಲ್ಲಿ 154ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಅ.18ರಂದು ಸಂಜೆ 6 ಗಂಟೆಗೆ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾ ಭವನದಲ್ಲಿ ಲಯ ರಾಗ ಸಮರ್ಪಣಂ- 'ಸ್ತ್ರೀ ತಾಳ ತರಂಗ' ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವಿದುಷಿ ಸುಕನ್ಯಾ ರಾಮಗೋಪಾಲ್ ಅವರಿಂದ ಘಟ ತರಂಗ ಮತ್ತು ಕೊನ್ನಕೋಲ್, ವಿದುಷಿ ಶ್ರೀವಿದ್ಯಾ ರಾಮನಾಥ್ ಅವರಿಂದ ಹಾಡುಗಾರಿಕೆ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದುಷಿ ವಾಣಿ ಮಂಜುನಾಥ್-ಕೊಳಲು, ವಿದುಷಿ ಲಕ್ಷ್ಮೀ ರಾಜಶೇಖರ್-ಮೃದಂಗ, ವಿದುಷಿ ಭಾಗ್ಯಲಕ್ಷ್ಮಿ ಎಂ.ಕೃಷ್ಣ - ಮೋರ್ಸಿಂಗ್ ಸಾಥ್ ನೀಡಲಿದ್ದಾರೆ.

ಸುಕನ್ಯಾ ರಾಮಗೋಪಾಲ್: ಸುಕನ್ಯಾ ರಾಮಗೋಪಾಲ್ ಅವರು ಭಾರತದ ಮುಂಚೂಣಿ ಸಂಗೀತಗಾರರಲ್ಲಿ ಒಬ್ಬರು. ಹಾಗೂ ದೇಶದ ಮೊದಲ ಮಹಿಳಾ ಘಟಂ ಕಲಾವಿದೆ. ಕಳೆದ 50 ವರ್ಷಗಳಿಂದಲೂ ಕರ್ನಾಟಕ ಸಂಗೀತದಲ್ಲಿ ಘಟಂ ನುಡಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

ಜೂನ್ 13, 1957ರಲ್ಲಿ ತಮಿಳುನಾಡಿನ ಮಹಿಲಾದುಥುರೈನಲ್ಲಿ ಜನಿಸಿದ ಇವರು, ತಾವು 12 ವರ್ಷ ವಯಸ್ಸಿನವರಾಗಿದ್ದಾಗಲೇ ಚೆನ್ನೈನ ಶ್ರೀ ಜಯಗಣೇಶ್ ತಾಳವಾದ್ಯ ವಿದ್ಯಾಲಯದಲ್ಲಿ ಟಿ.ಆರ್. ಹರಿಹರ ಶರ್ಮ ಅವರ ಬಳಿ ಮೃದಂಗ ತರಬೇತಿ ಪ್ರಾರಂಭಿಸಿದರು. ಅಲ್ಲದೆ ಗುರುಮೂರ್ತಿ ಅವರ ಬಳಿ ವಯೋಲಿನ್ ಕಲಿತಿದ್ದಾರೆ. ಅವರು ಕೊನ್ನಕೋಲ್ (ಗಾಯನ ತಾಳವಾದ್ಯ) ದಲ್ಲಿಯೂ ಪ್ರವೀಣ ಕಲಾವಿದೆ. ಸಂಗೀತಗಾರರ ಕುಟುಂಬದಿಂದ ಬಂದ ಇವರು 'ತಮಿಳು ತಾತ್' ಎಂದು ಪರಿಚಿತರಾದ ಮಹಾ ಮಹೋಪಾಧ್ಯಾಯ ಡಾ.ಯು.ವಿ. ಸ್ವಾಮಿನಾಥ ಅಯ್ಯರ್ ಮೊಮ್ಮಗಳು.

ಎಪಿಜೆ ಅಬ್ದುಲ್ ಕಲಾಂ ಅವರ ಜನ್ಮದಿನ ಆಚರಣೆ...



ಮಾಜಿ ರಾಷ್ಟ್ರಪತಿ ದಿವಂಗತ ಎಪಿಜೆ ಅಬ್ದುಲ್ ಕಲಾಂ ಅವರ ಜನ್ಮದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಐಪಿಎಸ್ ಅಧಿಕಾರಿ ರವಿ ಡಿ.ಚನ್ನಣ್ಣನವರ್ ಪುಷ್ಪಾರ್ಚನೆ ಮಾಡಿದರು, ಈ ವೇಳೆ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್‌ಪಿಯಾ, ನಾಗೇಶ್ ನಾಯಕ್, ಕೃಷ್ಣ, ಶೇಖರ್ ನಾಯಕ, ಮಾದೇವ, ರಂಗಸ್ವಾಮಿ, ಚೌಡಪ್ಪ, ನಾರಾಯಣ, ರಾಘವ ಇನ್ನಿತರಿದ್ದರು.

ಯಾರು ಏನೆ ರಾಜಕಾರಣ ಮಾಡಿದರೂ ಬ್ರ್ಯಾಂಡ್ ಬೆಂಗಳೂರು ಇಮೇಜ್‌ಗೆ ಧಕ್ಕೆ ಆಗಲ್ಲ

ಮೈಸೂರಲ್ಲಿ ಗೃಹ ಸಚಿವ ಡಾ.ಪರಮೇಶ್ವರ್ ತಿರುಗೇಟು



ಡಾ.ಜಿ.ಪರಮೇಶ್ವರ್

ಮೈಸೂರು, ಅ.15 (ಬಿಎಲ್‌ಯು)- ಯಾರು ಏನೇ ರಾಜಕಾರಣ ಮಾಡಿದರೂ ಬ್ರ್ಯಾಂಡ್ ಬೆಂಗಳೂರಿನ ಇಮೇಜ್ ಕೆಡಿಸಲು ಸಾಧ್ಯವಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿರುಗೇಟು ನೀಡಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಒಂದೆರಡು ರಸ್ತೆಗಳು ಗುಂಡಿ ಬಿದ್ದಿರುವುದನ್ನು ಆಧರಿಸಿ ಬೆಂಗಳೂರಿನ ಇಮೇಜ್ ಕೆಡಿಸುವ ರಾಜಕಾರಣ ಮಾಡಬಾರದು ಎಂದು ಸಲಹೆ ನೀಡಿದರು.

ಮಳೆಯಿಂದ ರಸ್ತೆಗಳು ಹಾಳಾಗಿರುವುದು ಸತ್ಯ. ಈ ಹಿನ್ನೆಲೆ ರಸ್ತೆಗಳ ರಿಪೇರಿ ಕಾರ್ಯ ನಡೆಯುತ್ತಿದೆ. ಆದರೆ ಇದೇ ವಿಚಾರ ಇಟ್ಟುಕೊಂಡು ಬೆಂಗಳೂರಿನ ಇಮೇಜ್ ಕೆಡಿಸಬಾರದು. ಯಾರ್ಯಾರು ಈ ರೀತಿಯ ರಾಜಕಾರಣ ಮಾಡುತ್ತಿದ್ದಾರೆ ಎಂದು ನಾನು ಬಹಿರಂಗವಾಗಿ ಹೇಳುವುದಿಲ್ಲ ಎಂದು ತಿಳಿಸಿದರು.

ಗೂಗಲ್ ಕಂಪನಿ ಆಂಧ್ರಪ್ರದೇಶಕ್ಕೆ ಹೋಗಲು ಅವರದೆ ಕಾರಣಗಳಿವೆ. ಆದರೆ ಇದೇ ಕಾರಣಕ್ಕೆ ಹೋಗಿದೆ ಎಂದು ನಾನು ಖಚಿತವಾಗಿ ಹೇಳುವುದಿಲ್ಲ. ನಾವು ಕೈಗಾರಿಕಾ ಬೆಳವಣಿಗೆಗೆ ಮೂಲ ಸೌಕರ್ಯ ಕಲ್ಪಿಸುತ್ತಿದ್ದೇವೆ. ಆದರೆ ಇದನ್ನು ಬದಿಗಿಟ್ಟು ಕೆಲವರು ರಾಜಕಾರಣ ಮಾಡುತ್ತಿದ್ದಾರೆ ಎಂದು ಡಾ.ಪರಮೇಶ್ವರ್ ಆರೋಪಿಸಿದರು.

ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಹಾಕಿರುವ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಯಾವ ನಂಬರ್‌ನಿಂದ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಬಂದಿದೆ ಎಂಬುದನ್ನು ಪತ್ತೆ ಮಾಡುತ್ತಿದ್ದೇವೆ. ಆರೋಪಿಗಳ ವಿರುದ್ಧ ಕ್ರಮ ನಿಶ್ಚಿತ. ಕ್ರಮ ಕೈಗೊಳ್ಳದ ಹೊರತು ಇಂತಹ ಪ್ರಕರಣಗಳು ನಿಲ್ಲುವುದಿಲ್ಲ ಎಂದು ಹೇಳಿದರು.

ಆರ್‌ಎಸ್‌ಎಸ್ ನಿರ್ಬಂಧಿಸುವ ಕುರಿತು ಪ್ರಿಯಾಂಕ್ ಖರ್ಗೆ ನೀಡಿರುವ ಸಲಹೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀರ್ಮಾನ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು. ಬಿಜೆಪಿಯವರು ನವೆಂಬರ್ ಕ್ರಾಂತಿ ಎಂದು ಜಪ ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ಯಾವುದೇ ಬೆಳವಣಿಗೆಗಳಾಗಿಲ್ಲ ಎಂದು ಡಾ.ಪರಮೇಶ್ವರ್ ಸ್ಪಷ್ಟನೆ ನೀಡಿದರು.

ಕರ್ನಾಟಕ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಪ್ರತಿಭಾವಂತರು, ನುರಿತ ಕಲಾವಿದರಿಗೆ ಉಚಿತ ವೇದಿಕೆ



ಇತ್ತೀಚೆಗೆ ಉದಯೋನ್ಮುಖ ಪ್ರತಿಭೆಗಳು ಪ್ರದರ್ಶನ ನೀಡಿದರು, ಪ್ರಾಧಿಕಾರದ ವತಿಯಿಂದ ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರು,ಅ.15(ಜಿಎ)-ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಉದಯೋನ್ಮುಖ ಮತ್ತು ನುರಿತ ಪ್ರತಿಭೆಗಳಿಗೆ ತಮ್ಮ ಪ್ರತಿಭೆ ಅನಾವರಣಗೊಳಿಸಲು ವೇದಿಕೆ ಕಲ್ಪಿಸಲು ಉಚಿತ ಅವಕಾಶ ನೀಡಲು ನಿರ್ಧರಿಸಿದೆ.

ಪ್ರಾಧಿಕಾರದ ಆವರಣದಲ್ಲಿರುವ ಸಿದ್ದರಾಮಯ್ಯ ಅಂಗಳದಲ್ಲಿರುವ ಹೊಯ್ಸಳ ವಾಸ್ತುಶಿಲ್ಪದ ಪ್ರತಿಕೃತಿ ನಡುವಿನ ವೇದಿಕೆಯಲ್ಲಿ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಅವಕಾಶ ನೀಡುತ್ತಿದ್ದು, ಆಸಕ್ತರು ತಮ್ಮ ವಿವರಗಳು, ಮೊಬೈಲ್ ಸಂಖ್ಯೆ, ವಿಳಾಸದೊಂದಿಗೆ ಪ್ರಾಧಿಕಾರದ ಆವರಣದಲ್ಲಿರುವ ವಸ್ತುಪ್ರದರ್ಶನ ಪ್ರಾಧಿಕಾರ ಸಿಇಓ ಕಚೇರಿಯಲ್ಲಿರುವ ಉದಯೋನ್ಮುಖ ಪ್ರತಿಭೆ ವಿಭಾಗಕ್ಕೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ 720 4202444 ಸಂಪರ್ಕಿಸಬಹುದಾಗಿದೆ.

ವಿಶೇಷ ಸೂಚನೆ: ಪಾಲ್ಗೊಳ್ಳುವ ಪ್ರತಿಭೆಗಳಿಗೆ ಧ್ವನಿವರ್ಧಕ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಉಳಿದ ಪರಿಕರಗಳನ್ನು ಭಾಗವಹಿಸುವ ಕಲಾವಿದರೇ ತರಬೇಕು. ಕಲಾವಿದರಿಗೆ ಪ್ರಾಧಿಕಾರದ ವತಿಯಿಂದ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಗುತ್ತದೆ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಕೀಯ ಭೂಕಂಪವಾದರೆ ಅದು ಬೆಂಗಳೂರಲ್ಲಿ



ಸತೀಶ್ ಜಾರಕಿಹೊಳಿ

ಮೈಸೂರು, ಅ.15(ಬಿಎಲ್‌ಯು)- ರಾಜಕೀಯ ಭೂಕಂಪನವೇನಾದರೂ ಆದರೆ ಅದು ಬೆಂಗಳೂರಿನಲ್ಲಿ ಮಾತ್ರ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕುತೂಹಲಕರ ಹೇಳಿಕೆ ನೀಡಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬೆಳಗಾವಿಯಲ್ಲಿ ಯಾವುದೇ ರಾಜಕೀಯ ಭೂಕಂಪನ ಆಗುವುದಿಲ್ಲ, ಅದೇನಾದರೂ ಆದರೆ ಬೆಂಗಳೂರಿನಲ್ಲಿ ಮಾತ್ರ ಎಂದರು. ಮುಖ್ಯಮಂತ್ರಿ ರೇಸ್‌ನಿಂದ ಹೊರಗೆ ಬಂದಿರುವೆ ಎಂದು ಒಂದು ವರ್ಷದ ಹಿಂದೆಯೇ ಸ್ಪಷ್ಟನೆ ನೀಡಿದ್ದೇನೆ. ಈ ಹಿನ್ನೆಲೆಯಲ್ಲಿ ನಾನು ಸಿಎಂ ರೇಸ್‌ನಲ್ಲಿದ್ದೇನೆ ಎಂಬ ಮಾತು ಅಪ್ರಸ್ತುತ ಎಂದರು. ಸಿಎಂ ಬದಲಾವಣೆ ವಿಚಾರವನ್ನು ನೀವು ಸೂಕ್ತ ವ್ಯಕ್ತಿಗೆ ಕೇಳಬೇಕು. ಕೆಲವು ಅಭಿಮಾನಿಗಳು ತಮ್ಮ ನಾಯಕರು ಸಿಎಂ ಆಗಬೇಕು ಎಂದು ಹೇಳುತ್ತಾರೆ. ಅದು ಅವರ ಅಭಿಪ್ರಾಯ ಎಂದು ಸತೀಶ್ ಜಾರಕಿಹೊಳಿ ಹೇಳಿದರು.

ಪಿಪಿಪಿ ಮಾದರಿ ಹೊಸ ವೈದ್ಯಕೀಯ ಕಾಲೇಜು: ಸ್ಥಾಪನೆಗೆ ಖಂಡನೆ

ಮೈಸೂರು, ಅ.15(ಎಸ್‌ಪಿಎನ್)- ಪಿಪಿಪಿ ಮಾದರಿಯಲ್ಲಿ ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ತೆರೆಯುವ ರಾಜ್ಯ ಸರ್ಕಾರ ಕ್ರಮವನ್ನು ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿ ಖಂಡಿಸಿದೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಆರು ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಮೈಸೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ನೀಡಿರುವ ಹೇಳಿಕೆಯನ್ನು ಎಐಡಿಎಸ್‌ಓ ಸಂಘಟನೆ ತೀವ್ರವಾಗಿ ಖಂಡಿಸುತ್ತದೆ ಎಂದು ಜಿಲ್ಲಾ ಸಮಿತಿ ಕಾರ್ಯದರ್ಶಿ ನಿತಿನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಪ್ರಸ್ತಾವನೆಯು ವೈದ್ಯಕೀಯ ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣದ ಮತ್ತೊಂದು ಹೆಜ್ಜೆಯಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿಯೇ ಪಿಪಿಪಿ ಮಾದರಿಯಾಗಿದ್ದು, ಸಾರ್ವಜನಿಕ ಸಂಪನ್ಮೂಲಗಳನ್ನು ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರಿಸುವ ಒಂದು ಸಾಧನವೇ ಈ ಮಾದರಿಯಿಂದ ಅತಿ ಹೆಚ್ಚಿನ ಶುಲ್ಕ, ಶೈಕ್ಷಣಿಕ ಗುಣಮಟ್ಟದ ಕುಸಿತ, ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಣೆಗೆ ಕಾರಣವಾಗುತ್ತವೆ ಎಂದು ಆತಂಕ ವ್ಯಕ್ತಪಡಿಸಲಾಗಿದೆ.

ವಿಶ್ವಬ್ಯಾಂಕ್ ಒತ್ತಡಕ್ಕೆ ಮಣಿಯುವ ಬದಲು, ಸರ್ಕಾರವು ಸಂಪೂರ್ಣವಾಗಿ ಸರ್ಕಾರಿ ಸ್ವಾಮ್ಯದ ವೈದ್ಯಕೀಯ ಸಂಸ್ಥೆಗಳನ್ನು ಬಲಪಡಿಸಿ, ವಿಸ್ತರಿಸಲು ಖಜಾನೆಯಿಂದ ಸೂಕ್ತ ನಿಧಿಯನ್ನು ಹಂಚಿಕೆ ಮಾಡಬೇಕು. ಎಲ್ಲಾ ಹೊಸ ವೈದ್ಯಕೀಯ ಕಾಲೇಜುಗಳನ್ನು ಕೇವಲ ಸಾರ್ವಜನಿಕ ಒಡೆತನ ಹಾಗೂ ಪ್ರಜಾತಾಂತ್ರಿಕ ನಿಯಂತ್ರಣದ ಅಡಿಯಲ್ಲಿ ಸ್ಥಾಪಿಸಿ ನಡೆಸಬೇಕೆಂದು ಒತ್ತಾಯಿಸಿದ್ದಾರೆ.

ಹಿಂದೂ ಸಮಾಜದ ಮೇಲಿನ ದಾಳಿ ಹತ್ತಿಕ್ಕಲು 'ಹಿಂದೂ ಜನಜಾಗೃತಿ ಸಮಿತಿ' ಸರ್ಕಾರಕ್ಕೆ ಮನವಿ

ಮೈಸೂರು, ಅ.15(ಎಸ್‌ಪಿಎನ್)- ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಂದು ಸಮುದಾಯ ನಡೆಸುತ್ತಿರುವ ಅಭಿಯಾನದಿಂದ ರಾಜ್ಯದ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಹಿಂದೂ ಸಮುದಾಯದವರ ಮೇಲೆ ಅಲ್ಲಲ್ಲಿ ಮಾರಣಾಂತಿಕ ದಾಳಿಗಳು ನಡೆಯುತ್ತಿವೆ. ಹಾಗಾಗಿ ಈ ದಾಳಿ ನಡೆಸುವವರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಹಿಂದೂ ಜನಜಾಗೃತಿ ಸಮಿತಿ ಸದಸ್ಯರು, ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಮಿತಿ ಸಂಚಾಲಕ ಶರತ್ ಕುಮಾರ್, ಈಗ ನಡೆಯುತ್ತಿರುವ ಅಭಿಯಾನದ ನೆಪದಲ್ಲಿ ಹಿಂದೂಗಳ ಮೇಲೆ ದಾಳಿ ಮಾಡಿದ ಆರೋಪಿಗಳನ್ನು ಹಾಗೂ ಅಂತಹ ಸಂಘಟನೆ ಪದಾಧಿಕಾರಿಗಳು, ಹಿಂದೂ ಸಮಾಜದ ಮೇಲೆ ದಾಳಿ ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.



ಹಿಂದೂ ಜನಜಾಗೃತಿ ಸಮಿತಿ ಸದಸ್ಯರು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಹಿಂದೂ ಹಬ್ಬಗಳ ಸಮಯದಲ್ಲಿ ಉದ್ದೇಶಪೂರ್ವಕವಾಗಿ ಗಲಭೆ ಸೃಷ್ಟಿ ಮಾಡುವವರ ವಿರುದ್ಧ ಭಯೋತ್ಪಾದಕ ನಿಗ್ರಹ ಕಾಯಿದೆಗಳಡಿ ಕ್ರಮ ಕೈಗೊಳ್ಳಬೇಕು. ದಾಳಿಕೋರರಿಂದಲೇ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗೆ ಉಂಟಾದ ನಷ್ಟವನ್ನು ವಸೂಲಿ ಮಾಡಬೇಕು.

ಹಿಂದೂಗಳ ವಿರುದ್ಧ ದ್ವೇಷಪೂರಿತ ಪ್ರವಚನ ನೀಡುವವರ ವಿರುದ್ಧ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು. ಮುಂಬರುವ ದೀಪಾವಳಿ ಸೇರಿದಂತೆ ಪ್ರಮುಖ ಹಬ್ಬಗಳಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗ ಉಂಟಾಗದಂತೆ ಪೊಲೀಸ್ ಇಲಾಖೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ದಾವಣಗೆರೆ, ಬೆಳಗಾವಿ ಜಿಲ್ಲೆ ಸೇರಿದಂತೆ ಹಲವೆಡೆ ಅಭಿಯಾನದ ನೆಪದಲ್ಲಿ ಹಿಂದೂ ಮನೆಗಳ ಮೇಲೆ ಕಲ್ಲು ತೂರಾಟ, ಹಲ್ಲೆ ಮತ್ತು ಭಯೋತ್ಪಾದಕ ಕೃತ್ಯಗಳ ನಡೆಸಿ, ರಾಜ್ಯದ ಶಾಂತಿ ಹಾಗೂ ಸಾಮರಸ್ಯಕ್ಕೆ ಭಂಗ ತರುತ್ತಿವೆ. ಇಂತಹ ಘಟನೆಗಳು ಗುಜರಾತ್, ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಗಲಭೆಗಳಿಗೆ ಕಾರಣವಾಗಿರುವುದರಿಂದ, ಈ ಮಾದರಿ ಕರ್ನಾಟಕದಲ್ಲಿ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಹಿಂದೂ ಜನಜಾಗೃತಿ ಸಮಿತಿ ಪದಾಧಿಕಾರಿಗಳಾದ ಗೋಪಾಲ ಕೃಷ್ಣ, ಸಿದ್ದಲಿಂಗಸ್ವಾಮಿ, ಶಶಿಕಾಂತ್, ಅಶೋಕ್ ಕಪೂರ್, ದೀಪಕ್, ನಾಗೇಂದ್ರ, ನಿಗಿನ್, ಪುಟ್ಟರಾಚಯ್ಯ, ಸನಾತನ ಸಂಸ್ಥೆಯ ಅಂಬಿಕಾ ಸೇರಿದಂತೆ ಹಲವು ಹಿಂದೂಪರ ಸಂಘಟನೆಗಳ ನಾಯಕರು ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಅ.15- ವಿ.ವಿ.ಮೊಹಲ್ಲಾ ಉಪವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಅ.16ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಯಾದವಗಿರಿ, ಮಂಜುನಾಥಪುರ, ರೈಲ್ವೆ ಲೋಕೋ ಕಾಲೋನಿ, ರೈಲ್ವೆ ಕ್ವಾಟ್ರಸ್, ಕೆಆರ್‌ಎಸ್ ರಸ್ತೆ, ಡಬಲ್ ಬ್ಯಾರನ್ ಸುತ್ತಮುತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಕೆ.ವಿ ಕಡಕೊಳ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಕಡಕೊಳ, ಬ್ಯಾತಹಳ್ಳಿ, ಸಿಂಧುವಳ್ಳಿ, ದಡದಹಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಮರಸೆ, ಮಾಕನಹುಂಡಿ, ಕೂಡನಹಳ್ಳಿ, ಕೋಚನಹಳ್ಳಿ, ವಿಮಾನ ನಿಲ್ದಾಣ, ಬಿರೇಗೌಡನಹುಂಡಿ, ಕೆ.ಎಂ.ಹುಂಡಿ, ಬಿ.ಜಿ.ಹುಂಡಿ, ಕೆ.ಎನ್‌ಹುಂಡಿ, ಆಯರಹಳ್ಳಿ, ಕಿರಾಳು, ದೂರ, ಮುರುಡಗಳ್ಳಿ, ತಳೂರು, ಡಿ.ಕಾಟೂರು, ಟಿ.ವಿ.ಎಸ್. ಫ್ಯಾಕ್ಟರಿ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಗೋವಾ ಮಾಜಿ ಸಿಎಂ ರವಿನಾಯ್ಕ್ ನಿಧನ



ಪಣಜಿ: ಗೋವಾ ಮಾಜಿ ಸಿಎಂ ರವಿನಾಯ್ಕ್ ಹೃದಯ ಸ್ತಂಭನದಿಂದ ಮಂಗಳವಾರ ತಡರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಪಣಜಿಯಿಂದ 30 ಕಿ.ಮೀ ದೂರದಲ್ಲಿರುವ ನಿವಾಸದಲ್ಲಿ ರವಿನಾಯ್ಕ್ ಹೃದಯಸ್ತಂಭನಕ್ಕೊಳಗಾಗಿದ್ದರು. ಕೂಡಲೇ ಪೊಂಡಾ ಪಟ್ಟಣದ ಖಾಸಗಿ ಆಸ್ಪತ್ರೆಗೆ ಅವರನ್ನು ದಾಖಲಿಸಲಾಯಿತು. ಆದರೆ ತಡರಾತ್ರಿ 1 ಗಂಟೆಯ ಸುಮಾರಿಗೆ ರವಿನಾಯ್ಕ್ ನಿಧನರಾಗಿದ್ದಾರೆ.

79 ವರ್ಷದ ರವಿನಾಯ್ಕ್ ಎರಡು ಬಾರಿ ಮುಖ್ಯಮಂತ್ರಿ ಆಗಿ ಆಯ್ಕೆಯಾಗಿದ್ದರು. ಅಲ್ಲದೇ ಏಳು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಮೃತರು ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಇನ್ನು ರವಿನಾಯ್ಕ್ ನಿಧನಕ್ಕೆ ಗೋವಾ ಸಿಎಂ ಪ್ರಮೋದ್ ಸಾವಂತ್ ಸಂತಾಪ ಸೂಚಿಸಿದ್ದಾರೆ.

ದೇಶ - ವಿದೇಶ

ಕೇರಳಕ್ಕೆ ಬಂದಿದ್ದ ಕೀನ್ಯಾ ಮಾಜಿ ಪ್ರಧಾನಿ ಹೃದಯಸ್ತಂಭನದಿಂದ ನಿಧನ



ತಿರುವನಂತಪುರಂ: ಆಯುರ್ವೇದ ಚಿಕಿತ್ಸೆಗೆಂದು ಕೇರಳಕ್ಕೆ ಬಂದಿದ್ದ ಕೀನ್ಯಾ ಮಾಜಿ ಪ್ರಧಾನಿ ರೈಲಾ ಒಡಿಂಗಾ ಹೃದಯ ಸ್ತಂಭನದಿಂದ ಬುಧವಾರ ಮುಂಜಾನೆ ನಿಧನರಾಗಿದ್ದಾರೆ.

80 ವರ್ಷದ ರೈಲಾ ಒಡಿಂಗಾ ಆಯುರ್ವೇದ ಚಿಕಿತ್ಸೆಗಾಗಿ ಕೇರಳದ ಎರ್ನಾಕುಲಂ ಜಿಲ್ಲೆಯ ಕೂಥಾಟುಕುಳಂಗೆ ಬಂದಿದ್ದರು. ಇಂದು ಮುಂಜಾನೆ ವಾಕಿಂಗ್ ಮಾಡುತ್ತಿದ್ದ ಸಂದರ್ಭ ಹಠಾತ್ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಕೂಥಾಟುಕುಳಂನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಿಸದೇ ಬೆಳಗ್ಗೆ 9.25ರ ಸುಮಾರಿಗೆ ರೈಲಾ ಒಡಿಂಗಾ ಕೊನೆಯುಸಿರೆಳೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ ರೈಲಾ ಒಡಿಂಗಾ ಅವರ ಮೃತದೇಹವನ್ನು ಆಸ್ಪತ್ರೆಯಲ್ಲೇ ಇರಿಸಲಾಗಿದೆ. ಮೃತದೇಹ ಹಸ್ತಾಂತರ ಸೇರಿದಂತೆ ಮುಂದಿನ ಪ್ರಕ್ರಿಯೆಗಾಗಿ ಪ್ರಾದೇಶಿಕ ನೋಂದಣಿ ಕಚೇರಿಗೆ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತ ಮೂಲದ ವಿದೇಶಾಂಗ ನೀತಿ ತಜ್ಞ ಆಶ್ಲೇಟೆಲ್ಲಿಸ್ ಬಂಧನ



ವಾಷಿಂಗ್ಟನ್: ಅಮೆರಿಕ ರಾಷ್ಟ್ರದ ರಕ್ಷಣೆಗೆ ಸಂಬಂಧಿಸಿದ ರಹಸ್ಯ ದಾಖಲೆಗಳನ್ನ ಅನಧಿಕೃತವಾಗಿ ತಮ್ಮ ಬಳಿ ಸಂಗ್ರಹಿಸಿದ್ದ ಹಾಗೂ ಕೆಲ ವರ್ಷದ ಹಿಂದೆ ಚೀನಾ ಜೊತೆ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಭಾರತದ ಮುಂಬೈ ಮೂಲದ ಅಮೆರಿಕನ್ ವಿಶ್ಲೇಷಕ ಹಾಗೂ ವಿದೇಶಾಂಗ ನೀತಿ ತಜ್ಞ ಆಶ್ಲೇಟೆಲ್ಲಿಸ್‌ರನ್ನು ಬಂಧಿಸಲಾಗಿದೆ.

64 ವರ್ಷದ ಆಶ್ಲೇ ಟೆಲ್ಲಿಸ್ ತಮ್ಮ ವಿಯೆನ್ನಾ, ವರ್ಜೀನಿಯಾದ ಮನೆಯಲ್ಲಿ ವಾಯುಪಡೆಯ ತಂತ್ರಗಳು ಮತ್ತು ವಿಧಾನಗಳಿಗೆ ಸಂಬಂಧಿಸಿದ 1000ಕ್ಕೂ ಹೆಚ್ಚು ಪುಟಗಳಷ್ಟು ರಹಸ್ಯ ದಾಖಲೆಗಳನ್ನು ಇಟ್ಟುಕೊಂಡಿದ್ದರು.

ಮುಂಬೈ ಮೂಲದ ಆಶ್ಲೇ ಈ ಹಿಂದೆ ಅಧ್ಯಕ್ಷರಾಗಿದ್ದ ಜಾರ್ಜ್ ಡಬ್ಲ್ಯೂ ಬುಷ್ ಅವರ ಅಡಿಯಲ್ಲಿ ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ಕೆಲಸ ಮಾಡಿದ್ದರು.

ಪೆಂಟಗನ್ ಆಫೀಸ್ ಆಫ್ ನೆಟ್ ಅಸೆಸ್‌ಮೆಂಟ್‌ನ ಗುತ್ತಿಗೆದಾರರಾಗಿಯೂ ವೃತ್ತಿ ಜೀವನ ನಡೆಸಿದ್ದಾರೆ. ಭಾರತ ಮತ್ತು ದಕ್ಷಿಣ ಏಷ್ಯಾಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಅಮೆರಿಕ ಆಡಳಿತಗಳಿಗೆ ಸಲಹೆ ನೀಡುವಲ್ಲಿ ಟೆಲ್ಲಿಸ್ ಹೆಸರುವಾಸಿಯಾಗಿದ್ದಾರೆ.

ಹಾಂಗ್‌ಕಾಂಗ್‌ಗೆ ತೆರಳುತ್ತಿದ್ದ ವಿಮಾನದಲ್ಲಿ ತಾಂತ್ರಿಕ ದೋಷ: ತುರ್ತು ಪರಿಸ್ಥಿತಿ ಘೋಷಣೆ




ನವದೆಹಲಿ: ದೋಹಾದಿಂದ ಹಾಂಗ್‌ಕಾಂಗ್‌ಗೆ ತೆರಳುತ್ತಿದ್ದ ಕತಾರ್ ಏರ್‌ವೇಸ್ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ನಂತರ ಅಹಮದಾಬಾದ್ ವಿಮಾನ ನಿಲ್ದಾಣಕ್ಕೆ ತಿರುಗಿಸಲಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಮಧ್ಯಾಹ್ನ ಸರ್ದಾರ್ ವಲ್ಲಭಾಯಿ ಪಟೇಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪೂರ್ಣ ಪ್ರಮಾಣದ ತುರ್ತು ಪರಿಸ್ಥಿತಿ ಘೋಷಿಸಲಾಯಿತು. QR816 ವಿಮಾನ ದೋಹಾದಿಂದ ಬುಧವಾರ 9.01ಕ್ಕೆ(ಸ್ಥಳೀಯ ಸಮಯ) ಹೊರಟಿತು ಎಂದು ವಿಮಾನ ಟ್ರ್ಯಾಕಿಂಗ್ ಪ್ಲಾಟ್‌ಫಾರ್ಮ್, ಫ್ಲೈಟ್ ಅವೇರ್ ಹೇಳುತ್ತದೆ. ಮಾರ್ಗ ಮಧ್ಯದಲ್ಲಿ ತಾಂತ್ರಿಕ ದೋಷ ಕಂಡುಬಂದ ನಂತರ, ವಿಮಾನ ಇಳಿಯಲು ಅನುವು ಮಾಡಿಕೊಡಲು ಮಧ್ಯಾಹ್ನ 2.12ಕ್ಕೆ ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಪೂರ್ಣ ತುರ್ತು ಪರಿಸ್ಥಿತಿ ಘೋಷಿಸಲಾಯಿತು ಎಂದು ಅಹಮದಾಬಾದ್ ವಿಮಾನ ನಿಲ್ದಾಣದ ವಕ್ತಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಗೆ 7ನೇ ಬಾರಿ ಆಯ್ಕೆಯಾದ ಭಾರತ



ನ್ಯೂಯಾರ್ಕ್: ಭಾರತವು 2026-28ರ ಅವಧಿಗೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಗೆ ಆಯ್ಕೆಯಾಗಿದ್ದು, ಜಿನೀವಾದಲ್ಲಿರುವ ಮಾನವ ಹಕ್ಕುಗಳ ಮಂಡಳಿಯಲ್ಲಿ 7ನೇ ಅವಧಿಗೆ ಭಾರತ ಪ್ರತಿನಿಧಿಸುತ್ತದೆ. ಮಂಗಳವಾರ ನಡೆದ ಚುನಾವಣೆಯ ಫಲಿತಾಂಶಗಳನ್ನು ಪ್ರಕಟಿಸಿದ UNHRC, ಭಾರತದ ಮೂರು ವರ್ಷಗಳ ಅವಧಿ ಜನವರಿ 1, 2026ರಂದು ಪ್ರಾರಂಭವಾಗಲಿದೆ ಎಂದು ಸೋಷಿಯಲ್ ಮೀಡಿಯಾದಲ್ಲಿ ಪ್ರಕಟಿಸಿದೆ. ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿ ಪರ್ವತನೇನಿ ಹರೀಶ್, ಸೋಷಿಯಲ್ ಮೀಡಿಯಾದಲ್ಲಿ ಮಾನವ ಹಕ್ಕುಗಳ ಮಂಡಳಿಯಲ್ಲಿ ಭಾರತ ಪ್ರಾತಿನಿಧ್ಯ ಪಡೆಯಲು ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ಹೇಳಿದ್ದಾರೆ. ಯುಎನ್ ಮಾನವ ಹಕ್ಕುಗಳ ಮಂಡಳಿಯು ಯುಎನ್ ಜನರಲ್ ಅಸೆಂಬ್ಲಿಯಿಂದ ಮೂರು ವರ್ಷಗಳ ಅವಧಿಗೆ ಸಮಾನ ಭೌಗೋಳಿಕ ವಿತರಣಾ ನಿಯಮಗಳ ಅಡಿಯಲ್ಲಿ ಆಯ್ಕೆಯಾದ 47 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದೆ.

ಕೊಲ್ಕತ್ತಾದಲ್ಲಿ ಮತ್ತೋರ್ವ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ, ಸಹಪಾಠಿ ಬಂಧನ



ಕೊಲ್ಕತಾ: ಪಶ್ಚಿಮ ಬಂಗಾಳ ರಾಜಧಾನಿ ಕೊಲ್ಕತಾದಲ್ಲಿ ಮತ್ತೊಂದು ಅತ್ಯಾಚಾರ ಪ್ರಕರಣ ಬೆಳಕಿಗೆ ಬಂದಿದ್ದು, ಎಂಜಿನಿಯರಿಂಗ್ ವಿದ್ಯಾರ್ಥಿನಿಯ ಅತ್ಯಾಚಾರ ಆರೋಪದ ಮೇರೆಗೆ ಆಕೆಯ ಸಹಪಾಠಿಯನ್ನು ಬಂಧಿಸಲಾಗಿದೆ. ಪಶ್ಚಿಮ ಬಂಗಾಳದ ದುರ್ಗಾಪುರ ಅತ್ಯಾಚಾರ ಪ್ರಕರಣ ಹಸಿರಾಗಿರುವಂತೆಯೇ ಇದೀಗ ಕೊಲ್ಕತಾದಲ್ಲಿ ಮತ್ತೊಂದು ಅತ್ಯಾಚಾರ ಪ್ರಕರಣ ಬೆಳಕಿಗೆ ಬಂದಿದೆ. ಕೊಲ್ಕತ್ತಾದ ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ದ್ವಿತೀಯ ವರ್ಷದ ಪದವಿ ಓದುತ್ತಿರುವ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಲಾಗಿದೆ. ಪೊಲೀಸ್ ಮೂಲಗಳ ಪ್ರಕಾರ, ಆನಂದಪುರ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ. ಸಹಪಾಠಿಯೊಬ್ಬ ಮದ್ಯದಲ್ಲಿ ಮಾದಕ ದ್ರವ್ಯ ಬೆರೆಸಿ ಕುಡಿಸಿದ. ಇದಾದ ಕೆಲವೇ ಕ್ಷಣಗಳಲ್ಲಿ ನಾನು ಪ್ರಜ್ಞೆ ಕಳೆದುಕೊಂಡೆ. ಆ ನಂತರ ಅತ್ಯಾಚಾರ ಎಸಗಿದ್ದಾನೆ ಎಂದು ಯುವತಿ ದೂರಿನಲ್ಲಿ ಹೇಳಿದ್ದಾರೆ ಎನ್ನಲಾಗಿದೆ. ಸಂತ್ರಸ್ಥ ಯುವತಿ ಉನ್ನತ ಶಿಕ್ಷಣಕ್ಕಾಗಿ ಪಶ್ಚಿಮ ಬಂಗಾಳಕ್ಕೆ ಬಂದಿದ್ದರು. ಅವರು ಯಾವ ರಾಜ್ಯಕ್ಕೆ ಸೇರಿದವರು ಎಂಬುದನ್ನು ಬಹಿರಂಗಪಡಿಸಿಲ್ಲ.

ಕೊಡಗಿನಾದ್ಯಂತ ಸ್ವಚ್ಛ ಕೊಡಗು–ಸುಂದರ ಕೊಡಗು ಅಭಿಯಾನ

ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಸ್ವಚ್ಛತೆಯ ಬಗ್ಗೆ ಕಾಳಜಿ ತೋರಿದ ಸಂಘ-ಸಂಸ್ಥೆಗಳು






ಮಡಿಕೇರಿಯಲ್ಲಿ ಶಾಸಕ ಮಂತರ್‌ಗೌಡರಿಂದ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ(ಎಡಚಿತ್ರ). ಕುಶಾಲನಗರದಲ್ಲಿ ನಡೆಸಿದ ಅಭಿಯಾನ(ಮಧ್ಯದ ಚಿತ್ರ). ನಾಪೋಕ್ಲುವಿನಲ್ಲಿ ಸಂಗ್ರಹಿಸಲಾದ ಕಸದ ರಾಶಿ(ಬಲಚಿತ್ರ).

ಮಡಿಕೇರಿ, ಅ.15– ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ವತಿಯಿಂದ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಸ್ವಚ್ಛ ಕೊಡಗು–ಸುಂದರ ಕೊಡಗು' ಹೆಸರಿನ ಸ್ವಚ್ಛತಾ ಅಭಿಯಾನಕ್ಕೆ ಜಿಲ್ಲೆಯಾದ್ಯಂತ ಅತ್ಯುತ್ತಮ ಸ್ಪಂದನ ದೊರಕಿದೆ. ಜಿಲ್ಲೆಯ ಎಲ್ಲೆಲ್ಲೂ ಸಾವಿರಾರು ಸಂಖ್ಯೆಯಲ್ಲಿ ವಿವಿಧ ಸಂಘ ಸಂಸ್ಥೆಗಳ ಸದಸ್ಯರು ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಳ್ಳುವ ಮೂಲಕ ಕೊಡಗಿನ ಸ್ವಚ್ಛತೆಯ ಕಾಳಜಿ ತೋರಿದರು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಕಸ ತೆಗೆಯುವ ಮೂಲಕ ಸ್ವಚ್ಛ ಕೊಡಗು–ಸುಂದರ ಕೊಡಗು ಅಭಿಯಾನಕ್ಕೆ ಶಾಸಕ ಡಾ.ಮಂತರ್ ಗೌಡ ಮತ್ತು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಚಾಲನೆ ನೀಡಿದರು.

ಸ್ವಚ್ಛ ಮತ್ತು ಸುಂದರ ಕೊಡಗು ನಿರ್ಮಾಣದ ಜವಾಬ್ದಾರಿ ಜಿಲ್ಲೆಯ ಪ್ರತಿಯೋರ್ವರ ಮೇಲಿದೆ. ಕೊಡಗನ್ನು ಸ್ವಚ್ಛತೆಯಿಂದ ಸಂರಕ್ಷಿಸುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ವತಿಯಿಂದ ಸ್ವಚ್ಛತಾ ಆಂದೋಲನದ ಆಯೋಜನೆ ಶ್ಲಾಘನೀಯ ಎಂದು ಮಡಿಕೇರಿ ಶಾಸಕ ಡಾ. ಮಂತರ್ ಗೌಡ ಸ್ವಚ್ಛತಾ ಆಂದೋಲನಕ್ಕೆ ಚಾಲನೆ ನೀಡಿ ಪ್ರಶಂಸಿಸಿದರು.

ಕೊಡಗು ಜಿಲ್ಲೆಯ ಸುಂದರ ಪ್ರಕೃತಿ, ಸಂಪನ್ಮೂಲ ಕಾಪಾಡದಿದ್ದರೆ ಭವಿಷ್ಯದಲ್ಲಿ ತೊಡಕು ಉಂಟಾಗುತ್ತದೆ. ಈಗಾಗಲೇ ಏಕ ಬಳಕೆ ಪ್ಲಾಸ್ಟಿಕ್ ಅನ್ನು ನಿಷೇಧಿಸಲಾಗಿದೆ. ಮಡಿಕೇರಿಯಲ್ಲಿ 2 ಲೀಟರ್‌ಗಿಂತ ಕಡಿಮೆ ಸಂಗ್ರಹ ಸಾಮರ್ಥ್ಯದ ನೀರಿನ ಬಾಟಲ್‌ಗಳ ಮಾರಾಟ, ಹಾಗೂ ಬಳಕೆಯನ್ನೂ ನಿಷೇಧಿಸಲಾಗಿದೆ ಇದರಿಂದ ಕಸದ ಪ್ರಮಾಣ ಕಡಿಮೆಯಾಗಿದೆ ಎಂದು ಹೇಳಿದ ಡಾ. ಮಂತರ್ ಗೌಡ, ಜಿಲ್ಲೆಯ ಸ್ವಚ್ಛತೆ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಒಂದು ದಿನಕ್ಕೆ ಈ ಕಾರ್ಯಕ್ರಮಕ್ಕೆ ಮೀಸಲಾಗದೆ ವರ್ಷವಿಡಿ ಸ್ವಚ್ಛತಾ ಜಾಗೃತಿ ಹೊಂದಿರಬೇಕು. ಹಸಿರು ಸಂರಕ್ಷಣೆಯ ಕ್ರಾಂತಿ ಮಾಡಲು ಪ್ರತಿಯೊಬ್ಬರು ಕೈಜೋಡಿಸಬೇಕು. ಮನೆಯಿಂದಲೇ ಶೂನ್ಯ ತ್ಯಾಜ್ಯ ಬಗ್ಗೆ ಚಿಂತಿಸಬೇಕು. ಪ್ರವಾಸಿಗರು ಕಸ ಎಸೆದು ಪ್ರಕೃತಿಗೆ ಧಕ್ಕೆ ತರುತ್ತಿರುವ ಪ್ರಕರಣಗಳು ಆಗಿಂದಾಗ್ಗೆ ವರದಿಯಾಗುತ್ತಿವೆ. ಕೊಡಗಿನ ಸ್ವಚ್ಛತೆ ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ಸಾರ್ವಜನಿಕ ಸ್ಥಳದಲ್ಲಿ ಕಸ ಎಸೆಯುವುದು ಕಂಡು ಬಂದಲ್ಲಿ ಸಂಬಂಧಿಸಿದ ಸ್ಥಳೀಯ ಆಡಳಿತ ಕೂಡಲೇ ಕ್ರಮವಹಿಸಬೇಕು ಎಂದು ಅಭಿಪ್ರಾಯಪಟ್ಟರು.

ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ವತಿಯಿಂದ ಜಾರಿಗೊಂಡ ಸ್ವಚ್ಛ ಕೊಡಗು–ಸುಂದರ ಕೊಡಗು ಅಭಿಯಾನಕ್ಕೆ ಕೊಡಗು ಜಿಲ್ಲಾಡಳಿತ, ಜಿ.ಪಂ., ಪ್ರವಾಸೋದ್ಯಮ ಇಲಾಖೆ, ಮಡಿಕೇರಿ ನಗರಸಭೆ, ಸ್ಥಳೀಯ ಸಂಸ್ಥೆಗಳು, ಕೊಡಗು ಚೇಂಬರ್ ಆಫ್ ಕಾಮರ್ಸ್, ಕೊಡಗು ಹೋಂಸ್ಟೇ ಅಸೋಸಿಯೇಷನ್, ರೋಟರಿ, ಲಯನ್ಸ್ ಸಂಸ್ಥೆಗಳು, ಕೊಡಗು ಟ್ರಾವಲ್ ಅಸೋಸಿಯೇಷನ್, ರೆಡ್‌ಕ್ರಾಸ್, ಖಾಸಗಿ ಶಿಕ್ಷಣ ಸಂಸ್ಥೆ, ವಿವಿಧ ಸಂಘಸಂಸ್ಥೆಗಳು ಬೆಂಬಲ ಸೂಚಿಸಿ ಜಿಲ್ಲಾದ್ಯಂತ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿದ್ದವು.

ಸ್ವಚ್ಛ ಕೊಡಗು–ಸುಂದರ ಕೊಡಗು ಸ್ವಚ್ಛತಾ ಅಭಿಯಾನದಲ್ಲಿ ಜಿಲ್ಲೆಯಾದ್ಯಂತ ಸಂಗ್ರಹವಾಗುವ ಕಸವನ್ನು ವೈಜ್ಞಾನಿಕವಾಗಿ ಮೈಸೂರಿನ ತ್ಯಾಜ್ಯ ಸಂಗ್ರಹಾಲಯಕ್ಕೆ ಕೊಂಡೊಯ್ದು ವಿಲೇವಾರಿ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮಾಹಿತಿ ನೀಡಿದರು. ಕೊಡಗಿನೆಲ್ಲೆಡೆ ಶುಚಿತ್ವ ಕಾರ್ಯ ಕೈಗೊಳ್ಳಲಾಗಿದೆ. ಸರಕಾರಿ ಅಧಿಕಾರಿಗಳನ್ನು ನೋಡೆಲ್ ಅಧಿಕಾರಿಗಳನ್ನು ನೇಮಿಸಿ ಅಭಿಯಾನದಲ್ಲಿ ಸಂಗ್ರಹವಾಗುವ ತ್ಯಾಜ್ಯ ವಿಲೇವಾರಿಗೆ ಮೇಲ್ವಿಚಾರಣೆ ಮಾಡಲಾಗುತ್ತದೆ. ಅಪಾರ ಸಂಖ್ಯೆಯಲ್ಲಿ ಸಂಘ–ಸಂಸ್ಥೆಗಳು ಈ ಅಭಿಯಾನಕ್ಕೆ ಕೈ ಜೋಡಿಸಿವೆ. ಕೊಡಗಿಗೆ ಅಗತ್ಯವಾಗಿದ್ದ ಅಭಿಯಾನ ಇದಾಗಿದ್ದು ಅಸಾಧ್ಯ ಯಾವುದು ಇಲ್ಲ ಎಂಬುದನ್ನು ಸಾಬೀತು ಪಡಿಸಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ಅಧ್ಯಕ್ಷ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ ಮಾತನಾಡಿ, ಇದು ಕೊಡಗು ಸ್ವಚ್ಛತೆಯ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯಾಗಿದೆ ಈ ಅಭಿಯಾನದಲ್ಲಿ ಜಿಲ್ಲೆಯ ವಿವಿಧೆಡೆಗಳ 320ಕ್ಕೂ ಅಧಿಕ ಸಂಘಸಂಸ್ಥೆಗಳು ಪಾಲ್ಗೊಂಡಿವೆ. ನಿರೀಕ್ಷೆಗೂ ಮೀರಿದ ಸ್ಪಂದನ ವ್ಯಕ್ತವಾಗಿದೆ. ಹಲವು ವರ್ಷಗಳಿಂದ ಪ್ರವಾಸೋದ್ಯಮದಿಂದ ಕೊಡಗಿಗೆ ಸಮಸ್ಯೆ ಉಂಟಾಗುತ್ತಿದೆ ಎಂಬ ಆರೋಪವಿದೆ. ಈ ಆರೋಪವನ್ನು ದೂರಮಾಡಿ, ಜವಾಬ್ದಾರಿಯುತ ಪ್ರವಾಸೋದ್ಯಮಕ್ಕೆ ಒತ್ತು ನೀಡಲು ಪ್ರವಾಸೋದ್ಯಮ ಅವಲಂಭಿತರು ಜವಾಬ್ದಾರಿ ತೆಗೆದುಕೊಂಡು ಈ ಯೋಜನೆ ರೂಪಿಸಲಾಗಿದೆ. ಸಂಘ ಸಂಸ್ಥೆಗಳು ಈ ಮಹತ್ಕಾರ್ಯಕ್ಕೆ ಕೈ ಜೋಡಿಸುವುದರೊಂದಿಗೆ ಜಿಲ್ಲೆಯಲ್ಲಿ ನವ ಚರಿತ್ರೆಬರೆದಿದೆ ಈ ಸ್ವಚ್ಛತಾ ಆಂದೋಲನದಿಂದಾಗಿ ದೇಶಕ್ಕೇ ಕೊಡಗು ಮಾದರಿಯಾಗಲಿದೆ ಎಂದು ದಿನೇಶ್ ಹೇಳಿದರು. ಇದು ಒಂದು ದಿನಕ್ಕೆ ಸೀಮಿತವಲ್ಲ. ಮುಂದಿನ ದಿನಗಳಲ್ಲಿ ಪ್ರವಾಸಿ ತಾಣಗಳಲ್ಲಿ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಗುವುದು. ತ್ಯಾಜ್ಯ ಮುಕ್ತ, ಸ್ವಚ್ಛ ಕೊಡಗು ನಿರ್ಮಾಣದ ಸಂಕಲ್ಪದೊಂದಿಗೆ ವಿವಿಧ ಕಾರ್ಯ ಯೋಜನೆ ಜಾರಿಗೊಳಿಸಿ ಭವಿಷ್ಯದಲ್ಲಿ ಕೊಡಗನ್ನು ಪ್ಲಾಸ್ಟಿಕ್ ಮುಕ್ತ ಜಿಲ್ಲೆಯನ್ನಾಗಿಸುವ ಗುರಿಯನ್ನು ಸಂಘ ಹೊಂದಿದೆ ಎಂದೂ ದಿನೇಶ್ ಮಾಹಿತಿ ನೀಡಿದರು.

ಮಡಿಕೇರಿ ನಗರಸಭೆ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಪೌರಾಯುಕ್ತ ಹೆಚ್.ಆರ್.ರಮೇಶ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿಕಾಳಪ್ಪ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ನಾಸೀರ್ ಅಹಮ್ಮದ್, ಉಪಾಧ್ಯಕ್ಷ ಜಾಹೀರ್ ಅಹಮ್ಮದ್, ಗೌರವ ಸಲಹೆಗಾರ ಜಿ.ಚಿದ್ವಿಲಾಸ್, ಸ್ವಚ್ಛ ಕೊಡಗು ಸುಂದರ ಕೊಡಗು ಅಭಿಯಾನದ ಸಾಮಾಜಿಕ ಜಾಲತಾಣ ಪ್ರಚಾರ ಸಮಿತಿ ಸಂಚಾಲಕ ಅನಿಲ್ ಹೆಚ್.ಟಿ, ಚೇಂಬರ್ ಆಫ್ ಕಾಮರ್ಸ್ ಮಡಿಕೇರಿ ಘಟಕದ ಅಧ್ಯಕ್ಷ ಸಂತೋಷ್ ಅಣ್ವೇಕರ್, ಹೋಂಸ್ಟೇ ಅಸೋಸಿಯೇಷನ್ ಅಧ್ಯಕ್ಷೆ ಮೋಂತಿ ಗಣೇಶ್, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ, ರೋಟರಿ ವುಡ್ಸ್ ಅಧ್ಯಕ್ಷ ಕಿರಣ್ ಕುಂದರ್, ರೆಡ್‌ಕ್ರಾಸ್ ಜಿಲ್ಲಾಧ್ಯಕ್ಷ ಬಿ.ಕೆ. ರವೀಂದ್ರ ರೈ, ಔಷಧಿ ವ್ಯಾಪಾರಸ್ಥರ ಸಂಘದ ಜಿಲ್ಲಾ ನಿರ್ದೇಶಕರಾದ ಪ್ರಸಾದ್ ಗೌಡ, ಜನರಲ್ ತಿಮ್ಮಯ್ಯ ಶಾಲಾ ಪ್ರಾಂಶುಪಾಲೆ ಬಾಳೆಯಡ ಸವಿತಾ ಪೂವಯ್ಯ, ಇನ್ನರ್ ವೀಲ್ ಕಾರ್ಯದರ್ಶಿ ನಮಿತಾ ರೈ, ಕನ್ನಡ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮ್ಮದ್, ಪ್ರವಾಸೋದ್ಯಮ ಇಲಾಖೆಯ ಪ್ರಭಾರ ಉಪನಿರ್ದೇಶಕ ಬಸಪ್ಪ, ಅಧಿಕಾರಿ ಜತಿನ್, ಕೊಡಗು ಪ್ರೆಸ್ ಕ್ಲಬ್ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ, ಕೊಡಗು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ವಸಂತ್, ಮಡಿಕೇರಿ ಲಯನ್ಸ್ ಸಂಸ್ಥೆ ಅಧ್ಯಕ್ಷ ಮದನ್ ಸೇರಿದಂತೆ ಅನೇಕರು ಹಾಜರಿದ್ದರು.

ಶಾಸಕ ಡಾ.ಮಂತರ್‌ಗೌಡ, ಜಿಲ್ಲಾಧಿಕಾರಿ ವೆಂಕಟ್‌ರಾಜ್ ನಗರದ ತಿಮ್ಮಯ್ಯ ವೃತ್ತದ ವ್ಯಾಪ್ತಿಯಲ್ಲಿ ತ್ಯಾಜ್ಯ ಹೆಕ್ಕಿದ್ದಲ್ಲದೇ ರಸ್ತೆ ಬದಿಯ ಚರಂಡಿಯೊಳಕ್ಕೂ ಇಳಿದು ಅಲ್ಲಿ ಬಿದ್ದಿದ್ದ ಬಾಟಲಿ, ಕಸ ತ್ಯಾಜ್ಯವನ್ನು ತೆಗೆದು ಮಾದರಿಯಾದರು.

ಬಾಳುಗೋಡು ಬಳಿ ಉದ್ಯಮಿಯ ತಡೆದು ಹಲ್ಲೆ ನಡೆಸಿ ಹಣ, ಪರ್ಸ್ ಕಸಿದು ಪರಾರಿ

ಮಡಿಕೇರಿ, ಅ.15– ಗೋಣಿಕೊಪ್ಪ–ಹುಣಸೂರು ಮಾರ್ಗವಾಗಿ ಮೈಸೂರಿಗೆ ತೆರಳುತ್ತಿದ್ದ ಉದ್ಯಮಿಯ ಕಾರನ್ನು ಅಡ್ಡಗಟ್ಟಿ ತೀವ್ರ ಹಲ್ಲೆ ನಡೆಸಿ ಅವರ ಬಳಿ ಇದ್ದ ಹಣ ಹಾಗೂ ಪರ್ಸ್ ಅನ್ನು ಕಸಿದುಕೊಂಡು ಪರಾರಿಯಾಗಿರುವ ಘಟನೆ ಬಾಳುಗೋಡು ಬಳಿ ನಡೆದಿದೆ.

ಕೇರಳದ ವಡಗರ ಜಿಲ್ಲೆಯ ಹೋಟೆಲ್ ಹಾಗೂ ಬಟ್ಟೆ ಉದ್ಯಮಿ ಅಪ್ಪಾಸ್ ಎಂಬುವವರೇ ಹಲ್ಲೆಗೊಳಗಾದ ವ್ಯಕ್ತಿಯಾಗಿದ್ದಾರೆ. ಬುಧವಾರ ಬೆಳಿಗ್ಗೆ ಸುಮಾರು 11.30ರ ಸಮಯದಲ್ಲಿ ಕೇರಳದಿಂದ ದೀಪಾವಳಿ ಹಬ್ಬದ ಪ್ರಯುಕ್ತ ತನ್ನ ಹೋಟೆಲ್ ಹಾಗೂ ಬಟ್ಟೆ ಅಂಗಡಿಗೆ ಸಾಮಾಗ್ರಿ ಖರೀದಿಸಲು ಅಪ್ಪಾಸ್ ಎಂಬುವರು ತನ್ನ ಕಾರಿ(ಕೆಎಲ್.11 ಬಿಕೆ.9703)ನಲ್ಲಿ ಗೋಣಿಕೊಪ್ಪ–ಹುಣಸೂರು ಮಾರ್ಗವಾಗಿ ಮೈಸೂರಿಗೆ ತೆರಳುತ್ತಿದ್ದರು. ಈ ಸಂದರ್ಭ ಬಾಳುಗೋಡುವಿನ ಪೆಟ್ರೋಲ್ ಬಂಕ್‌ನಿಂದ ಮುಂದಿನ ತಿರುವಿನಲ್ಲಿ ಮಹಾರಾಷ್ಟ್ರನೊಂದಣಿ ಸಂಖ್ಯೆ ಹೊಂದಿದ್ದ ಬಿಳಿ ಬಣ್ಣದ ಕಾರಿನಲ್ಲಿ ಹಿಂಬಾಲಿಸಿಕೊಂಡು ಬಂದ ಐದು ಮಂದಿಯ ತಂಡ ಅಪ್ಪಾಸ್ ಅವರ ಕಾರನ್ನು ಅಡ್ಡಗಟ್ಟಿದ್ದಾರೆ.



ಹಲ್ಲೆಗೊಳಗಾದ ಉದ್ಯಮಿ

ಬಳಿಕ ಕಬ್ಬಿಣದ ರಾಡ್ ಹಾಗೂ ದೊಣ್ಣೆಯಿಂದ ತಲೆಯ ಭಾಗಕ್ಕೆ ಹಲ್ಲೆ ನಡೆಸಿ ಗಾಯಗೊಳಿಸಿದ್ದು ಜೇಬಿನಲ್ಲಿದ್ದ 10,400 ರೂ. ಹಾಗೂ ಪರ್ಸ್ ಕಸಿದುಕೊಂಡು ಪರಾರಿಯಾಗಿದ್ದಾರೆ. ಗಾಯಾಳುವನ್ನು ಚಿಕಿತ್ಸೆಗಾಗಿ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾಖಲಿಸಲಾಗಿದೆ. ಗೋಣಿಕೊಪ್ಪ ಪೊಲೀಸ್ ಠಾಣಾಧಿಕಾರಿ ಪ್ರದೀಪ್ ಕುಮಾರ್, ಸಿಬ್ಬಂದಿಗಳಾದ ಸತೀಶ್, ಲೋಕೇಶ್, ಸಜ್ಜನ್ ತನುಕುಮಾರ್, ವಿರಾಜಪೇಟೆ ಗ್ರಾಮಾಂತರ ಕ್ರೈಂ ಠಾಣಾಧಿಕಾರಿ ಬಿ.ಎಸ್.ವಾಣಿ, ಸಿಬ್ಬಂದಿಗಳಾದ ಅಬ್ದುಲ್ ಮಜೀದ್, ಹೇಮಂತ್, ಪ್ರಮೀಳಾ, ಪೊನ್ನಂಪೇಟೆ ಠಾಣಾಧಿಕಾರಿ ಜಿ.ನವೀನ್, ಬಾಳಪ್ಪ, ಘಟನಾ ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಾಳೆ ಶ್ರೀ ಕ್ಷೇತ್ರ ತಲಕಾವೇರಿಯಲ್ಲಿ ಪವಿತ್ರ ತೀರ್ಥೋದ್ಭವ

ಮಡಿಕೇರಿ, ಅ.15– ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ, ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಅ.17 ರಂದು ಮಧ್ಯಾಹ್ನ 1.44 ನಿಮಿಷಕ್ಕೆ ಸಲ್ಲುವ ಮಕರ ಲಗ್ನದಲ್ಲಿ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಜರುಗಲಿದೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ. ಮಂತರ್ ಗೌಡ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ವಿಧಾನ ಪರಿಷತ್ ಸದಸ್ಯರು ಇತರು ಪಾಲ್ಗೊಳ್ಳಲಿದ್ದಾರೆ.

ಕಾಡಾನೆ ದಾಳಿ; ಫಸಲು ನಾಶ



ಕೊಯನಾಡಿನ ಕೇನಾಜೆಯ ತೋಟಕ್ಕೆ ಕಾಡಾನೆಗಳು ದಾಳಿ ನಡೆಸಿ ಫಸಲನ್ನು ಧ್ವಂಸ ಗೊಳಿಸಿದೆ.

ನಾಪೋಕ್ಲು: ಕೊಡಗಿನ ಗಡಿಭಾಗ ಸಂಪಾಜೆ ಗ್ರಾಮ ಪಂಚಾಯಿತಿಯ ಕೊಯನಾಡಿನ ಗ್ರಾಮದ ತೋಟಕ್ಕೆ ಕಾಡಾನೆಗಳು ದಾಳಿ ನಡೆಸಿ ಕೃಷಿ ನಾಶ ಪಡಿಸಿದ ಘಟನೆ ಮಂಗಳವಾರ ರಾತ್ರಿ ಸಂಭವಿಸಿದೆ. ಕೊಯನಾಡಿನ ಕೇನಾಜೆ ಉಲ್ಲಾಸ ಅವರ ತೋಟಕ್ಕೆ ಕಾಡಾನೆಗಳು ದಾಳಿ ನಡೆಸಿ ಕೃಷಿ ಗಿಡಗಳನ್ನು ತಿಂದು ತುಳಿದು ನಾಶ ಮಾಡಿದೆ. ಮಂಗಳವಾರ ರಾತ್ರಿ ಕಾಡಾನೆಗಳ ಹಿಂಡು ತೋಟಕ್ಕೆ ಲಗ್ಗೆ ಇಟ್ಟು ತೆಂಗು,ಅಡಕೆ, ಬಾಳೆ ಸೇರಿದಂತೆ, ಕೃಷಿ ಗಿಡಗಳನ್ನು ಧ್ವಂಸ ಗೊಳಿಸಿವೆ. ಈ ಭಾಗದಲ್ಲಿ ನಿರಂತರ ಕಾಡಾನೆಗಳ ದಾಳಿಯಿಂದ ಕೃಷಿಕರು ಸಂಕಷ್ಟಕ್ಕೆ ಒಳಗಾಗಿದ್ದು ಕೂಡಲೇ ಸಂಬಂಧಪಟ್ಟ ಇಲಾಖೆ ಹಾಗೂ ಸರಕಾರ ಸೂಕ್ತ ಪರಿಹಾರವನ್ನು ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಅಮ್ಮತ್ತಿ ಶಾಖಾ ವ್ಯಾಪ್ತಿಯ ಚೆಂಬೆಬೆಳ್ಳೂರು ಫೀಡರ್‌ನಲ್ಲಿ ನಿರ್ವಹಣೆ ಕಾರ್ಯ ಕೈಗೆತ್ತಿಕೊಂಡಿರುವುದರಿಂದ ಅ.16 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಚೆಂಬೆಬೆಳ್ಳೂರು, ಹಾಲುಗುಂದ, ಕೊಂಡಂಗೇರಿ, ಐಮಂಗಲ, ಕಣ್ಣಂಗಾಲ, ಅಮ್ಮತ್ತಿ, ಒಂಟಿಯಂಗಡಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಇಂದು ಯುವಜನೋತ್ಸವ

ಮಡಿಕೇರಿ: ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಡಿಕೇರಿ ಮೈ ಭಾರತ್, ಜಿಲ್ಲಾ ಯುವ ಒಕ್ಕೂಟ, ವಿರಾಜಪೇಟೆ ಹಾಗೂ ಸೋಮವಾರಪೇಟೆ ತಾಲೂಕು ಯುವ ಒಕ್ಕೂಟ, ಸರ್ಕಾರಿ ಪದವಿ ಪೂರ್ವ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವವು ಅ.16 ರಂದು ಬೆಳಗ್ಗೆ 9.30ಕ್ಕೆ ನಡೆಯಲಿದೆ.

ತಾಯಿಯಿಂದ ಬೇರ್ಪಟ್ಟ ಹುಲಿ ಮರಿಗಳ ರಕ್ಷಣೆ

ಚಾಮರಾಜನಗರ: ತಾಯಿಯಿಂದ ಬೇರ್ಪಟ್ಟಿದ್ದ ಮೂರು ಹುಲಿ ಮರಿಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ.

ಚಾಮರಾಜನಗರ ತಾಲೂಕಿನ ಬಿಆರ್‌ಟಿ ಅರಣ್ಯ ವ್ಯಾಪ್ತಿಯ ಪುಣಜನೂರು ಹಾಗೂ ಬೇಡಗುಳಿ ವಲಯದಲ್ಲಿ ಮಂಗಳವಾರ ರಾತ್ರಿ ಮೂರು ಹುಲಿ ಮರಿಗಳು ತನ್ನ ತಾಯಿ ಹುಲಿಯಿಂದ ಬೇರ್ಪಟ್ಟು ಅಲೆದಾಡುತ್ತಿರುವುದನ್ನು ಅರಣ್ಯ ಇಲಾಖೆ ಸಿಬ್ಬಂದಿ ಗಮನಿಸಿ ಮರಿ ಹುಲಿಗಳ ರಕ್ಷಣೆ ಮಾಡಿದ್ದಾರೆ.

ಗಸ್ತು ನಡೆಸುವಾಗ ಪತ್ತೆ: ಅರಣ್ಯ ಇಲಾಖೆ ಸಿಬ್ಬಂದಿ ಪುಣಜನೂರು ಹಾಗೂ ಬೇಡಗುಳಿ ಸಂಪರ್ಕಿಸುವ ರಸ್ತೆಯಲ್ಲಿ ಗಸ್ತು ನಡೆಸುತ್ತಿದ್ದಾಗ ಬಜೇಬಾವಿ ಅರಣ್ಯ ಪ್ರದೇಶದಲ್ಲಿ ಎರಡು ಹುಲಿ ಮರಿಗಳು ಅಲೆದಾಡುತ್ತಿರುವುದನ್ನು ಗಮನಿಸಿದ್ದಾರೆ. ನಂತರ ಸಿಬ್ಬಂದಿಗಳು ಕಪ್ಪಿಣ ಕಣವೆ ಅರಣ್ಯ ಪ್ರದೇಶದವರೆಗೂ ಗಸ್ತು ಮಾಡಿಕೊಂಡು ವಾಪಸ್ ಪುಣಜನೂರು ಹಾಗೂ ಬೇಡಗುಳಿ ರಸ್ತೆಗೆ ಬಂದಾಗ ಅದೇ ಎರಡು ಹುಲಿ ಮರಿಗಳು ಇರುವುದನ್ನು ಕಂಡು ಸಂಶಯದಿಂದ ಪರಿಶೀಲಿಸಿದಾಗ ತಾಯಿ ಹುಲಿ ಇಲ್ಲದಿರುವುದು ಖಚಿತವಾಗಿದೆ.



ತಾಯಿಯಿಂದ ಬೇರ್ಪಟ್ಟ ಮೂರು ಹುಲಿ ಮರಿಗಳು

ಕೂಡಲೇ ಸಿಬ್ಬಂದಿ ಮೇಲಧಿಕಾರಿಗಳ ಗಮನಕ್ಕೆ ತಿಳಿಸಿ, ಅವರ ನಿರ್ದೇಶನದ ಮೇರೆಗೆ ಸುತ್ತಮುತ್ತಲ ಸ್ಥಳಗಳಲ್ಲಿ ಕ್ಯಾಮೆರಾ, ಟ್ರಾಪ್‌ಗಳನ್ನು ಅಳವಡಿಸಿ ತಾಯಿ ಹುಲಿಯ ಚಲನ–ವಲನಗಳ ಮೇಲೆ ನಿಗಾವಹಿಸಲಾಯಿತು.

ತಾಯಿ ಹುಲಿಗಾಗಿ ಹುಡುಕಾಟ: ಎನ್‌ಟಿಸಿಎ ಮಾರ್ಗಸೂಚಿ ಅನ್ವಯ ತಾಯಿ ಹುಲಿ ಪತ್ತೆ ಹಾಗೂ ಮರಿಗಳ ನಿಗಾಕ್ಕಾಗಿ ಮೇಲುಸ್ತುವಾರಿ ಸಮಿತಿ ರಚನೆ ಮಾಡಲಾಗಿದೆ. ತಾಯಿ ಹುಲಿಯ ಪತ್ತೆಗಾಗಿ ಕೂಂಬಿಂಗ್ ನಡೆಸಲಾಗುತ್ತಿದೆ.

ಇನ್ನೂ ಪತ್ತೆಯಾದ ಹುಲಿಗಳು ಸುಮಾರು 30 ದಿನಗಳ ಮರಿಗಳಾಗಿದ್ದು, ಪಶು ವೈದ್ಯರು ನಿಗಾ ವಹಿಸಿದ್ದಾರೆ.

ಒಳಮೀಸಲಾತಿಯ ರಾಜ್ಯ ಮಟ್ಟದ ಹೋರಾಟಗಾರರನ್ನು ಬಂಧಿಸಿದರೆ ಉಗ್ರ ಹೋರಾಟ

ವಕೀಲ ಬೂದಿತಿಟ್ಟು ರಾಜೇಂದ್ರ ಎಚ್ಚರಿಕೆ



ಪತ್ರಿಕಾಗೋಷ್ಠಿಯಲ್ಲಿ ವಕೀಲರ ವೇದಿಕೆ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ ಮಾತನಾಡಿದರು.

ಚಾಮರಾಜನಗರ, ಅ.15– ರಾಜ್ಯ ಸರ್ಕಾರ ಒಳಮೀಸಲಾತಿಯ ರಾಜ್ಯ ಮಟ್ಟದ ಹೋರಾಟಗಾರರನ್ನು ಬಂಧಿಸಿದರೆ ಮಾದಿಗ ಸಮುದಾಯ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡುತ್ತದೆ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ ಎಚ್ಚರಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಹೋರಾಟಗಾರರಾದ ಭಾಸ್ಕರ್ ಪ್ರಸಾದ್, ವಕೀಲರಾದ ಸುರೇಂದ್ರ ಕುಮಾರ್ ಅವರನ್ನು ರಾಜ್ಯ ಸರ್ಕಾರ ಬಂಧಿಸಿರುವುದನ್ನು ಸಾಮಾಜಿಕ ನ್ಯಾಯಪರ ಹೋರಾಟ ಸಮಿತಿ, ಮಾದಿಗ ಮೀಸಲಾತಿ ಹೋರಾಟ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ರಾಜ್ಯ ಸರ್ಕಾರ ಬಂಧನ ಮುಂದುವರಿದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ರಾಜ್ಯ ಸರ್ಕಾರದ 43 ಇಲಾಖೆಗಳಲ್ಲಿ ಖಾಲಿಯಿರುವ 2.84 ಲಕ್ಷ ಹುದ್ದೆಗಳು ಭರ್ತಿ ಮಾಡದೆ ಜೊತೆಗೆ ಒಳಮೀಸಲಾತಿ ಜಾರಿ ಅಧಿಸೂಚನೆ ಹೊರಡಿಸದೆ ಸುಮ್ಮನೆ ದಿವ್ಯನಿರ್ಲಕ್ಷ್ಯವನ್ನು ವಹಿಸುತ್ತಿರುವುದು ಸರಿಯಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಚ್.ಸಿ.ಮಹದೇವಪ್ಪ ವಿರುದ್ಧ ಕಿಡಿಕಾರಿದರು.

ಮಾದಿಗ ಸಮುದಾಯ ಕಳೆದ 35 ವರ್ಷಗಳಿಂದ ಒಳ ಮೀಸಲಾತಿಗಾಗಿ ಹೋರಾಟದ ಹಿನ್ನೆಲೆಯಲ್ಲಿ ನ್ಯಾ.ನಾಗಮೋಹನ್ ದಾಸ್ ಅವರು ಕರ್ನಾಟಕ ಸರ್ಕಾರಕ್ಕೆ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಎಲ್ಲ ಕ್ಷೇತ್ರದಲ್ಲಿ ಒಳ ಮೀಸಲಾತಿ ನೀಡಬೇಕು ಎಂದು ಹೇಳಿ ಆಯೋಗದ ವರದಿ ಸಲ್ಲಿಸಿದ್ದಾರೆ. ಅದರಂತೆ ರಾಜ್ಯ ಸರ್ಕಾರ ಕೆಲವು ಮಾರ್ಪಾಡು ಮಾಡಿ 19–08–2025 ರಲ್ಲಿ ಸಚಿವ ಸಂಪುಟದಲ್ಲಿ ಮಂಡನೆ ಮಾಡಿ 25–08–2025ರಲ್ಲಿ ಪವರ್ಗ ಎ. ಪವರ್ಗ ಬಿ. ಪ್ರವರ್ಗ ಸಿ ಎಂದು ವಿಂಗಡಿಸಿ ಮಾದಿಗ ಮತ್ತು ಹೊಲಯಾ ಸಮುದಾಯಕ್ಕೆ ತಲಾ ಶೇ.6 ಮೀಸಲಾತಿ. ಪ್ರವರ್ಗ ಸಿ ಶೇ.5ರಷ್ಟು ನೀಡಿದ್ದು, ಒಂದೊಂದು ರೀತಿ ಆದೇಶ ಮಾಡುತ್ತಿದೆ ಇದು ಸರಿಯಲ್ಲ ತೆಲಂಗಾಣ, ಆಂಧ್ರ, ಹರಿಯಾಣ ರಾಜ್ಯಗಳ ಮಾದರಿಯಲ್ಲೇ ಕರ್ನಾಟಕ ರಾಜ್ಯದಲ್ಲಿ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಸರ್ಕಾರ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲೂ, ಒಳ ಮೀಸಲಾತಿ ಜಾರಿಗೆ ತರಬೇಕು. ಎಸ್ಸಿಪಿ. ಟಿಎಸ್ ಪಿ ಅನುದಾನವನ್ನು ಪ್ರವರ್ಗ ಎ. ಪ್ರವರ್ಗ ಬಿ, ಪ್ರವರ್ಗ ಸಿ ಗೆ ಸಮಾನವಾಗಿ ಹಂಚಿಕೆ ಮಾಡಬೇಕು. ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಕೀಲರಾದ ಹಂಗಳ ಸಿದ್ದೇಶ್, ಮಲ್ಲು, ಒಳ ಮೀಸಲಾತಿ ಹೋರಾಟ ಸಮಿತಿ ಕಾರ್ಯದರ್ಶಿ ಸಿ.ಮಧು, ಮುಖಂಡರಾದ ಪಿ.ಶಿವಮಲ್ಲು, ರಸ್ತೆ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಬಸವರಾಜು ದ್ವಾರ್ಕಿ, ಬಾಬು ಜಗಜೀವನರಾಂ ಮಾಜಿ ಅಧ್ಯಕ್ಷ ವಸಂತ ಕುಮಾರ್ ಹಾಜರಿದ್ದರು.

ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಅಧ್ಯಕ್ಷರಾಗಿ ಬಿ.ಮಹೇಶ್ ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಆರ್.ಮುರಳಿ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಚಾಮರಾಜನಗರ, ಅ.15– ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ ಚಾಮರಾಜನಗರದ ರಥದ ಬೀದಿಯ ತರಕಾರಿ ಮಾರುಕಟ್ಟೆ ಹಿಂಭಾಗದ ಸಂಘದ ಕಛೇರಿಯಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿ.ಮಹೇಶ್‌ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಆರ್.ಮುರಳಿ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಬಿ.ಮಹೇಶ್‌ಕುಮಾರ್ ಅವಿರೋಧವಾಗಿ ಆಯ್ಕೆಯಾದ ನಿರ್ದೇಶಕರುಗಳಿಗೆ ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೊ ಆಪರೇಟಿವ್ ಸೊಸೈಟಿ ಲಿ.ನ ನಿಯಮಗಳನ್ನು ತಿಳಿಸುತ್ತ ನಮ್ಮ ಸಂಸ್ಥೆಯು ಕಾನೂನು ಬದ್ಧವಾಗಿ ನಡೆದು ಕೊಂಡು ಬಂದಿದೆ. ಪ್ರತಿಯೊಬ್ಬ ಸದಸ್ಯರು ಸಂಸ್ಥೆಯ ಆಧಾರವಾಗಿದ್ದಾರೆ. ನಿರ್ದೇಶಕರು ಸಂಸ್ಥೆಯಲ್ಲಿ ಹೆಚ್ಚು ಹಣ ಠೇವಣಿಯನ್ನು ಇಡುವ ಜೊತೆಗೆ ಹೆಚ್ಚಿನ ಸದಸ್ಯರನ್ನು ಸಂಸ್ಥೆಗೆ ಸೇರ್ಪಡಿಸಿ ಇನ್ನು ಅಭಿವೃದ್ಧಿಗೆ ಶ್ರಮಿಸಿ ಎಂದರು. ನೂತನ ಅಧ್ಯಕ್ಷರಿಗೆ ಹಾಗೂ ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ರಂಗರಾಜು.ಸಿ, ರಾಜು ವರ್ಗಿಸ್, ಲೋಕೇಶ್. ಆರ್, ಬಿ.ವಿ.ಶ್ರೀನಾಥ್, ಎಸ್.ಸುರೇಶ್, ವೆಂಕಟರಾವ್, ವರ್ಷ.ಜೆ, ಪಣಿರಾಜ್.ಟಿ.ಎನ್, ಸಯ್ಯದ್ ಅಲ್ತಾಫ್, ಸುಮಿತ್ರ.ಪಿ, ಎನ್.ಶೋಭಾ ಕುಮಾರಿ, ವಿಜಯಕುಲಾಲ್, ಜಯಲಕ್ಷ್ಮಮ್ಮ, ಶಿವಣ್ಣ. ಎಸ್ ಹಾಗೂ ಚುನಾವಣಾ ಅಧಿಕಾರಿ ಎಸ್.ಪಿ, ರವಿಪ್ರಸಾದ್, ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೊ ಆಪರೇಟಿವ್ ಸೊಸೈಟಿ ಲಿ. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಶ್ಮಿ.ಎನ್, ಮುಖ್ಯ ಲೆಕ್ಕಾಧಿಕಾರಿ ಅಂಜಲಿ ಉಪಸ್ಥಿತರಿದ್ದರು.

ಅರಣ್ಯ, ವನ್ಯಜೀವಿ ಸಂರಕ್ಷಣೆ ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ

ಗುಂಡ್ಲುಪೇಟೆ, ಅ.15– ಅರಣ್ಯ ಸಂರಕ್ಷಣೆ ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ಸರ್ಕಾರ ಕಾನೂನುಗಳನ್ನು ಜಾರಿಗೆ ತಂದಿದ್ದು ಇದನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುತ್ತದೆ ಎಂದು ಅರಣ್ಯ ಸಂಚಾರಿ ಘಟಕದ ಸಬ್‌ಇನ್ಸ್‌ಪೆಕ್ಟರ್ ಯಾಸ್ಮಿನ್ ತಾಜ್ ಎಚ್ಚರಿಸಿದರು.

ಪಟ್ಟಣದ ಕೆ.ಎಸ್.ನಾಗರತ್ನಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಚಾಮರಾಜನಗರ ಸಿಐಡಿ ಅರಣ್ಯ ಸಂಚಾರಿ ಘಟಕದ ವತಿಯಿಂದ ಅರಣ್ಯ ಸಂಪತ್ತು ಮತ್ತು ಅರಣ್ಯ ಸಂರಕ್ಷಣೆಯ ಬಗ್ಗೆ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇತ್ತೀಚೆಗೆ ಅರಣ್ಯನಾಶದಿಂದ ಪರಿಸರದ ಮೇಲೆ ತುಂಬಾ ಪರಿಣಾಮ ಬೀರುತಿದ್ದು ಕಾಡು ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ಕಠಿಣ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಸಾಗುವಾನಿ ಮರಗಳ ಅಕ್ರಮ ಸಂಗ್ರಹ, ಮಾಂಸ ಹಾಗೂ ಚರ್ಮಕ್ಕಾಗಿ ವನ್ಯಜೀವಿಗಳ ಹತ್ಯೆ, ಅವುಗಳ ಅಂಗಾಂಗಗಳನ್ನು ಇಟ್ಟುಕೊಳ್ಳುವುದು ಕಾನೂನಿನ ಪ್ರಕಾರ ಅಪರಾಧವಾಗಿದ್ದು ಕಠಿಣ ಶಿಕ್ಷೆ ವಿಧಿಸಲಾಗುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳು ತಮ್ಮ ಪಾಲಕರಿಗೆ ಮನವರಿಕೆ ಮಾಡಿಕೊಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲಬಾಲಸುಬ್ರಹ್ಮಣ್ಯಂ, ಅರಣ್ಯ ಸಂಚಾರಿ ಘಟಕದ ಸಿಬ್ಬಂದಿ ನವೀನ್, ಸ್ವಾಮಿ, ಮಾದೇಶ್‌ಕುಮಾರ್, ರಾಜು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಇದ್ದರು.



ಗುಂಡ್ಲುಪೇಟೆ ಪಟ್ಟಣದ ಕೆ.ಎಸ್.ನಾಗರತ್ನಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಅರಣ್ಯ ಸಂಪತ್ತು ಮತ್ತು ಅರಣ್ಯ ಸಂರಕ್ಷಣೆಯ ಬಗ್ಗೆ ಜಾಗೃತಿ ಕಾರ್ಯಕ್ರಮದಲ್ಲಿ ಯಾಸ್ಮಿನ್ ತಾಜ್ ಮಾತನಾಡಿದರು. ಬಾಲಸುಬ್ರಹ್ಮಣ್ಯ ಇದ್ದರು.

ದೀಪಾವಳಿ ಜಾತ್ರೆ ಹಿನ್ನೆಲೆ
ಮಹದೇಶ್ವರಬೆಟ್ಟಕ್ಕೆ ದ್ವಿಚಕ್ರ, ತ್ರಿಚಕ್ರ ವಾಹನಗಳ ಪ್ರವೇಶ ನಿಷೇಧ

ಚಾಮರಾಜನಗರ, ಅ.15– ಹನೂರು ತಾಲೂಕಿನ ಮಲೆ ಮಹದೇಶ್ವರಬೆಟ್ಟಕ್ಕೆ ದೀಪಾವಳಿ ಜಾತ್ರಾ ಸಂಬಂಧ ಜಿಲ್ಲೆ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಲಕ್ಷಾಂತರ ಭಕ್ತಾಧಿಗಳು ಆಗಮಿಸುವ ಹಿನ್ನೆಲೆಯಲ್ಲಿ ಮಲೆಮಹದೇಶ್ವರ ಬೆಟ್ಟಕ್ಕೆ ಜಾತ್ರೆಗಾಗಿ ತೆರಳುವ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಸಂಚಾರವನ್ನು ಅ.19ರ ಬೆಳಗ್ಗೆ 6 ರಿಂದ 22ರ ಸಂಜೆ 7 ಗಂಟೆಯವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆದೇಶ ಹೊರಡಿಸಿದ್ದಾರೆ.

ದೀಪಾವಳಿ ಜಾತ್ರಾ ಪ್ರಯುಕ್ತ ಮಲೆಮಹದೇಶ್ವರ ಬೆಟ್ಟದ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗುವುದರಿಂದ ಹಾಗೂ ರಸ್ತೆಯು ಅರಣ್ಯ ಪ್ರದೇಶ ಹಾಗೂ ತುಂಬಾ ಕಡಿದಾದ ತಿರುವುಗಳಿಂದ ಕೂಡಿದ್ದು, ಸಂಚಾರದಲ್ಲಿ ವಾಹನಗಳ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವುದರಿಂದ ಕರ್ನಾಟಕ ಮೋಟಾರು ವಾಹನಗಳ ಕಾಯ್ದೆ ಅನ್ವಯ ಮಲೆಮಹದೇಶ್ವರ ಬೆಟ್ಟಕ್ಕೆ ಜಾತ್ರೆಗಾಗಿ ಸಾರ್ವಜನಿಕರು, ಭಕ್ತಾಧಿಗಳು ದ್ವಿಚಕ್ರ ಮತ್ತು ತ್ರಿಚಕ್ರ (ಆಟೋರಿಕ್ಷಾ ಮತ್ತು ಗೂಡ್ಸ್ ವಾಹನಗಳು ಸೇರಿದಂತೆ) ವಾಹನಗಳಲ್ಲಿ ತೆರಳುವುದನ್ನು ಅ.19ರ ಬೆಳಗ್ಗೆ 6 ರಿಂದ 22ರ ಸಂಜೆ 7 ಗಂಟೆಯವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಇಂದು ಮಹದೇಶ್ವರ ಸ್ವಾಮಿ ದೇವಸ್ಥಾನದ ಗೋಲಕ ಹಣ ಎಣಿಕೆ



ಚಾಮರಾಜನಗರ, ಅ.15– ಮಲೆಮಹದೇಶ್ವರ ಬೆಟ್ಟದ ಮಹದೇಶ್ವರ ಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯವನ್ನು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ವಿಶ್ರಾಂತಿಗೃಹದಲ್ಲಿ ಅ.16ರಂದು ಬೆಳಿಗ್ಗೆ ಕೊಳ್ಳೇಗಾಲ ಶಾಖೆಯ ಬ್ಯಾಂಕ್ ಆಫ್ ಬರೋಡ ಸಿಬ್ಬಂದಿ ಸಹಯೋಗದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ನಡೆಸಲಾಗುವುದು ಎಂದು ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸದ್ಗುರು ರಿಯಲ್ ಎಸ್ಟೇಟ್
ಸೈಟು, ಮನೆ, ಜಮೀನು, ಪ್ಲಾಟ್ ಮಾರುವವರು ಕೊಳ್ಳುವವರು ನೇರ ಸಂಪರ್ಕಿಸಿ.
6361740552
9449408551

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಂ ಹಾಗೂ ಬೈಕ್ ಶೋರೂಂಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. (18k -38k), SSLC, PUC, DEGREE.
6366718368

SITE FOR SALE
40x60 North face, MUDA Approved and E-khatha, Mysuru Zilla Panchayat Employees Welfare Association Layout. Yadahalli, Mysuru.
Mob: 8971415815

WANTED
ACCOUNTANT
MALE / FEMALE.
Experience in Tally and Basic Computer knowledge. Any Degree
Mob: 63660 06603

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

NEW HOUSE FOR LEASE IN RT NAGAR
2 BHK House- Ground floor and First floor, Lease - 15 Lakh only for Veg, Address - No.52, 2nd cross, Journalist Layout, Near Power Friends Club, RT Nagar, Mysore- 25
Contact number
8088080707, 7892385734

VILLA PLOT
On New NH 275
8000 to 10000 Sft.
@ Just 735/Sft.
Next to Bilikere. Buy Back guaranteed. Main Habitants from reputed Public Sector
Bank Loan Available
Few Plots only
Call 9886697052

ತಕ್ಷಣ ಬೇಕಾಗಿದ್ದಾರೆ
ಬೆಂಗಳೂರು, ರಾಮನಗರ, ಮಂಡ್ಯ, ಚನ್ನಪಟ್ಟಣ, ಬಿಡದಿ Payments Bank, Loan, Finance, ಅನುಭವ ಉಳ್ಳವರಿಗೆ ಮೊದಲ ಆದ್ಯತೆ, ವಿದ್ಯಾರ್ಹತೆ PUC, ASM, TSM Executive. ಸಂಬಳ 15000 ರಿಂದ 25000 + ಪೆಟ್ರೋಲ್ ಅಲೋಯನ್ಸ್
8123771883, 9538202751

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿಗಾರ್ಡ್ಸ್ 10th/PUC (ಕೊಳ್ಳೇಗಾಲ), 2) ಹೌಸ್‌ಕೀಪಿಂಗ್ – ಹುಡುಗರು/ಮಹಿಳೆಯರು (ಹಿನಕಲ್, ವಿಜಯನಗರ, ಒಂಟಿಕೊಪ್ಪಲ್)
9739166772, 7022267082

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

SITES FOR SALE
- 40x50 N/W Corner
- 35x40 West Face (Vaishnavi Layout)
- 30x40 South Face (Saanvi Layout)

RERA Approved Form No.3
Near Suvarna Layout
Call: 99806 85348

RAI ESTATES (RERA APPROVED, MUDA APPROVED, E-KHATA)
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ.
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysore - 570 001

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ಸಂಪರ್ಕಿಸಿ: 7406375196, 9880548596

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www.imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಮನೆ ಮಾರಾಟಕ್ಕೆ / ಭೋಗ್ಯಕ್ಕೆ ಇದೆ
30x40 ಸೌತ್ ಈಸ್ಟ್, ಗ್ರೌಂಡ್ & 1st and 2nd ಡ್ಯೂಪ್ಲೆಕ್ಸ್ 'D' ಬ್ಲಾಕ್ ಪೊಲೀಸ್ ಬೂತ್ ಹತ್ತಿರ ಜೆ.ಪಿ.ನಗರ, ಮೈಸೂರು. ಇಲವಾಲ KHB KRS ನಿಸರ್ಗ ಲೇಔಟ್‌ನಲ್ಲಿ ಈಸ್ಟ್ ಫೇಸ್ ಸೈಟ್ ಮಾರಾಟಕ್ಕೆ ಇದೆ.
9632023090

ತಕ್ಷಣ ಬೇಕಾಗಿದ್ದಾರೆ
TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು ಸಂಬಳ : 18000/- + 26 days ವಯೋಮಿತಿ : 50 ವರ್ಷದ ಒಳಗೆ, ಊಟ, ತಿಂಡಿ, ರೂಮ್ ಸೌಲಭ್ಯವಿರುತ್ತದೆ.
9620777819, 9620667819

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲಿ ನೀಡಲಾಗುತ್ತದೆ. (ಟೆಲಿಕಾಲರ್ ಬೇಕಾಗಿದ್ದಾರೆ) ಒಂದು ಗ್ರಾಂ. ಚಿನ್ನಕ್ಕೆ 11,500 (24 CT.)
Mob: 9108146123

SITE FOR SALE
40x50 'A' Khatha, Kergalli (4500/- per sq.ft.)
30x40 MUDA (Attached to Udburu Village) (2500/- per sq.ft.). Loan facility available at Bank. Contact:
Mob: 8553050040

GO MYSORE HOLIDAYS
LUXURY TOURIST BUS
Available for Family Trips, Corporate, Wedding, College & all types of Package Tours.
Call : Sudhir Ganapathy
94487 38617 / 90361 54301
90361 54302

GODOWN FOR RENT
1200 Square Feet
Opposite to APMC
Attached to Ring Road, Mysore. Contact:
9886386698
9900334477

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು ವಯೋಮಿತಿ – 18–30, ವಿದ್ಯಾರ್ಹತೆ: ಪಿಯುಸಿ, ಯಾವುದೇ ಡಿಗ್ರಿ, ನರ್ಸಿಂಗ್ ಸೆರೆಕೇರ್ ಮೈಸೂರು, ಹೆಲ್ತ್ ಸೆಂಟರ್, ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
9980623130, 8296366894

ಮನೆ ಬಾಡಿಗೆ / ಭೋಗ್ಯಕ್ಕೆ ಇದೆ
30x40 ನಾರ್ತ್ ಫೇಸ್, 1st Floor, IPS ಶ್ರೀನಿವಾಸನಗರ, ಉತ್ತನಹಳ್ಳಿ ರಿಂಗ್ ರೋಡ್ ಹತ್ತಿರ, ಮೈಸೂರು
7204424105, 8453362104

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಹುಣಸೂರು ಟೌನ್, ಇ.ಡಬ್ಲ್ಯೂ.ಎಸ್, ಕೆ.ಹೆಚ್.ಬಿ. ಕಾಲೋನಿ, ಮನೆ ನಂ. 156 ವಾಸವಾಗಿರುವ ಚಿಕ್ಕೇಗೌಡ ಉರುಫ್ ಅಣ್ಣಾಗೌಡ ರವರ ಮಗನಾದ ಜಿನೇಂದ್ರಗೌಡ ಉರುಫ್ ರಮೇಶ್ ಉರುಫ್ ಸಿ. ... ರಮೇಶ್ ಬಿನ್ ಅಣ್ಣಾಗೌಡ ಎಂದು ನಮೂದಾಗಿರುತ್ತದೆ. ... ನನ್ನ ಮತ್ತು ನನ್ನ ತಂದೆಯವರ ಹೆಸರು ಅಸಲಿ ಹೆಸರಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.
ಸ/- ಜಿನೇಂದ್ರಗೌಡ – ರಮೇಶ್

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ಶೀಘ್ರ ವಿವಾಹಕ್ಕಾಗಿ ಸಂಪರ್ಕಿಸಿ
ಮದುವೆಯಾಗಬೇಕಿಲ್ಲವೇ? ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧು-ವರರಿಗಾಗಿ ಸಂಪರ್ಕಿಸಿ: ಒಂದು ವೇಳೆ ನೀವು ಎರಡನೇ ವಿವಾಹಕ್ಕಾಗಿ ವಿಧವೆ, ವಿಧುರ, ವಿಚ್ಛೇದಿತರು ಜಾತಿಯ ಅಭ್ಯಂತರವಿಲ್ಲದವರು ಕೂಡಾ ವಧು–ವರರನ್ನು ವಿವಾಹವಾಗಲು ಸಂಪರ್ಕಿಸಬಹುದು.
ಸುಮಂಗಲ ಮ್ಯಾರೇಜ್ ಬ್ಯೂರೋ
94833 85177

ಕಳೆದಿದೆ
ಹಲ್ಲಾರೆಹುಂಡಿ ಸುರೇಶ್‌ಕುಮಾರ್, ನಂ. 232, ಮೇಟಗಳ್ಳಿ ಬಡಾವಣೆ, ದೇವರಾಜ ಮೊಹಲ್ಲಾ, ಮೈಸೂರು–570 016, ಇಲ್ಲಿ ವಾಸವಾಗಿದ್ದು, ನನ್ನ ಮನೆಯ ಒರಿಜಿನಲ್ ಅಲಾಟ್‌ಮೆಂಟ್ ಲೆಟರ್ (ದಿನಾಂಕ 22–06–1973), ಸ್ವಾಧೀನ ಪತ್ರ (ದಿನಾಂಕ 10–03–1975), ಒರಿಜಿನಲ್ ಕ್ರಯ ಪತ್ರ (ಒರಿಜಿನಲ್ ಮೈಸೂರು ಅರ್ಬನ್ ಡಿ. ಟ್ರಸ್ಟ್ ದಿನಾಂಕ 12–02–1975) ಗಳು ಕಳೆದುಹೋಗಿರುತ್ತವೆ. ಸಿಕ್ಕಿದವರು ಸಂಪರ್ಕಿಸಿ:
Mob: 7306777873

SITES FOR SALE
1) DTCP approved (only for booking). 30x40, 30x50, KRS Back Water. Booking per 1700 sq.ft. (2) Vijayanagar 4th Stage, attached 20x30, 30x40, 30x50, 3800 sq.ft. MUDA Approved. (3) 20x30 Martikyathanahalli 25 Lakh. House 42 Lakh MUDA Approved.
ALTERATION AND WATER PROOFING WORK. CALL: 8151035074
LISHA PROPERTIES
9164573142, 9035012579

ಶ್ರೀ ಗೌರಿಶಂಕರ ಟ್ರಾವೆಲ್ಸ್
28–11–2025 (7 ದಿನ): ಕಾಶಿ, ಮಥುರೈ, ಕನ್ಯಾಕುಮಾರಿ, ರಾಮೇಶ್ವರಂ, 9 ನವಗ್ರಹ, ಶ್ರೀರಂಗಂ, MM ಹಿಲ್ಸ್ ಇತ್ಯಾದಿ.
12–12–2025 (7 ದಿನ): ದೆಹಲಿ, ಆಗ್ರಾ, ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ. (ವಿಮಾನ, AC ಬಸ್, ಊಟ, ರೂಂ)
Mob: 9448499538

ಸೈಟ್ ಮಾರಾಟಕ್ಕೆ ಇದೆ
ಇಲವಾಲ ಹೋಬಳಿ ಮೈದನಹಳ್ಳಿ(ಮೇಗಳಾಪುರ) ಗ್ರಾಮ, ಮೈಸೂರು ನಲ್ಲಿ 30x40 ವಿಸ್ತೀರ್ಣ ನಿವೇಶನ ಮಾರಾಟಕ್ಕಿದೆ.
Sqft- 2300/- ಮಾತ್ರ, ಸಂಪರ್ಕಿಸಿ
9945652501
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

ಸೈಟ್ ಮಾರಾಟಕ್ಕೆ ಇದೆ
ಟಿ.ನರಸೀಪುರ ಟೌನ್‌ನಲ್ಲಿ 30x40 ಮತ್ತು 30x25 ವಿಸ್ತೀರ್ಣ, ತಾಲ್ಲೂಕ್ ಕಚೇರಿ ಹಿಂಭಾಗ ಮಾರಾಟಕ್ಕಿದೆ. Sqft- 1600/- ಮಾತ್ರ, ಸಂಪರ್ಕಿಸಿ
9972445558
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

SITE FOR SALE
at Prakruthi Layout, T. Narasipura Road, East Facing Site (40X60) Muda Approved Property, Ready to Construct with the clear Documents. Bank Loan Available, E-khatha Ready, just 200 Meter from main road at Prime Location.
77959 51027, 97407 07778

Available for Rent
Bhanavi Complex, 2nd Floor, 3500 sq.ft. and cellar 3000 sq.ft. with lift facility located at Nethaji Circle, Dattagalli, Mysore. Contact:
Mob: 9448800589
BROKERS EXCUSE

HOUSE FOR SALE
at Kesare @ 3rd Stage, G Floor & 1st Floor 2 BHK Each Floor North Facing Site & North Facing Door (20X30) Muda Property with the clear Documents.
9945735779, 9740707778

Teacher Vacancy
Our Growing Academy located at Siddhartha Nagar, Mysuru, requires a part-time teacher to teach classes V to VII (ALL CORE SUBJECTS) Passionate, energetic & committed educators preferred.
WHATSAPP YOUR RESUME TO:
Mob: 8105025999

WANTED
SYSTEM ADMIN.
ACCOUNTANT - TALLY
NICU Nursing Staff, Radiographer (Female), CSSD Technician, Security. Contact:
Mob: 9972982665
Bhanavi Hospital

S.K. CONSTRUCTION
ನಿಮ್ಮ ಕನಸಿನ ಮನೆ ಕಟ್ಟಬೇಕೆ ಚಿಂತೆ ಬೇಡ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ – Plan-3.D. Elevation ಮತ್ತು Loan ಸಹಿತ ಮಾಡಿ ಮನೆ ಕಟ್ಟಿಕೊಡುತ್ತೇವೆ
Ph: 9620528490

SITES FOR SALE
40x60
No. 166, EAST FACE Ramabai Nagar, Mysore (Railway Layout)
Sq. Feet - 4980/-
8970939002

ವಾಣಿಜ್ಯ ಸ್ಥಳ ಬಾಡಿಗೆಗಿದೆ
ವಾಸ್ತುರೀತ್ಯಾ ವಿನ್ಯಾಸಗೊಳಿಸಿದ ಕಟ್ಟಡ ವಿಸ್ತೀರ್ಣ: 1600 ಚದರ ಅಡಿ, 80 ಅಡಿ ಮುಖ್ಯ ರಸ್ತೆ, ಐಶ್ವರ್ಯ ಆಸ್ಪತ್ರೆ ಹತ್ತಿರ ವಿಜಯನಗರ 3ನೇ ಹಂತ
9141789977

ಬೇಕಾಗಿದ್ದಾರೆ
Receptionist ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 20000-25000/-
Ph.7406 369 369

ಹುಡುಗರು ಬೇಕಾಗಿದ್ದಾರೆ
ಬಟ್ಟೆ ಅಂಗಡಿಗೆ ಹುಡುಗರು ಬೇಕಾಗಿದ್ದಾರೆ.
ಸ್ಥಳ : ಒಲಂಪಿಯಾ ಟಾಕೀಸ್ ಬಿಲ್ಡಿಂಗ್
ಬೆಳಗ್ಗೆ 10.30 ರಿಂದ ರಾತ್ರಿ 9 ಗಂಟೆವರೆಗೆ
9972654740

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಮತ್ತು ಬೆಂಗಳೂರಿನಲ್ಲಿ ಕಂಪನಿ/ ಆಫೀಸ್‌ಗಳಿಗೆ 7, 10, ಪಿಯುಸಿ, ಡಿಗ್ರಿ ಪಾಸ್/ಫೇಲ್ ಆದಂತಹ ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 18000–25000+ ಓ.ಟಿ. ಸಂಪರ್ಕಿಸಿ : ಸ್ನೇಹ
9916744622

ವಾಣಿಜ್ಯ ಸ್ಥಳ ಬಾಡಿಗೆಗಿದೆ
ಮೈಸೂರಿನ ಶಾರದಾದೇವಿ ನಗರ ವೃತ್ತದ ಬಳಿಯ ನ್ಯೂ ಕಾಂತ್ ರಾಜ್ ಅರಸ್ ರಸ್ತೆಯಲ್ಲಿ ಉತ್ತಮ ಸ್ಥಿತಿಯಲ್ಲಿರುವ ಕಾರ್ನರ್ ಅಂಗಡಿ (12x34 ಅಡಿ), ನೆಲ ಮಹಡಿ ಮತ್ತು 1000 ಚದರ ಅಡಿ ವಿಸ್ತೀರ್ಣದ ಕಚೇರಿ ಮೊದಲ ಮಹಡಿಯಲ್ಲಿ ಬಾಡಿಗೆಗೆ ಲಭ್ಯವಿದೆ.
98805 81377

SITES FOR SALE
30x50, 40x60
ಯಶ್ ಮೆಗಾಸಿಟಿ
ಮೈಸೂರು–ಹುಣಸೂರು ರಸ್ತೆ
7338445413

Jnanajyothi Vidyalaya
(English medium), Beerihundi.
Maths Teacher: 1 post for Primary School and
Maths Teacher - 1 post of High School. (Good salary) immediately contact:
9845390377, 8197057626

ಬಾಡಿಗೆಗೆ
ಬನ್ನಿಮಂಟಪದ ಮುಖ್ಯರಸ್ತೆಯಲ್ಲಿರುವ ಪ್ರತಿಷ್ಠಿತ ಹೋಟೆಲ್ ಮುಂಭಾಗದಲ್ಲಿರುವ ಮಳಿಗೆಯು ಬಾಡಿಗೆಗೆ ದೊರೆಯುತ್ತದೆ. ಹಾಗೂ ಹೋಟೆಲ್‌ನಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
8904486257, 8884681428

14 ROOMS FOR RENT
Suitable for Hostel & PG in Ramaksrishna Nagar
Contact:
7676265267, 8867150636

150X120 SPACE FOR RENT
with Furnished 5 Rooms in Srirampura
Suitable for Homestay & Resort
7676265267, 8867150636

ನಿವೇಶನ ಮಾರಾಟಕ್ಕಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಮೂಡಾ ನಿವೇಶನ ಮಾರಾಟಕ್ಕಿದೆ ಟೈಟಲ್ ಡೀಡ್, ಸಿ ಆರ್ ಮತ್ತು ಇ ಖಾತೆ ಕೂಡ ರೆಡಿ ಇದೆ(ಈಗಾಗಲೇ 40 ಲಕ್ಷ SBI ನಲ್ಲಿ ಲೋನ್ ಇದೆ) ಬೆಲೆ 65 ಲಕ್ಷ, ಕರೆ ಮಾಡಿ
9902048053

ತೇಜಸ್ವಿನಿ ಟೂರಿಸ್ಟ್
24-10-2025ರಿಂದ 4 ದಿನ ಧರ್ಮಸ್ಥಳ, ... 2x2 ಬಸ್ಸಿನಲ್ಲಿ 30-10-2025 ರಿಂದ 6 ದಿನ ... 10-11-2025 ... ಅಯೋಧ್ಯ ... 28500 ...
9379792644

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಹಾಗೂ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ (ಮಹಿಳೆ ಮಾತ್ರ) ಕುವೆಂಪುನಗರ, ಮೈಸೂರು
Mob: 8618221383

ಬೇಕಾಗಿದ್ದಾರೆ
ಮೈಸೂರಿನ ಬಂಡೀಪಾಳ್ಯ A.P.M.C. ಯಲ್ಲಿರುವ wholesale ಅಂಗಡಿಗೆ ಮೂಟೆ ಹೊರಲು ಒಬ್ಬರು ಬೇಕಾಗಿದ್ದಾರೆ. ಸಂಪರ್ಕಿಸಿ: ಕೆ. ನಂದಿಬಸಪ್ಪ & ಸನ್ಸ್ ಶಾಪ್ ನಂ. 3 'A' Block (near Main Gate) ಬಂಡೀಪಾಳ್ಯ, ಮೈಸೂರು

Running nonveg Hotel with Staff is for Sale
Shyam Studio Circle, K.G. Koppal
Interested
Plz Contact:
9845356677

ವರ ಬೇಕಾಗಿದೆ
ಹುಡುಗಿ ವಯಸ್ಸು 24, BBA S.C.- ಬಲಗೈ ಮೈಸೂರು ಸಿಟಿ
6362299303

CHANGE OF NAME
Syed irfan ulla S/o Late Syed Zaheer, aged about 53 years, Residing at no 171, H.D. Kote Road Near Purna Chethana Public School, Kalwadi Gate, Mysuru-570008 State on oath that my name has been changed from Irfan ulla Khan to Syed Irfan ulla vide affidavit sworn in before Notary Rajeshwari BAL, LLB, Reg No 8759, Dated :13/10/2025
Sd/- Syed Irfan ulla

House for the aged
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರೀಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ.
Call: 9607172737

ಬೇಕಾಗಿದ್ದಾರೆ
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನ ಇರುವವರು (Lady) ಬೇಕಾಗಿದ್ದಾರೆ ಮತ್ತು Ape Goods Auto Driver ಬೇಕಾಗಿದ್ದಾರೆ.
Mob: 9686891690

MUDA APPROVED SITES FOR SALE
Ananda Sagara, Nityananda Sagara, Kuberananda Sagara
30x40, 60x40
All facing available.
1st Stage. Contact:
JK 8951144240

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಗಂಡಸರು / ಹೆಂಗಸರು ಕೌಂಟರ್, ದೋಸೆ, ಸಸ್ಯಾಹಾರಿ ಭಟ್ರು, ಪಾರ್ಸಲ್ ಕೌಂಟರ್
9986998606, 9606238790

SITE FOR SALE
30x40 at Siddartha Layout, Dattagalli, Ramakrishnanagar.
40x60 at Dattagalli, Saraswathipuram.
50x80 corner site at Nivedita Nagar, Dattagalli.
Call: 7353430309

Properties for Sale
(30x40) (40x60) @ Jayanagar, Kuvempunagar, Saraswathipuram.
Mob: 93421-25252

ಬೇಕಾಗಿದ್ದಾರೆ
ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿ ಇರುವ ಒಂದು ಲೇಔಟ್‌ಗೆ ಸೆಕ್ಯೂರಿಟಿ ಗಾರ್ಡು ಬೇಕಾಗಿದ್ದಾರೆ. ಸಂಬಳ: 16,500 + ಇಎಸ್ಐ + ಪಿಎಫ್.
9591823625, 9986501873

ಬೇಕಾಗಿದ್ದಾರೆ
ಕೊಡಗು ಜಿಲ್ಲೆಯ ಹೋಟೆಲ್‌ವೊಂದಕ್ಕೆ ಸಪ್ಲೈಯರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
9986669892, 6362610799

HOUSES & OFFICE SPACE FOR RENT
@ Saraswathipuram, Kuvempunagar & surroundings.
S.S. PROPERTY SERVICES (Opp. Kuvempu School, S.S. Puram)
Mob: 93421-25252

Immediate Requirement
1) Personal Assistant. Qualification: Any Degree with good communication in English and hands on MS-Office. Minimum 2 years of experience.
2) Data Entry Operator with MS-office Qualification: Any Degree with minimum 2 years of experience. Contact
4148888 / 9164608888

WANTED
Sales Executive for FMCG Distributor, with two wheeler.
Mob: 98455 44545

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಖರ್ಜೂರ, ದ್ರಾಕ್ಷಿ, ಡ್ರೈಫ್ರೂಟ್ ಗಿಫ್ಟ್ ಬಾಕ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ: ರಾಜಗುರು ಡ್ರೈಫ್ರೂಟ್ಸ್ ನಾರಾಯಣಶಾಸ್ತ್ರಿ ರಸ್ತೆ, ಮೈಸೂರು
9845460211, 7022293342

PRAKRUTHI PROPERTIES — FOR SALE
1. 20x30 Old Houses @ Kuvempunagar, RK Nagar
2. 20x30 MUDA Approved Site @ 22L Near Rainbow School Bogadi
3. 27x60 Commercial Site @ Jayanagar.
4.30x40 Sites Near RT Nagar BSNL Layout @ Just 22 Lakhs
Apartments @ Ramakrishna Nagar
Commercial Properties Available
95386 90359, 90359 90359



Solar Water Heater SALES & SERVICE BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

SBIT TRAVELS
Group Tour
DUBAI (5N6D)
27TH OCTOBER 2025
Air tickets | Entry tickets | Meals Hotel | Visa | All tours and transfers
9343524127
(Saraswathipuram, Mysuru)

ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳ ಕಂಪನಿಯಲ್ಲಿ ಕೆಲಸ ಮಾಡಲು ಡ್ರೈವರುಗಳು ಸೆಕ್ಯೂರಿಟಿ ಗಾರ್ಡ್‌ಗಳು ಟೈಲರ್, ಹೆಲ್ಪರ್ ಹಾಗೂ ಡ್ರೈವರ್ COM ಮಾರ್ಕೆಟಿಂಗ್, ಪೆಲ್ಲರ್ ಮತ್ತು ಅಕೌಂಟೆಂಟ್‌ಗಳು ಬೇಕಾಗಿದ್ದಾರೆ
8105249880
7795285485

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಬನ್ನಿಮಂಟಪದಲ್ಲಿ ಹಾಸ್ಟೆಲ್‌ನಲ್ಲಿ ಹೌಸ್ ಕೀಪಿಂಗ್ ಹಾಗೂ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಗಂಡಸರು ಹಾಗೂ ಹೆಂಗಸರು ಬೇಕಾಗಿದ್ದಾರೆ. ವಿದ್ಯಾಭ್ಯಾಸ – ಅವಶ್ಯಕತೆ ಇಲ್ಲ ಸಂಬಳ – 13000
9606075588

ಬೇಕಾಗಿದ್ದಾರೆ
ವಿಜಯನಗರ ಸ್ಪೋರ್ಟ್ಸ್ ಪ್ಲೆಕ್ಸ್ 2ನೇ ಹಂತ ಮೈಸೂರು ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ ಸಂಬಳ: 7000. ಸಂಜೆ 6ರಿಂದ 11ರವರೆಗೆ, ಪ್ಲೇಟ್ ವಾಶ್ ಮಾಡಲು ಕ್ಲೀನರ್ ಬೇಕಾಗಿದ್ದಾರೆ
9482377261

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಫುಡ್ ಪ್ರಾಡಕ್ಟ್ ಕಂಪನಿಗೆ 18ರಿಂದ 45 ವರ್ಷದ ಒಳಗಿನ ಪುರುಷರು ITI, FITTER, ELECTRICAL, MECHANICAL ಮತ್ತು PRODUCTION ಗೆ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ ಚಾಮುಂಡೇಶ್ವರಿ ಎಂಟರ್‌ಪ್ರೈಸಸ್ ಲೋಕೇಶ್.ಎಸ್
8722544236

ಬೇಕಾಗಿದ್ದಾರೆ
ಬ್ರಾಹ್ಮಣ ಮನೆಯಲ್ಲಿ ಅಡುಗೆ ಕೆಲಸಕ್ಕೆ ಮತ್ತು 4 ವರ್ಷದ ಮಗು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಊಟ, ವಸತಿ ಇರುತ್ತದೆ.
9986688005
9886886491

ಮೈಸೂರು ಮಿತ್ರ (46)
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಕೆ.ಆರ್.ನಗರ ಕ್ಷೇತ್ರಕ್ಕೆ ನಿಮ್ಮ ಕೊಡುಗೆ ಏನು?

● ಶಾಸಕ ರವಿಶಂಕರ್‌ಗೆ ಮಾಜಿ ಸಚಿವ ಸಾ.ರಾ.ಮಹೇಶ್ ಪ್ರಶ್ನೆ ● ಹೊಸೂರಲ್ಲಿ ಆಟೋ ನಿಲ್ದಾಣ ಉದ್ಘಾಟನೆ; ಮುಂದೆ ಮತದಾರರಿಂದ ನಿಮಗೆ ತಕ್ಕ ಪಾಠ ಕಾದಿದೆ



ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿದರು.

ಚುಂಚನಕಟ್ಟೆ, ಅ.15– ಕ್ಷೇತ್ರದ ಅಭಿವೃದ್ಧಿಗೆ ಶಾಸಕ ಡಿ.ರವಿಶಂಕರ್ ಕೊಡುಗೆ ಏನು ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಪ್ರಶ್ನಿಸಿದರು.

ಸಾಲಿಗ್ರಾಮ ತಾಲೂಕಿನ ಹೊಸೂರು ಗ್ರಾಮದಲ್ಲಿ ಜಿಲ್ಲಾ ಯುವ ಜೆಡಿಎಸ್ ಮುಖಂಡ ಹೆಚ್.ಕೆ.ಮಧುಚಂದ್ರ ನಿರ್ಮಿಸಿರುವ ಆಟೋ ನಿಲ್ದಾಣ ಉದ್ಘಾಟಿಸಿ ಮಾತನಾಡಿದ ಅವರು, ಕ್ಷೇತ್ರಾದ್ಯಂತ ಸರ್ಕಾರಿ ಜಾಗಗಳು ಒತ್ತುವರಿಯಾಗಿದ್ದರೂ ಅದನ್ನು ತೆರವುಗೊಳಿಸಲು ಮುಂದಾಗದ ಶಾಸಕರು ಹೊಸೂರು ಗ್ರಾಮದಲ್ಲಿ ಆಟೋ ಚಾಲಕರ ಹಿತಕ್ಕಾಗಿ ನಿರ್ಮಿಸಿರುವ ನಿಲ್ದಾಣವನ್ನು ಅಧಿಕಾರಿಗಳ ಮೇಲೆ ಒತ್ತಡ ಹೇರಿ ತೆರವುಗೊಳಿಸಲು ಮುಂದಾಗಿರುವುದು ಹೇಡಿತನದ ರಾಜಕಾರಣ ಎಂದು ಜರಿದರು.

ನೀವು ಶಾಸಕರಾದ ನಂತರ ಚೆನ್ನಾಗಿ ಮೇಯುತ್ತಿದ್ದು, ಮುಂದೆಯೂ ಅದನ್ನೆ ಮುಂದುವರೆಸಿ ಎಂದು ವಾಗ್ದಾಳಿ ನಡೆಸಿದ ಮಾಜಿ ಸಚಿವರು, ನಿಮ್ಮ ನಡತೆ ಮತ್ತು ವರ್ತನೆಯನ್ನು ಮತದಾರ ಪ್ರಭುಗಳು ಗಮನಿಸುತ್ತಿದ್ದು, ಸೂಕ್ತ ಕಾಲದಲ್ಲಿ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಸಿದರು.

ಅವರಿವರ ಕಾಲು ಹಿಡಿದು ಅನುಕಂಪದಿಂದ ಶಾಸಕರಾಗಿರುವ ನಿಮಗೆ ನನ್ನನ್ನು ಎದುರಿಸಲು ಸಾಧ್ಯವಿಲ್ಲ ಎಂದು ಕುಟುಕಿದ ಸಾ.ರಾ.ಮಹೇಶ್ ನಿಮಗೆ ತಾಕತ್ತಿದ್ದರೆ ಬುಧವಾರ ಹೊಸೂರು ಗ್ರಾಮದಲ್ಲಿ ನಡೆಯಬೇಕಿದ್ದ ಉದ್ಘಾಟನಾ ಸಮಾರಂಭವನ್ನು ತಡೆಯಬೇಕಿತ್ತು. ಆಗ ನಾನು ಏನು ಎಂಬುದನ್ನು ತೋರಿಸುತ್ತಿದ್ದೆ ಎಂದು ಅಬ್ಬರಿಸಿದರು.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ದೊಡ್ಡಸ್ವಾಮೇಗೌಡ ಈ ಹಿಂದೆ ಬೆಮಲ್ ನೌಕರರ ಸಂಘದ ಅಧ್ಯಕ್ಷರಾಗಿದ್ದಾಗ ನಡೆಸಿದ ಅಕ್ರಮಗಳು, ಕರ್ಮಕಾಂಡ ಹಾಗೂ ಹಗರಣಗಳ ಎಲ್ಲಾ ದಾಖಲೆಗಳು ನನ್ನ ಬಳಿ ಇದ್ದು, ಸಮಯ ಬಂದಾಗ ಅವುಗಳನ್ನು ಬಹಿರಂಗ ಮಾಡುತ್ತೇನೆ ಎಂದ ಅವರು ನಿಮ್ಮ ಜೀವನದ ಕಥೆ ತಿಳಿದಿದೆ ಎಂದು ಲೇವಡಿ ಮಾಡಿದರು.

ಭೇರ್ಯದಲ್ಲಿ ಆಟೋ ನಿಲ್ದಾಣ ಮಾಡಿರುವುದು ಯಾವ ಜಾಗದಲ್ಲಿ ಎಂದು ಪ್ರಶ್ನಿಸಿದ ಸಾ.ರಾ.ಮಹೇಶ್ ಸರ್ಕಾರಿ ಜಾಗದಲ್ಲಿ ನಿಮ್ಮ ಸಂಬಂಧಿಕರು ಹಾಲಿನ ಕೇಂದ್ರ ನಡೆಸಲು ಜಾಗ ಕೊಡುವುದರ ಜೊತೆಗೆ ಮಾಡಿರುವ ಬ್ರಹ್ಮಾಂಡ ಭ್ರಷ್ಟಾಚಾರವು ತಿಳಿದಿದ್ದು ನನ್ನ ಮುಂದೆ ನಿಮ್ಮ ಆಟ ನಡೆಯುವುದಿಲ್ಲ ಎಂದರು.

ಈ ವೇಳೆ ಜಿಲ್ಲಾ ಜೆಡಿಎಸ್ ಮುಖಂಡ ಮಧುಚಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ಹೆಚ್.ಎನ್.ರಾಜೇಗೌಡ, ಸಾಲಿಗ್ರಾಮ ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಮಧು, ಹಳಿಯೂರು ಗ್ರಾಪಂ ಮಾಜಿ ಅಧ್ಯಕ್ಷರಾದ ಮಹೇಶ್, ದಿನೇಶ್, ಹೊಸೂರು ಪಿಎಸಿಎಸ್ ಅಧ್ಯಕ್ಷ ಜಗದೀಶ್, ಮಾಜಿ ಅಧ್ಯಕ್ಷ ಹೆಚ್.ಆರ್.ಕೃಷ್ಣಮೂರ್ತಿ, ತಾಲೂಕು ಆಶ್ರಯ ಸಮಿತಿ ಮಾಜಿ ಸದಸ್ಯ ಬಿ.ರಮೇಶ್, ವಿನಾಯಕ ಆಟೋ ಚಾಲಕರ ಸಂಘದ ಅಧ್ಯಕ್ಷ ಪುರಿ, ಮಂಜುನಾಥ್, ಸದಸ್ಯರಾದ ಕರಿಯ ಸಂತೋಷ್, ರಾಘು, ರವಿರಂಗ, ಲೋಕೇಶ್, ಪುನೀತ್, ಶ್ರೀನಿವಾಸ್, ದೇವರಾಜು, ರೇವಣ್ಣ, ಮಧು, ಮುಖಂಡರಾದ ಎಲ್‌ಐಸಿ ರಮೇಶ್, ಯಶವಂತ್ ಸೇರಿದಂತೆ ಇತರರಿದ್ದರು.

ಮುಂದೆ ಸಾ.ರಾ.ಮಹೇಶ್ ಗೆಲುವು ಖಚಿತ

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಭವಿಷ್ಯ

ಚುಂಚನಕಟ್ಟೆ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಅತ್ಯಧಿಕ ಮತಗಳಿಂದ ಜಯ ಗಳಿಸುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಆಟೋ ನಿಲ್ದಾಣ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕಳೆದ 22 ವರ್ಷಗಳಿಂದ ಜನಸೇವೆಯನ್ನು ತಮ್ಮ ಉಸಿರಾಗಿಸಿಕೊಂಡಿರುವ ನಮ್ಮೆಲ್ಲರ ನಾಯಕ ಸಾ.ರಾ.ಮಹೇಶ್ ರಾಜ್ಯಕ್ಕೆ ಮಾದರಿ ಎಂದರು.

ಚುನಾಯಿತ ಜನಪ್ರತಿನಿಧಿಗಳು ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿ ಮಾಡುವ ಮೂಲಕ ತೋರಿಸಬೇಕು. ಆದರೆ ಜಿಲ್ಲಾ ಜೆಡಿಎಸ್ ಮುಖಂಡ ಹೆಚ್.ಕೆ.ಮಧುಚಂದ್ರ ತಮ್ಮ ಸ್ವಂತ ಹಣದಲ್ಲಿ ಆಟೋ ನಿಲ್ದಾಣ ನಿರ್ಮಿಸಿ ಅದನ್ನು ಲೋಕಾರ್ಪಣೆ ಮಾಡಲು ಕಾರ್ಯಕ್ರಮ ಮಾಡಿದರೆ ರಾಜಕೀಯ ಮಾಡಿ ತಡೆಯಲು ಹೊರಟಿರುವುದು ಲಜ್ಜೆಗೇಡಿತನದ ರಾಜಕಾರಣ ಎಂದು ಶಾಸಕ ಡಿ.ರವಿಶಂಕರ್ ವಿರುದ್ಧ ಹರಿಹಾಯ್ದರು.

ಸಾ.ರಾ.ಮಹೇಶ್ ಅವರನ್ನು ಕಳೆದ ಚುನಾವಣೆಯಲ್ಲಿ ಸೋಲಿಸಿರುವ ಮತದಾರರು ಜೆಡಿಎಸ್ ಪಕ್ಷದವರಿಗಿಂತ ಹೆಚ್ಚು ವ್ಯಥೆ ಪಡುತ್ತಿದ್ದು, ಇದು ಅವರ ಜನಪ್ರಿಯತೆ ಮತ್ತು ಬಡವರ ಪರವಾದ ಕಾಳಜಿ ಎತ್ತಿ ತೋರುತ್ತದೆ. ಭವಿಷ್ಯದಲ್ಲಿ ಇವರು ರಾಜ್ಯ ಮಟ್ಟದ ನಾಯಕರಾಗಿ ಹೊರ ಹೊಮ್ಮಲಿದ್ದಾರೆ ಎಂದು ಭವಿಷ್ಯ ನುಡಿದರು.

ಹೊಸಕೋಟೆ ಗ್ರಾಪಂಗೆ ಆಂಧ್ರ ಪ್ರದೇಶ ಅಧಿಕಾರಿಗಳು ಭೇಟಿ



ಹೊಸಕೋಟೆ ಗ್ರಾಪಂಗೆ ಆಂಧ್ರ ಪ್ರದೇಶದ ಅಧಿಕಾರಿಗಳು ಭೇಟಿ ನೀಡಿದರು.

ತಿ.ನರಸೀಪುರ, ಅ.15– ತಾಲೂಕಿನ ಹೊಸಕೋಟೆ (ಹಳೆ ಕೆಂಪಯ್ಯನಹುಂಡಿ) ಗ್ರಾಪಂಗೆ ಆಂಧ್ರ ಪ್ರದೇಶದ 40 ಅಧಿಕಾರಿಗಳ ತಂಡ ಭೇಟಿ ನೀಡಿ, ಗ್ರಾಮೀಣ ಭಾಗದಲ್ಲಿ ಪಂಚಾಯತ್ ರಾಜ್ ಮತ್ತು ಮಹಿಳಾ ಸ್ನೇಹಿ ಯೋಜನೆ ಅನುಷ್ಠಾನ ಕುರಿತು ಮಾಹಿತಿ ಪಡೆದರು.

ಮೈಸೂರು ಎಸ್‌ಐಆರ್‌ಡಿ ಕೇಂದ್ರಕ್ಕೆ 5 ದಿನಗಳ ಅಧ್ಯಯನ ಪ್ರವಾಸ ಕೈಗೊಂಡಿದ್ದು, ಅಧಿಕಾರಿಗಳು ಕ್ಷೇತ್ರ ಭೇಟಿ ಸಂಬಂಧ ಹೊಸಕೋಟೆ ಗ್ರಾಪಂಗೆ ಆಗಮಿಸಿದ್ದರು. ಮಹಿಳಾ ಸ್ನೇಹಿ ಗ್ರಾಪಂ ಮಾಡುವ ನಿಟ್ಟಿನಲ್ಲಿ ಕೈಗೊಂಡ ವಿನೂತನ ಕಾರ್ಯಕ್ರಮಗಳು, ಗ್ರಾಪಂ ವ್ಯಾಪ್ತಿಯಲ್ಲಿ ದುಡಿಯುವ ಎಲ್ಲಾ ಮಹಿಳೆಯರು, ಮಕ್ಕಳಿಗಾಗಿ ಕೂಸಿನ ಮನೆ ತೆರೆದಿದ್ದು, ಅಲ್ಲಿ 74 ಮಕ್ಕಳಿರುವುದಕ್ಕೆ ಅಧಿಕಾರಿಗಳು ಶ್ಲಾಘಿಸಿದರು.

ಗ್ರಾಪಂ ವ್ಯಾಪ್ತಿಯ ಎಲ್ಲಾ ಮಹಿಳೆಯರಿಗೆ ಋತುಚಕ್ರದ ದಿನಗಳಲ್ಲಿ ಮರುಬಳಕೆ ಮಾಡುವ ಸ್ಯಾನಿಟರಿ ಪ್ಯಾಡ್‌ಗಳ ವಿತರಣೆ, ಮಹಿಳಾ ಸಂಘದ ಮೂಲಕ ಘನತ್ಯಾಜ್ಯ ನಿರ್ವಹಣೆ, ಸಂಸ್ಕರಣೆ ಹಾಗೂ ನರೇಗಾ, ಗ್ರಂಥಾಲಯ, ಕೂಸಿನ ಮನೆ, ಗ್ರಾಪಂ ಅರಿವು ಕೇಂದ್ರ, ಸುಸಜ್ಜಿತವಾದ ಡಿಜಿಟಲ್ ಲೈಬ್ರರಿ ಮಾಹಿತಿ ಕೇಂದ್ರದ ಬಗ್ಗೆ ಮಾಹಿತಿ ಪಡೆದುಕೊಂಡರು. ಅಲ್ಲದೇ ಗ್ರಾಪಂ ಕಟ್ಟಡ ಶುಚಿತ್ವ, ವಿವಿಧ ಗಿಡ ಹಾಗೂ ಹಸಿರಿನಿಂದ ನಳನಳಿಸುತ್ತಿರುವ ಒಳಾಂಗಣ, ಹೊರಾಂಗಣ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಎಸ್‌ಐಆರ್‌ಡಿ ತರಬೇತಿ ಕೇಂದ್ರದ ಪ್ರಕಾಶ್, ಅಬೂಬಕರ್, ಗ್ರಾಪಂ ಅಧ್ಯಕ್ಷೆ ಶೋಭ, ಪಿಡಿಓ ಪೂರ್ಣಿಮಾ ವಿ.ಎನ್., ಕಾರ್ಯದರ್ಶಿ ಕೆ.ಸಿ.ಪುಟ್ಟರಾಜು, ಬಿಲ್ ಕಲೆಕ್ಟರ್ ಪ್ರದೀಪ್, ಗ್ರಾಪಂ ಸಿಬ್ಬಂದಿ, ಸಂಜೀವಿನಿ ಸ್ವಸಹಾಯ ಮಹಿಳಾ ಒಕ್ಕೂಟ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಅವಾಚ್ಯ ಶಬ್ದಗಳಿಂದ ನಿಂದನೆ ಆರೋಪ

ಮಾದಿಗ ಒಳ ಮೀಸಲಾತಿ ಹೋರಾಟಗಾರರಿಂದ ಪ್ರತಿಭಟನೆ



ಮಾದಿಗ ಒಳ ಮೀಸಲಾತಿ ಹೋರಾಟಗಾರರು ಪ್ರತಿಭಟನೆ ನಡೆಸಿದರು.

ನಂಜನಗೂಡು, ಅ.15– ನಗರದ ಅಂಬೇಡ್ಕರ್ ಭವನದ ಎದುರು ಒಳ ಮೀಸಲಾತಿ ಹೋರಾಟಗಾರರನ್ನು ಪೊಲೀಸರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಿ ಮಾದಿಗ ಒಳ ಮೀಸಲಾತಿ ಹೋರಾಟಗಾರರು ಸಮಿತಿ ಅಧ್ಯಕ್ಷ ಭಾಸ್ಕರ್ ಪ್ರಸಾದ್ ನೇತೃತ್ವದಲ್ಲಿ ಚಪ್ಪಲಿ ಯಿಂದ ಹೊಡೆದುಕೊಂಡು ಪ್ರತಿಭಟನೆ ನಡೆಸಿದರು.

ತಿ.ನರಸೀಪುರದ ಗೋಪಾಲಪುರದಲ್ಲಿ ಬಿ.ರಾಚಯ್ಯನವರ ಪ್ರತಿಮೆ ಬಳಿ ಅನುಮತಿ ಇಲ್ಲದೇ ಒಳ ಮೀಸಲಾತಿ ಜಾರಿಗೊಳಿಸುವಂತೆ ಪ್ರತಿಭಟಿಸುತ್ತಿದ್ದ ಹೋರಾಟಗಾರರನ್ನು ಮುಂಜಾಗ್ರತಾ ಕ್ರಮವಾಗಿ ಪೊಲೀಸರು ವಶಕ್ಕೆ ಪಡೆದು ನಂಜನಗೂಡಿನ ಅಂಬೇಡ್ಕರ್ ಭವನದಲ್ಲಿ ಇರಿಸಿದ್ದರು. ಈ ವೇಳೆ ಪೊಲೀಸರೊಬ್ಬರು ಹೋರಾಟಗಾರರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಹೋರಾಟಗಾರರು ಆರೋಪಿಸಿದರು.

ಮಾದಿಗ ಒಳ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಭಾಸ್ಕರ್ ಪ್ರಸಾದ್ ಮಾತನಾಡಿ ನ್ಯಾಯ ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿ ಹೋರಾಟ ನಡೆಸುತ್ತಿದ್ದ ಸಮಿತಿ ಸದಸ್ಯರನ್ನು ಬಂಧಿಸಿದ ಪೊಲೀಸರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಮಾದಿಗ ಒಳಮೀಸಲಾತಿ ಹೋರಾಟವನ್ನು ಹತ್ತಿಕ್ಕುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅವರ ಭಾವಚಿತ್ರ ಹಾಕಿಕೊಂಡು ಚಪ್ಪಲಿಯಿಂದ ಹೊಡೆದುಕೊಂಡು ಪ್ರತಿಭಟನೆ ನಡೆಸಿದ್ದೇವೆ. ಸರ್ಕಾರ ಪೊಲೀಸರನ್ನು ಬಳಸಿ ಹೋರಾಟಗಾರರನ್ನು ಬೆದರಿಸುತ್ತಿದೆ. ಹೋರಾಟಗಾರರ ಮೇಲೆ ಅವಾಚ್ಯ ಶಬ್ದ ಬಳಸಿದ ಪೊಲೀಸ್ ಅಧಿಕಾರಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿ ಪಟ್ಟು ಹಿಡಿದು ಸಿಪಿಐ ಆನಂದ್ ಅವರೊಂದಿಗೆ ಮಾತಿನ ಚಕಮಕಿ ನಡೆಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಸುರೇಶ್, ನಾಗರಾಜು, ರಾಹುಲ್, ಮಹದೇವಯ್ಯ, ಮಂಜುನಾಥ್, ಪುಟ್ಟಣ್ಣ, ಮಹದೇವಸ್ವಾಮಿ, ಹನುಮೇಶ್, ವಿನೋದ್, ಅವಿನಾಶ್ ಉಪಸ್ಥಿತರಿದ್ದರು.

ದ್ವಿಚಕ್ರ ವಾಹನ ಪಾರ್ಕಿಂಗ್ ಶೆಲ್ಟರ್ ಉದ್ಘಾಟನೆ



ದ್ವಿಚಕ್ರ ವಾಹನ ಪಾರ್ಕಿಂಗ್ ಶೆಲ್ಟರ್ ಅನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು, ಅ.15– ಮೈಸೂರು ತಾಲೂಕಿನ ಜಯಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು 1.25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ದ್ವಿಚಕ್ರ ವಾಹನ ಪಾರ್ಕಿಂಗ್ ಶೆಲ್ಟರ್ ಅನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಶಾಸಕರು, ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು ಸಾಮಾಜಿಕ ಕಳಕಳಿಯೊಂದಿಗೆ ಆರೋಗ್ಯ, ಶಿಕ್ಷಣ, ಸಂಘ ಸಂಸ್ಥೆ, ದೇವಾಲಯಗಳ ಜೀರ್ಣೋದ್ಧಾರಕ್ಕೆ ವೈಯಕ್ತಿಕವಾಗಿ ತಮ್ಮ ಕೈಲಾದ ಧನಸಹಾಯ ಮಾಡಿದ್ದಾರೆ. ಅವರ ಸೇವೆ ಇತರರಿಗೆ ಆದರ್ಶವಾಗಿದ್ದು, ತಾವುಗಳು ತಮ್ಮ ಕೈಲಾದ ಸಮಾಜ ಸೇವೆ ಮಾಡಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಜಯಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಪ್ರತ್ಯೇಕ ಆಂಬುಲೆನ್ಸ್ ಮತ್ತು ಜನ ರೇಟರ್ ಅನ್ನು ಶಾಸಕರ ಅನುದಾನದಿಂದ ನೀಡುತ್ತೇನೆ. ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಆರೋಗ್ಯ ಸಿಬ್ಬಂದಿಗಳನ್ನು ನಿಯೋಜಿಸಲು ಕ್ರಮ ವಹಿಸುತ್ತೇನೆ ಎಂದರು.

ಇದೇ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್ ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿದರು. ಜಯಪುರ ಸಮುದಾಯ ಆರೋಗ್ಯ ಕೇಂದ್ರದಿಂದ ಶ್ರೀಕಾಂತ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ತಾಲೂಕು ಆರೋಗ್ಯಾಧಿಕಾರಿ ಪುಟ್ಟತಾಯಮ್ಮ, ಜಯಪುರ ವೈದ್ಯಾಧಿಕಾರಿ ಡಾ.ಗಾಯತ್ರಿ, ಡಾ.ಮಹದೇವಪ್ರಸಾದ್, ಎಸ್‌ಐ ಕಾಳೇಗೌಡ, ಜಯಪುರ ಗ್ರಾಪಂ ಅಧ್ಯಕ್ಷ ಮಹದೇವಯ್ಯ, ಉಪಾಧ್ಯಕ್ಷೆ ಮಂಗಳಮ್ಮ, ಪಿಡಿಓ ಬಸವಣ್ಣ, ಸದಸ್ಯರಾದ ಮರಿಸಿದ್ದೇಗೌಡ, ಎಂ.ನಾಗರಾಜು, ಭೈರೇಶ್, ರೇಣುಕಾ, ಮುಖಂಡರಾದ ಜವರನಾಯಕ, ಅಬ್ದುಲ್ ಮುತಾ ಲೀಫ್, ಸ್ವಾಮಿ, ಬಸವಣ್ಣ ಶಿವಣ್ಣ, ಮಲ್ಲಪ್ಪ ಎಸ್.ಸಂತೋಷ್ ಕುಮಾರ್, ಜಯಪುರ ಡೇರಿ ಕಾರ್ಯದರ್ಶಿ ಪಿ.ಬಸವರಾಜು, ಮಂಜುನಾಥ್, ಶಿವರಾಜು, ಸಣ್ಣಸ್ವಾಮಿ, ವೆಂಕಟೇಶ್ ನಾಯಕ್, ಭೈರೇಗೌಡ, ಸತೀಶ್ ಹಾಗೂ ಆಶಾ ಕಾರ್ಯ ಕರ್ತರು ಮತ್ತು ಜಯಪುರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಕೀಯ ಸಿಬ್ಬಂದಿ ಉಪಸ್ಥಿತರಿದ್ದರು.

ಸರಗೂರಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ



ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ನಡೆಯಿತು.

ಸರಗೂರು, ಅ.15– ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ ಆವರಣದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ನಡೆಯಿತು.


ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಚಿತ್ತ ಸಂಜೀವಿನಿ ಚಾರಿಟಬಲ್ ಟ್ರಸ್ಟ್, ಲಯನ್ಸ್ ಕ್ಲಬ್, ಹೆಚ್.ಡಿ.ಕೋಟೆ ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯೆ ಹಾಗೂ ವಕೀಲರಾದ ಸರಸ್ವತಿ, ದೈಹಿಕ ಆರೋಗ್ಯ ಎಷ್ಟು ಮುಖ್ಯವೋ ಅಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ. ಪ್ರತಿಯೊಬ್ಬರೂ ಮಾನಸಿಕ ವ್ಯಕ್ತಿ ಜೊತೆ ಪ್ರೀತಿಯಿಂದ ನಡೆದುಕೊಳ್ಳಬೇಕು. ಮಾನಸಿಕ ರೋಗ ಬರೀ ಮಾತ್ರೆಯಿಂದ ಗುಣಮುಖವಾಗುವುದಿಲ್ಲ. ಮಾತ್ರೆ ಜೊತೆಗೆ ಕುಟುಂಬ ವರ್ಗ ಮತ್ತು ಸುತ್ತಮುತ್ತಲಿನ ಜನರು ಪ್ರೀತಿ ವಿಶ್ವಾಸ ಕೊಟ್ಟಾಗ ಮಾತ್ರ ಸಮಸ್ಯೆ ಪರಿಹಾರವಾಗುತ್ತದೆ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯೊಂದಿಗೆ ತನ್ನ ಭಾವನೆಗಳನ್ನು ಹಂಚಿಕೊಳ್ಳಲು ಹೋದಾಗ ಅದನ್ನು ನಾವು ಕೇಳಿಸಿಕೊಳ್ಳಬೇಕು. ಆಗ ಅವರ ಕಾಯಿಲೆ ಗುಣಮುಖವಾಗಲು ಸಹಾಯವಾಗುತ್ತದೆ ಎಂದರು.

ಒಬ್ಬ ವ್ಯಕ್ತಿ ಮಾನಸಿಕ ಅಸ್ವಸ್ಥನಾದರೆ ಆತನ ಹಕ್ಕುಗಳು ಹೋಗುವುದಿಲ್ಲ. ಭಾರತ ಸಂವಿಧಾನದಲ್ಲಿರುವ ಎಲ್ಲಾ ಮೂಲಭೂತ ಹಕ್ಕುಗಳು ಇರುತ್ತವೆ. ಅಲ್ಲದೇ ಪಿತ್ರಾರ್ಜಿತ ಆಸ್ತಿಯಲ್ಲಿಯೂ ಆಸ್ತಿ ಹಕ್ಕು ಇರುತ್ತದೆ ಎಂದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ವಿವೇಕಾನಂದ ಸ್ಮಾರಕ ಆಸ್ಪತ್ರೆ ತುರ್ತು ಚಿಕಿತ್ಸಾ ತಜ್ಞ ಡಾ.ಅರ್ಜುನ್ ಎಸ್.ಪ್ರಕಾಶ್, ಮಾನಸಿಕ ಮನೋತಜ್ಞ ಡಾ.ಸ್ವಾಮಿನಾಥ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ಲಯನ್ಸ್ ಕ್ಲಬ್ ಅಧ್ಯಕ್ಷ ಭಾಸ್ಕರ್, ಎಪಿಡಿ ಸಂಸ್ಥೆಯ ಸಾಹಿಲ್, ಕುಮಾರ್, ರಾಣಿ, ನಿಮ್ಹಾನ್ಸ್ ಆಸ್ಪತ್ರೆ ಮನೋ ವೈದ್ಯರಾದ ಡಾ.ಜೀವನ, ಡಾ.ಅಮನ್, ವಿವೇಕಾನಂದ ಸ್ಮಾರಕ ಆಸ್ಪತ್ರೆ ಆಪ್ತ ಸಮಾಲೋಚಕ ವಿ. ನವೀನ ಕುಮಾರ್, ಕೃಷ್ಣಕುಮಾರ್, ಹಸೀನಾ, ಸುರೇಂದ್ರ, ವಸಂತಬಾಯ್, ಪುನರ್ವಸತಿ ಸಂಪನ್ಮೂಲ ಸಂಯೋಜಕರಾದ ಸದಾಶಿವ, ಮಹೇಶ್ ಹಾಗೂ ಹಿರಿಯ ಕಾರ್ಯಕ್ರಮ ವ್ಯವಸ್ಥಾಪಕ ಎಂ.ಪಿ.ರಮೇಶ ಉಪಸ್ಥಿತರಿದ್ದರು.

ವೀರದೇವನಪುರ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಅಧ್ಯಕ್ಷರಾಗಿ ವಿಜಯ್ ಕುಮಾರ್, ಉಪಾಧ್ಯಕ್ಷರಾಗಿ ಕುಳ್ಳಯ್ಯ ಆಯ್ಕೆಯಾದರು.


ನಂಜನಗೂಡು, ಅ.15– ತಾಲೂಕಿನ ವೀರದೇವನಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಸದಸ್ಯರಾದ ವಿಜಯ್ ಕುಮಾರ್, ಉಪಾಧ್ಯಕ್ಷರಾಗಿ ಕುಳ್ಳಯ್ಯ ಆಯ್ಕೆಯಾದರು.

ಒಟ್ಟು 12 ಸದಸ್ಯ ಬಲದ ಸಹಕಾರ ಸಂಘದಲ್ಲಿ 11 ಮಂದಿ ಕಾಂಗ್ರೆಸ್ ಬೆಂಬಲಿತರು, ಓರ್ವ ಬಿಜೆಪಿ ಬೆಂಬಲಿತ ಸದಸ್ಯ ಆಯ್ಕೆಯಾಗಿದ್ದರು. ಚುನಾವಣಾ ಪ್ರಕ್ರಿಯೆಯಲ್ಲಿ ಬ್ಯಾಂಕ್ ಪ್ರತಿನಿಧಿ ಸೇರಿದಂತೆ 13 ಮಂದಿ ಭಾಗವಹಿಸಿದ್ದರು. ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ವಿಜಯ್ ಕುಮಾರ್, ಬಿಜೆಪಿಯಿಂದ ಬಿ.ಎಂ.ಮಹೇಶ್ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ವಿಜಯ್ ಕುಮಾರ್ 7 ಮತಗಳನ್ನು ಪಡೆದು ಅಧ್ಯಕ್ಷರಾದರೇ, ಬಿ.ಎಂ.ಮಹೇಶ್ 6 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಕುಳ್ಳಯ್ಯ ಮತ್ತು ಗುರುಸಿದ್ದಪ್ಪ ನಾಮಪತ್ರ ಸಲ್ಲಿಸಿದ್ದರು. ಕುಳ್ಳಯ್ಯ 8 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರೇ, ಗುರುಸಿದ್ದಪ್ಪ 4 ಮತ ಪಡೆದು ಪರಾಭವಗೊಂಡರು.

ನೂತನ ಅಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ, ಸಂಘದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವ ಮೂಲಕ ರೈತರಿಗೆ ಸವಲತ್ತುಗಳನ್ನು ಒದಗಿಸಲು ಮುಂದಾಗುತ್ತೇನೆ ಎಂದರು. ಚುನಾವಣಾಧಿಕಾರಿ ಕೆ.ಸಿ.ರಘು, ನಿರ್ದೇಶಕರಾದ ರಂಗದಾಸ್, ದೊರೆಸ್ವಾಮಿ, ಗುರುಸಿದ್ದಪ್ಪ, ಬಿ.ಎಂ.ಮಹೇಶ್, ಸೌಭಾಗ್ಯ, ಪಾರ್ವತಮ್ಮ, ಸ್ವಾಮಿನಾಯಕ, ಮುಖಂಡರಾದ ಎನ್.ಎಂ.ಮಂಜುನಾಥ್, ಸೋಮು, ಸುರೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ಸಿಇಓ ಮಹದೇವಸ್ವಾಮಿ ಇತರರಿದ್ದರು.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಅಭಿನಂದನೆ



ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಕೆ.ಆರ್.ನಗರ ತಾಲೂಕಿನ ಸಿದ್ದಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಎಸ್.ಹರಿಚಿದಂಬರ್ ಹಾಗೂ ನಿರ್ದೇಶಕ ರಂಗೇಶ್ ಕುಮಾರ್, ಕಾರ್ಮಿಕ ಇಲಾಖೆ ನಿರೀಕ್ಷಕರಾದ ಗೋವಿಂದರಾಜು, ಮಂಜುನಾಥ್ ಅಭಿನಂದಿಸಿದರು.

ತಂಬಾಕು ಮಾರುಕಟ್ಟೆಗೆ ಕೆಪಿಸಿಸಿ ರಾಜ್ಯ ವಕ್ತಾರರ ಭೇಟಿ, ಪರಿಶೀಲನೆ



ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ್ ಪರಿಶೀಲನೆ ನಡೆಸಿದರು.


ಹುಣಸೂರು, ಅ.15– ತಾಲೂಕಿನ ಕಟ್ಟೆಮಳಲವಾಡಿ ಡಿ.ದೇವರಾಜು ಅರಸು ತಂಬಾಕು ಹರಾಜು ಮಾರುಕಟ್ಟೆಗೆ ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ್ ಭೇಟಿ ನೀಡಿ ತಂಬಾಕು ಹರಾಜು ಪರಿಶೀಲಿಸಿ, ತಂಬಾಕು ಬೆಳೆಗಾರರ ಅಹವಾಲು ಆಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಂತರ ಮಾತನಾಡಿದ ಅವರು, ಪರಿಶೀಲಿಸುವ ಅಧಿಕಾರ ಇಲ್ಲದಿದ್ದರೂ ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ನನಗೆ 6 ಲಕ್ಷಕ್ಕೂ ಹೆಚ್ಚು ಮತದಾರರು ಮತ ನೀಡಿದ್ದಾರೆ. ಹೀಗಾಗಿ ಇವರ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸುವ ಕೆಲಸ ಮಾಡಬೇಕಾಗಿದೆ ಎಂದರು.

ತಂಬಾಕು ರೈತರ ಸಮಸ್ಯೆ ತಿಳಿದು ಕೇಂದ್ರ ಸರ್ಕಾರಕ್ಕೆ ಮುಖ್ಯಮಂತ್ರಿಗಳ ಮೂಲಕ ಪತ್ರದ ಮೂಲಕ ಸಮಸ್ಯೆ ತಿಳಿಸಲು ಭೇಟಿ ನೀಡಿದ್ದೇನೆ. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ನಮ್ಮ ಪಕ್ಷದ ಹಲವು ಮುಖಂಡರ ಆಹ್ವಾನದ ಮೇರೆಗೆ ಭೇಟಿ ನೀಡಿ ಸಮಸ್ಯೆ ಆಲಿಸಿದ್ದಾನೆ ಎಂದರು.

ತಂಬಾಕು ಹರಾಜು ಮಾರುಕಟ್ಟೆ ಅಧೀಕ್ಷಕರಾದ ಮೀನಾ, ಸಿದ್ದರಾಜು, ಪ್ರಭಾಕರ್, ಕಾಫ್ ಸಮಿತಿ ಸದಸ್ಯೆ ಕಲ್ಪನಾ, ಕಾಂಗ್ರೆಸ್ ಕಾರ್ಯಾಧ್ಯಕ್ಷ ದೇವರಾಜ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಘು, ಅಕ್ರಮ ಸಕ್ರಮ ಸಮಿತಿ ಸದಸ್ಯ ಕುಮಾರ್, ತಾಪಂ ಮಾಜಿ ಉಪಾಧ್ಯಕ್ಷ ಚೆನ್ನವೀರಯ್ಯ, ಯೂತ್ ಕಾಂಗ್ರೆಸ್ ಅಧ್ಯಕ್ಷ ದರ್ಶನ್, ರೈತ ಮುಖಂಡರಾದ ಶಿವಣ್ಣೇಗೌಡ, ಬೊಮ್ಮೇಗೌಡ, ಎಸ್.ಶೃಂಗಾರ್, ಸಂಜು, ಅಶೋಕ್, ಮಹೇಶ್ ಇತರರಿದ್ದರು.

ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ



ತಿ.ನರಸೀಪುರ ತಾಲೂಕು ಆಡಳಿತಸೌಧದ ಎದುರು ಡಾ.ಬಿ.ಆರ್.ಅಂಬೇಡ್ಕರ್ ಧಮ್ಮ ದೀಕ್ಷಾ ದಿನದ ಪ್ರಯುಕ್ತ, 6ನೇ ವರ್ಷದ ಅಂಬೇಡ್ಕರ್ ಪ್ರತಿಮೆ ಪ್ರತಿಷ್ಠಾಪನೆ ನೆನಪಿಗಾಗಿ ದಸಂಸ ವತಿಯಿಂದ ಪುಷ್ಪಾರ್ಚನೆ ಮಾಡಲಾಯಿತು. ಈ ವೇಳೆ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಬನ್ನಹಳ್ಳಿ ಸೋಮಣ್ಣ, ವಾಟಾಳ್ ನಾಗರಾಜು, ಮುಖಂಡ ರಾದ ಸೋಸಲೆ ಶಿವಣ್ಣ, ಆಲಗೂಡು ನಾಗರಾಜ್ ಮೂರ್ತಿ, ಶಾಂತರಾಜು, ವಾಟಾಳು ರಾಜು ಇದ್ದರು.

ಹೆಚ್.ಡಿ.ಕೋಟೆಯಲ್ಲಿ ಸರಣಿ ಕಳ್ಳತನ

ಚಿನ್ನ, ಬೆಳ್ಳಿ ಸೇರಿದಂತೆ 50 ಲಕ್ಷಕ್ಕೂ ಹೆಚ್ಚು ಮೌಲ್ಯದ ವಸ್ತುಗಳು ಕಳವು



ಶ್ವಾನದಳದೊಂದಿಗೆ ಪೊಲೀಸರು ಪರಿಶೀಲನೆ ನಡೆಸುತ್ತಿರುವುದು.

ಹೆಚ್.ಡಿ.ಕೋಟೆ, ಅ.15– ಪಟ್ಟಣದಲ್ಲಿ ಬುಧವಾರ ಮುಂಜಾನೆ ಸರಣಿ ಕಳ್ಳತನ ನಡೆಸಿರುವ ದುಷ್ಕರ್ಮಿಗಳು ಚಿನ್ನ, ಬೆಳ್ಳಿ, ಹಣ ಸೇರಿದಂತೆ ಲಕ್ಷಾಂತರ ರೂ. ಮೌಲ್ಯದ ವಸ್ತುಗಳನ್ನು ದೋಚಿ ಪರಾರಿಯಾಗಿದ್ದಾರೆ.

ಮೊದಲಿಗೆ ಪಟ್ಟಣದ ವಾರಾಹಿ ಮತ್ತು ಮಾರಮ್ಮ ದೇವಾಲಯದ ಮುಂಭಾಗವಿರುವ ಶೇಷಾದ್ರಿ ಅವರ ಮನೆ ಬೀಗ ಒಡೆದು ಒಳ ನುಗ್ಗಿರುವ ಕಳ್ಳರು ಚಿನ್ನ, ಹಣ ಸೇರಿದಂತೆ 20 ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ವಸ್ತುಗಳನ್ನು ಕಳವು ಮಾಡಿದ್ದಾರೆ. ಬಳಿಕ ಸ್ಟೇಡಿಯಂ ಬಡಾವಣೆ ನಿವಾಸಿ ಪೊಲೀಸ್ ಮಹದೇವ್ ಅವರ ಮನೆ ಬೀಗ ಒಡೆದು ಒಳ ನುಗ್ಗಿರುವ ದುಷ್ಕರ್ಮಿಗಳು 250 ಗ್ರಾಂ ಚಿನ್ನ, 10 ಸಾವಿರ ರೂ. ಕಳವು ಮಾಡಿದ್ದು, ಮನೆಯಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾ ಡಿವಿಆರ್ ಅನ್ನು ಹೊತ್ತೊಯ್ದಿದ್ದಾರೆ ಎನ್ನಲಾಗಿದೆ. ಮಹದೇವ್ ಅವರು ಹಾಸನದ ಅಧಿದೇವತೆ ಹಾಸನಾಂಬೆ ದೇವಾಲಯದ ಭದ್ರತೆಗೆ ತೆರಳಿರುವುದನ್ನು ಗಮನಿಸಿ ಕಳವು ಮಾಡಲಾಗಿದೆ ಎನ್ನಲಾಗಿದೆ.

ಬಳಿಕ ವಿಶ್ವನಾಥ ಕಾಲೋನಿ ನಿವಾಸಿ ಗೋಬಿ ವ್ಯಾಪಾರಿ ಕೃಷ್ಣ ಅವರ ಮನೆಗೆ ನುಗ್ಗಿರುವ ಕಳ್ಳರು 100 ಗ್ರಾಂ ಬೆಳ್ಳಿ, 5 ಗ್ರಾಂ ಚಿನ್ನ, 20 ಸಾವಿರ ರೂ. ಹಣ ದೋಚಿ ಪರಾರಿಯಾಗಿದ್ದಾರೆ.

ಕಳೆದ 5 ದಿನಗಳ ಹಿಂದೆ ಪಟ್ಟಣದ ಶ್ರೀ ವಾರಾಹಿ ಮತ್ತು ಮಾರಮ್ಮ ದೇವಾಲಯದಲ್ಲಿ 1.5 ಲಕ್ಷ ರೂ. ವೆಚ್ಚದ ಚಿನ್ನದ ತಾಳಿಗಳನ್ನು ಕಳ್ಳರು ದೋಚಿದ್ದರು. ಇದೀಗ ಸರಣಿ ಕಳ್ಳತನ ನಡೆಸಿರುವ ದುಷ್ಕರ್ಮಿಗಳು ಚಿನ್ನ, ಬೆಳ್ಳಿ, ನಗದು ಸೇರಿದಂತೆ 50 ಲಕ್ಷಕ್ಕೂ ಹೆಚ್ಚು ಮೌಲ್ಯದ ವಸ್ತುಗಳನ್ನು ಕಳವು ಮಾಡಿದ್ದಾರೆ ಎನ್ನಲಾಗಿದೆ.

ವಿಷಯ ತಿಳಿದು ಶ್ವಾನದಳ, ಬೆರಳಚ್ಚು ತಜ್ಞರೊಂದಿಗೆ ಸ್ಥಳಕ್ಕಾಗಮಿಸಿದ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಆಕ್ರೋಶ: ಪಟ್ಟಣದಲ್ಲಿ ಕಳ್ಳತನ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗಲು ಪೊಲೀಸ್ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ರಾತ್ರಿ ವೇಳೆ ಗಸ್ತಿಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕು ಎಂದು ಒತ್ತಾಯಿಸಿದರು.

ಪಟ್ಟಣದಲ್ಲಿ ಡ್ರಗ್ಸ್ ದಂಧೆ ಹೆಚ್ಚಾಗಿದ್ದು, ದಂಧೆ ನಡೆಸುವವರು ಕಳ್ಳತನ ಮಾಡುವವರಿಗೆ ಸಾಥ್ ನೀಡುತ್ತಿದ್ದಾರೆ. ಹೀಗಾಗಿ ಪೊಲೀಸರು ಡ್ರಗ್ಸ್ ದಂಧೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು. ಈ ವೇಳೆ ಇನ್ಸ್‌ಪೆಕ್ಟರ್‌ಗಳಾದ ಬಾಲಸುಬ್ರಹ್ಮಣ್ಯಂ, ಮೋಹಿತ್, ಎಸ್‌ಐ ಚಿಕ್ಕನಾಯಕ ಸಿಬ್ಬಂದಿ ಕಬೀರ್ ಹಾಜರಿದ್ದರು.

ಶಾಂತ ಕುಮಾರ್ ನಿಧನ



ಹುಣಸೂರು, ಅ.15– ನಗರದ ಗಣೇಶನ ಗುಡಿ ಬೀದಿ ನಿವಾಸಿ, ಸರ್ಕಾರಿ ಬಾಲಕರ ಕಿರಿಯ ಕಾಲೇಜಿನ ಉಪನ್ಯಾಸಕ ಶಾಂತ ಕುಮಾರ್(57) ಬುಧವಾರ ನಿಧನರಾದರು. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಪಂಪ್‌ಹೌಸ್ ಬಳಿಯ ಸ್ಮಶಾನದಲ್ಲಿ ಗುರುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೋಮಶೇಖರ್



ಹುಣಸೂರು, ಅ.15– ತಾಲೂಕಿನ ಹರವೆ ಗ್ರಾಪಂ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ದಿ.ಮರಿಯಪ್ಪ ಅವರ ತಂದೆ ಸೋಮಶೇಖರ್(67) ಬುಧವಾರ ಬೆಳಗ್ಗೆ ನಿಧನರಾದರು. ಮೃತರ ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಆರ್‌ಎಸ್‌ಎಸ್ ನಿಷೇಧ ಅಸಾಧ್ಯದ ಮಾತು

■ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸವಾಲು ■ ಸಚಿವ ಪ್ರಿಯಾಂಕ್ ಖರ್ಗೆ ತಮ್ಮ ಖಾತೆಯ ಇಲಾಖೆ ಅಭಿವೃದ್ಧಿಯತ್ತ ಗಮನಹರಿಸಲಿ

ಬೆಂಗಳೂರು, ಅ.15(ಕೆಎಂಶಿ)–ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ನಿಷೇಧಿಸುವುದು ಅಸಾಧ್ಯದ ಮಾತು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕರು, ಹಿರಿಯ ಸಚಿವರು ಆರ್‌ಎಸ್‌ಎಸ್ ಕುರಿತು ಮನ ಬಂದಂತೆ ಹೇಳಿಕೆ ನೀಡುತ್ತಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘ 100 ವರ್ಷ ಪೂರೈಸಿದೆ. ಪ್ರಧಾನಿ ನರೇಂದ್ರ ಮೋದಿ ಆಗಸ್ಟ್ 15ರಂದು ಕೆಂಪುಕೋಟೆ ಮೇಲೆ ಭಾಷಣ ಮಾಡುವಾಗ ಸಂಘಟನೆಯ ಪ್ರಶಂಸೆ ಮಾಡಿದ್ದರು ಎಂದರು.

ನಿಸ್ವಾರ್ಥತೆಯಿಂದ ದೇಶ ಕಟ್ಟುವ ಮತ್ತು ಯುವ ಜನರಲ್ಲಿ ರಾಷ್ಟ್ರಭಕ್ತಿ ಮೂಡಿಸುವ ಪ್ರಾಮಾಣಿಕ ಕೆಲಸವನ್ನು ಆರ್‌ಎಸ್‌ಎಸ್ ಮಾಡುತ್ತಾ ಬಂದಿದೆ. ಕರ್ನಾಟಕ, ಭಾರತವಷ್ಟೇ ಅಲ್ಲ. ಜಗತ್ತಿನ 40ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಸಂಘಟನೆ ಚಟುವಟಿಕೆ ಇದೆ.



ಆರ್‌ಎಸ್‌ಎಸ್ ನಿಷೇಧಿಸುವುದು ಯಾರಿಂದಲೂ ಸಾಧ್ಯವಿಲ್ಲ. ರಾಜ್ಯ ಮತ್ತು ದೇಶದಲ್ಲಿ ಬಿಜೆಪಿಗೆ ಹೆಚ್ಚಿನ ಅಸ್ತಿತ್ವ ಇಲ್ಲದ ಸಂದರ್ಭದಲ್ಲೂ ಸಂಘಟನೆ ನಿಷೇಧಿಸಿದ್ದ ಕಾಂಗ್ರೆಸ್ ಬಳಿಕ ನಿಷೇಧ ಹಿಂಪಡೆಯಬೇಕಾಯಿತು.

ಬಿಜೆಪಿಗೆ ನರೇಂದ್ರ ಮೋದಿ ಅವರ ದಿಟ್ಟ ನಾಯಕತ್ವ ಇದೆ. ದೇಶದ ಅನೇಕ ರಾಜ್ಯಗಳಲ್ಲಿ ಪಕ್ಷ ಆಡಳಿತದಲ್ಲಿದೆ. ಇಂಥ ಸಂದರ್ಭದಲ್ಲಿ ಆರ್‌ಎಸ್‌ಎಸ್ ನಿಷೇಧದ ಮಾತು ಮೂರ್ಖತನದ ಪರಮಾವಧಿ.

ಸಚಿವ ಪ್ರಿಯಾಂಕ್ ಖರ್ಗೆ ತಮ್ಮ ಖಾತೆಯಡಿ ಬರುವ ಇಲಾಖೆಗಳ ಸಾಧನೆ, ಸುಧಾರಣೆಗಳನ್ನು ರಾಜ್ಯದ ಜನತೆಯ ಮುಂದೆ ಇಡಬೇಕು. ಕಳೆದ 50–60 ವರ್ಷಗಳಿಂದ ಕಲಬುರಗಿ ಜಿಲ್ಲೆ ಖರ್ಗೆ ಕುಟುಂಬದ ಹಿಡಿತದಲ್ಲಿದೆ. ಜಿಲ್ಲೆಯಲ್ಲಿ ಏನು ಅಭಿವೃದ್ಧಿ ಕೆಲಸ ಮಾಡಿದ್ದೀರಿ. ಶಿಕ್ಷಣ ಕ್ಷೇತ್ರದಲ್ಲಿ ಜಿಲ್ಲೆ ರಾಜ್ಯದಲ್ಲಿ ಕೊನೆಯ ಸ್ಥಾನದಲ್ಲಿದೆ. ಈ ಹಿನ್ನಡೆಗೆ ಕಾರಣ ತಿಳಿಸಬೇಕು.

ಕಾಂಗ್ರೆಸ್ ಸರ್ಕಾರದ ಎರಡೂವರೆ ವರ್ಷಗಳ ಆಡಳಿತ ವೈಫಲ್ಯ ಮುಚ್ಚಿ ಹಾಕಿ ಅಪಪ್ರಚಾರದ ಮೂಲಕ ವಿಷಯಾಂತರ ಮಾಡುವ ಕುತಂತ್ರ ಇದಾಗಿದೆ. ಆರ್‌ಎಸ್‌ಎಸ್ ಮುಟ್ಟುವ ಯೋಗ್ಯತೆಯೂ ಆ ಪಕ್ಷಕ್ಕೆ ಇಲ್ಲ. ತಮಗೆ ಬೆದರಿಕೆ ಕರೆ ಬರುತ್ತಿದೆ ಎನ್ನುವ ಮೂಲಕ ಪ್ರಿಯಾಂಕ್ ಖರ್ಗೆ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಅತಿವೃಷ್ಟಿಯಿಂದ ತೊಂದರೆಗೆ ಸಿಲುಕಿದ ಕಲ್ಯಾಣ ಕರ್ನಾಟಕ ರೈತರ ಸಂಕಷ್ಟಕ್ಕೆ ಪರಿಹಾರ ಕಂಡುಕೊಳ್ಳುವ ಕೆಲಸ ಆಗಿದೆಯೇ ಎಂದರು.

ಡಿನ್ನರ್ ಮೀಟಿಂಗ್ ಕೊಳ್ಳೆ ಹೊಡೆಯಲಷ್ಟೇ: ರಾಜ್ಯ ಲೂಟಿ ಮಾಡಿ ಬಿಹಾರ ಚುನಾವಣೆಗೆ ತೆಗೆದುಕೊಂಡು ಹೋಗುವ ಮೂಲಕ ಕಾಂಗ್ರೆಸ್ ಹೈಕಮಾಂಡ್ ಖುಷಿಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಹೋದ್ಯೋಗಿಗಳ ಜೊತೆ ಔತಣಕೂಟದಲ್ಲಿ ಚರ್ಚೆ ಮಾಡಿದ್ದಾರೆಯೇ ಹೊರತು, ರಾಜ್ಯದ ಅಭಿವೃದ್ಧಿ ಬಗ್ಗೆ ಅಲ್ಲ. ಕಲಬುರಗಿಯಲ್ಲಿ ಲೈಬ್ರೆರಿಯನ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ರಾಜ್ಯದ ಇಂದಿನ ಪರಿಸ್ಥಿತಿ, ರೈತರ ಪರಿಸ್ಥಿತಿ, ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಬೇಕಿದೆ ಎಂದರು.

ಬೆಂಗಳೂರು ಮಹಾನಗರದ ದುಃಸ್ಥಿತಿಗೆ ಕಾರಣವಾದ ಕಾಂಗ್ರೆಸ್ ಸರ್ಕಾರಕ್ಕೆ ಜನತೆ ಸಾಮಾಜಿಕ ಜಾಲತಾಣದಲ್ಲಿ ಛೀ.., ಥೂ.., ಎಂದು ಉಗಿಯುತ್ತಿದ್ದಾರೆ. ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜೂಂದಾರ್ ಷಾ ಹೇಳಿಕೆಯನ್ನು ಕೆಟ್ಟದಾಗಿ ಟೀಕೆ ಮಾಡಲಾಗುತ್ತಿದೆ.

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ, ಮೋಹನ್‌ದಾಸ್ ಪೈ ಟೀಕೆ ಮಾಡಿದ್ದರು. ಆಗ ತಕ್ಷಣ ಅವರನ್ನು ಕರೆಸಿಕೊಂಡು ಚಹಾ ಕುಡಿಸಿ ಟೀಕೆ, ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ಕೆಲಸ ಮಾಡಿದ್ದರು ಎಂದರು. ಸಮಾಜದ ಗಣ್ಯರು ನೀಡುವ ಅಭಿಪ್ರಾಯವನ್ನು ಸಕಾರಾತ್ಮಕವಾಗಿ ಭಾವಿಸಿ, ಸಮಸ್ಯೆ ಪರಿಹಾರಕ್ಕೆ ಯತ್ನಿಸಬೇಕು. ಬದಲಿಗೆ ಅವಮಾನ ಮಾಡುವುದು ರಾಜ್ಯಕ್ಕೇ ಅಪಮಾನ ಮಾಡಿದಂತೆ. ಮಹಿಳಾ ಅಧಿಕಾರಿ ಕುರಿತ ಕಾಂಗ್ರೆಸ್ ಶಾಸಕರ ಟೀಕೆ ಗಮನಿಸಿದರೆ ಅಧಿಕಾರದ ಪಿತ್ತ ನೆತ್ತಿಗೇರಿದಂತೆ ಕಾಣಿಸುತ್ತಿದೆ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇ ಕಾಲ್ ಹಿಮ್ ಓಜಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಇಡ್ಲಿ ಕಡಾಯಿ (ತ)	4 ಪ್ರದರ್ಶನಗಳು
ಸಂಗಂ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಲಿಡೋ	
ಇಡ್ಲಿ ಕೊಟ್ಟು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಏಳುಮಲೆ(ಕ)	4 ಪ್ರದರ್ಶನಗಳು

ನಟ ದರ್ಶನ್‌ಗೆ ಮತ್ತೆ ಬೆನ್ನು ನೋವು

ವಾರಕ್ಕೆರಡು ಬಾರಿ ಫಿಜಿಯೋಥೆರಪಿ

ಬೆಂಗಳೂರು, ಅ.15(ಕೆಎಂಶಿ)– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಮೊಕದ್ದಮೆಯಲ್ಲಿ ಜಾಮೀನು ರದ್ದಾಗಿ ಜೈಲು ಪಾಲಾಗಿರುವ ಚಿತ್ರನಟ ದರ್ಶನ್‌ಗೆ ಬೆನ್ನು ನೋವು ಮತ್ತೆ ಕಾಣಿಸಿ ಕೊಂಡಿದ್ದು, ಚಿಕಿತ್ಸೆಗೆ ಅವಕಾಶ ಮಾಡಿಕೊಡುವಂತೆ ಕಾರಾಗೃಹ ಅಧಿಕಾರಿಗಳಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ.



ದರ್ಶನ್ ಅವರಿಗೆ ಕಳೆದ ಒಂದು ವಾರದಿಂದ ಬೆನ್ನು ನೋವು ಹೆಚ್ಚಾಗಿದ್ದು, ನಡೆಯಲಾಗದೆ ಕುಂಟುತ್ತಿದ್ದಾರೆ ಎಂಬ ಹಿನ್ನೆಲೆಯಲ್ಲಿ ಕಾರಾಗೃಹ ಅಧಿಕಾರಿಗಳ ಮನವಿ ಮೇರೆಗೆ ಆರೋಗ್ಯ ತಪಾಸಣೆ ನಡೆಸಿದ ಸಿ.ವಿ.ರಾಮನ್ ಆಸ್ಪತ್ರೆ ವೈದ್ಯರು ಫಿಜಿಯೋಥೆರಪಿ ಅವಶ್ಯಕತೆ ಇದೆ ಎಂಬ ಸಲಹೆ ನೀಡಿದ್ದಾರೆ. ಸದ್ಯ ವಾರಕ್ಕೆ ಎರಡು ಬಾರಿ ಮಾತ್ರ ಫಿಸಿಯೋಥೆರಪಿ ಚಿಕಿತ್ಸೆಗೆ ವೈದ್ಯರು ಮುಂದಾಗಿದ್ದು, ಬೆನ್ನು ನೋವಿನ ಜೊತೆಗೆ ಮೊಣಕೈ ನೋವು ಇದೆ ಎಂದು ದರ್ಶನ್ ಹೇಳಿಕೊಂಡಿದ್ದಾರೆ.

ಕಾರು ಅಪಘಾತ ಒಂದರಲ್ಲಿ ಮೊಣಕೈಗೆ ಪೆಟ್ಟು ಬಿದ್ದು ಶಸ್ತ್ರಚಿಕಿತ್ಸೆ ಆಗಿತ್ತು, ಕೈಗೆ ರಾಡ್ ಹಾಕಲಾಗಿದೆ. ಈಗ ನೋವು ಹೆಚ್ಚಿದ್ದು, ಎರಡು ಬೆರಳು ಮರಗಟ್ಟಿದೆ ಎನ್ನುತ್ತಿದ್ದಾರೆ.

ಹಾಸಿಗೆ–ದಿಂಬು ನೀಡಿ ಎಂದು ದರ್ಶನ್ ಅಲವತ್ತುಕೊಂಡಿದ್ದಾರೆ. ಈಗ ನೆಲದ ಮೇಲೆ ಮಲಗುತ್ತಿದ್ದು, ಶೀತಕ್ಕೆ ಬೆನ್ನು ನೋವು ಜಾಸ್ತಿಯಾಗಿದೆ. ಮೊಣಕೈ ನೋವಿಗೂ ಚಿಕಿತ್ಸೆ ನೀಡಲು ಮನವಿ ಮಾಡಲಾಗಿದೆ.

ಈ ಮಧ್ಯೆ ದರ್ಶನ್ ಅಭಿನಯದ 'ಡೆವಿಲ್' ಚಿತ್ರ ಪೂರ್ಣಗೊಂಡಿದೆ. ಡಿಸೆಂಬರ್ 12 ರಂದು ಬಿಡುಗಡೆ ಆಗುವ ನಿರೀಕ್ಷೆ ಇದ್ದು, ಚಿತ್ರದ ಕೆಲವು ಹಾಡುಗಳು ಈಗಾಗಲೇ ರಿಲೀಸ್ ಆಗಿವೆ

ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಗಂಭೀರ ಪರಿಗಣನೆ

ಮುಖ್ಯಮಂತ್ರಿ ಡಿನ್ನರ್ ಮೀಟಿಂಗ್‌ನಲ್ಲಿ ಅಭಿವೃದ್ಧಿಯಷ್ಟೇ ಚರ್ಚೆ

ಬೆಂಗಳೂರು, ಅ.15(ಕೆಎಂಶಿ)–ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಕರೆಗಳ ವಿಚಾರವನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರು ಬೆದರಿಕೆ ಕರೆ ಮಾಡಿದ್ದಾರೆ. ಎಲ್ಲಿಂದ ಬಂದಿದೆ ಎಂಬ ತನಿಖೆ ಮಾಡುತ್ತೇವೆ. ಆರ್‌ಎಸ್‌ಎಸ್ ವಿಚಾರದಲ್ಲಿ ಸಚಿವರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಆ ಬಗ್ಗೆ ಸರ್ಕಾರ ತೀರ್ಮಾನ ಮಾಡುತ್ತದೆ. ಅದಕ್ಕಾಗಿ ಬೆದರಿಕೆ ಹಾಕುವುದು ಸರಿಯಲ್ಲ. ಎಲ್ಲವನ್ನೂ ಪರಿಶೀಲಿಸಲು ಸೂಚಿಸಲಾಗಿದೆ ಎಂದರು.



ಡಾ.ಜಿ.ಪರಮೇಶ್ವರ್

ಮುಖ್ಯಮಂತ್ರಿ ಸಿದ್ದರಾಮಯ್ಯ ಏರ್ಪಡಿಸಿದ್ದ ಔತಣಕೂಟ ಸಚಿವ ಸಂಪುಟ ಪುನಾರಚನೆಗೆ ಅಲ್ಲ. ಸರ್ಕಾರ ರಚನೆಯಾಗಿ ಎರಡೂವರೆ ವರ್ಷವಾಗುತ್ತಿದ್ದು, ಎಲ್ಲರೂ ಚೆನ್ನಾಗಿ ಕೆಲಸ ನಿರ್ವಹಿಸಬೇಕು ಎಂಬುದಾಗಿ ಚರ್ಚಿಸಿದ್ದು ರಾಜಕೀಯ ವಿಚಾರ ಮಾತನಾಡಿಲ್ಲ ಎಂದರು. ಯಾದಗಿರಿ ಎಎಸ್‌ಐ ಕಿಡ್ನಾಪ್ ಮಾಡಿ ಹಲ್ಲೆ ನಡೆಸಿದ್ದಾರೆಂಬ ಮಾಜಿ ಸಚಿವ ರಾಜುಗೌಡ ಆರೋಪದ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಕಾನೂನು ಸುವ್ಯವಸ್ಥೆ ಎಡಿಜಿಪಿಗೆ ಸೂಚಿಸಲಾಗಿದೆ. ವರದಿ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬಿಜೆಪಿಗರು ಟೀಕೆ ಮಾಡುವುದರಲ್ಲಿ ನಿಸ್ಸೀಮರು. ಅದು ಅವರ ಕರ್ತವ್ಯ. ಪಾಸಿಟಿವ್ ಕ್ರಿಟಿಸಿಸಂ ಮಾಡಲಿ. ರಾಜಕೀಯಕ್ಕಾಗಿ ಟೀಕೆ ಮಾಡುವುದು ಬೇಡ. ರಸ್ತೆ ಗುಂಡಿಗಳ ಕುರಿತು ಉದ್ಯಮಿ ಕಿರಣ್ ಮಜೂಂದಾರ್ ಷಾ ಟ್ವೀಟ್‌ಗೆ ಪ್ರತಿಕ್ರಿಯಿಸಿ, ಗುಂಡಿ ಮುಚ್ಚುವ ಕೆಲಸ ಪ್ರಾರಂಭ ಆಗಿದೆ. ಕಾಮಗಾರಿ ಪೂರ್ಣ ಗೊಳ್ಳಲು ಸಮಯ ಹಿಡಿಯುತ್ತದೆ. ಕೆಲಸ ನಡೆಯುತ್ತಿರುವಾಗಲೇ ಟೀಕಿಸುವುದು ಸರಿಯಲ್ಲ. ಕೆಲಸ ಆಗಿಲ್ಲ ಎಂದಾದರೆ ಟೀಕಿಸಲಿ ಎಂದರು.

ರಾಜ್ಯದಲ್ಲಿ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದಲ್ಲಿ 10 ಲಕ್ಷ 22 ಸಾವಿರ ಕೋಟಿ ರೂ. ಹೂಡಿಕೆಗೆ ಸಹಿ ಮಾಡಲಾಗಿದೆ. ಗೂಗಲ್ ಎಐ ಹಬ್ ಬೇರೆ ರಾಜ್ಯಕ್ಕೆ ಹೋಗಿರುವುದಕ್ಕೆ ಕಾರಣವೇ ಬೇರೆಯಿದೆ. ಕರ್ನಾಟಕದಲ್ಲಿ ಬಂಡವಾಳ ಹೂಡಲು ಬರುವವರನ್ನು ಸ್ವಾಗತಿಸುತ್ತೇವೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯ ರಾಜಕಾರಣಕ್ಕೆ ಬಂದರೆ ಸ್ವಾಗತ ಮಾಡುತ್ತೇವೆ, ಅವರು ನಮ್ಮ ದೊಡ್ಡ ನಾಯಕರು ಎಂದರು.

ಆರೋಗ್ಯ ಸಮಸ್ಯೆ ಮುಚ್ಚಿಟ್ಟು ಮದುವೆಯಾದ ಪತ್ನಿಗೆ ಇಂಜೆಕ್ಷನ್ ಕೊಟ್ಟು ಕೊಂದ ಡಾಕ್ಟರ್!

ಬೆಂಗಳೂರು, ಅ.15– ಅನಸ್ತೇಶಿಯಾ ನೀಡಿ ಪತ್ನಿಯನ್ನು ಹತ್ಯೆಗೈದು ಸಹಜ ಸಾವು ಎಂದು ಬಿಂಬಿಸಿದ್ದ ವೈದ್ಯನನ್ನು ಮಾರತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತನನ್ನು ಡಾ.ಮಹೇಂದ್ರ ರೆಡ್ಡಿ ಎಂದು ಗುರುತಿಸಲಾಗಿದೆ. ಈತ ತನ್ನ ಪತ್ನಿ ಡಾ.ಕೃತಿಕಾ ರೆಡ್ಡಿಗೆ ಅನಸ್ತೇಶಿಯಾ ನೀಡಿ ಆಕೆಯ ತವರು ಮನೆಯಲ್ಲೇ ಕೊಲೆ ಮಾಡಿದ್ದ. ಇದು ಸಹಜ ಸಾವು ಎಂಬಂತೆಯೇ ಆರೋಪಿ ಬಿಂಬಿಸಿದ್ದ. ಕೊಲೆ ಮಾಡಿದ ಆರು ತಿಂಗಳ ಬಳಿಕ ಹಂತಕನ ಸಂಚು ಬಯಲಾಗಿದೆ. ಡರ್ಮೆಟಾಲಜಿಸ್ಟ್ ಆಗಿದ್ದ ಕೃತಿಕಾ ರೆಡ್ಡಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಮಹೇಂದ್ರ ರೆಡ್ಡಿ ಸಹ ಅದೇ ಆಸ್ಪತ್ರೆಯಲ್ಲಿ ಜನರಲ್ ಸರ್ಜನ್ ಆಗಿದ್ದ.



2024ರ ಮೇ.26ರಂದು ಮಹೇಂದ್ರ ಮತ್ತು ಕೃತಿಕಾ ರೆಡ್ಡಿಗೆ ಮದುವೆಯಾಗಿತ್ತು. ವೈದ್ಯೆಗೆ ಅಜೀರ್ಣ, ಗ್ಯಾಸ್ಟ್ರಿಕ್ ಮತ್ತು ಲೋ ಶುಗರ್ ಸಮಸ್ಯೆ ಇತ್ತು. ಈ ವಿಚಾರ ಮಹೇಂದ್ರನಿಗೆ ತಿಳಿಸದೆ ಮದುವೆ ಮಾಡಿದ್ದರು. ಮದುವೆಯಾದ ಬಳಿಕ ಈ ವಿಚಾರ ಮಹೇಂದ್ರನಿಗೆ ಗೊತ್ತಾಗಿತ್ತು. ನಿತ್ಯ ವಾಂತಿ ಹಾಗೂ ಇತರ ಸಮಸ್ಯೆಯಿಂದ ಕೃತಿಕಾ ಬಳಲುತ್ತಿದ್ದರು. ಇದೇ ಕಾರಣಕ್ಕೆ ಆರೋಪಿ ಕೊಲೆಗೆ ಸಂಚು ರೂಪಿಸಿದ್ದ.

ತಂದೆ ಮನೆಯಲ್ಲಿ ಹುಷಾರಿಲ್ಲದೇ ಮಲಗಿದ್ದ ಕೃತಿಕಾಗೆ ಆರೋಪಿ ಐವಿ ಇಂಜೆಕ್ಷನ್ ಮೂಲಕ ಎರಡು ದಿನ ನಿರಂತರವಾಗಿ ಒಂದಷ್ಟು ಮೆಡಿಸಿನ್ ನೀಡಿದ್ದ. ಬಳಿಕ ಈ ವರ್ಷ ಏ.23ರಂದು ಅವರು ಪ್ರಜ್ಞಾನ ತಪ್ಪಿದ್ದರು. ಕೂಡಲೇ ಅವರನ್ನು ಹತ್ತಿರದ ಖಾಸಗಿ ಆಸ್ಪತ್ರೆಗೆ ಕರೆದು ಕೊಂಡು ಹೋಗಲಾಗಿತ್ತು. ಈ ವೇಳೆ ಆಕೆ ಮೃತಪಟ್ಟಿದ್ದಾಳೆ ಎಂದು ವೈದ್ಯರು ತಿಳಿಸಿದ್ದರು. ಘಟನೆ ಬಳಿಕ ಆಸ್ಪತ್ರೆಯಿಂದ ಡೆತ್ ಮೆಮೊ ಬಂದಿದ್ದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಕುಟುಂಬದಿಂದ ದೂರು ಪಡೆದು ಯುಡಿಆರ್ ದಾಖಲು ಮಾಡಲಾಗಿತ್ತು. ಬಳಿಕ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹದ ಸ್ಯಾಂಪಲ್‌ನ್ನು ಎಫ್‌ಎಸ್‌ಎಲ್‌ಗೆ ಕಳಿಸಲಾಗಿತ್ತು. ಎಫ್‌ಎಸ್‌ಎಲ್ ವರದಿಯಲ್ಲಿ ಅನಸ್ತೇಶಿಯಾ ಅಂಶಗಳು ಪತ್ತೆಯಾಗಿದ್ದು, ಸಾವಿಗೆ ಇದೇ ಕಾರಣ ಎಂದು ತಿಳಿದು ಬಂದಿತ್ತು. ಇನ್ನೂ ಕೇಸ್ ದಾಖಲಾದ ಬಳಿಕ ಆರೋಪಿ ಮಣಿಪಾಲಿಗೆ ತೆರಳಿದ್ದ. ಅಲ್ಲಿಯೇ ಆತನನ್ನು ಬಂಧಿಸಿ ಬೆಂಗಳೂರಿಗೆ ಕರೆತಂದು ತೀವ್ರ ವಿಚಾರಣೆ ನಡೆಸಲಾಗುತ್ತಿದೆ.

ಬೆದರಿಕೆ ಹಿನ್ನೆಲೆಯಲ್ಲಿ ಪ್ರಿಯಾಂಕ್ ಖರ್ಗೆ, ಕುಟುಂಬಕ್ಕೆ ಪೊಲೀಸ್ ಭದ್ರತೆ

ಬೆಂಗಳೂರು, ಅ.15(ಕೆಎಂಶಿ)– ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಚಟುವಟಿಕೆ ನಿರ್ಬಂಧಿಸುವಂತೆ ಮುಖ್ಯಮಂತ್ರಿಗೆ ಪತ್ರ ಬರೆದ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಅವರ ಕುಟುಂಬದವರಿಗೆ ಬೆದರಿಕೆ ಹಿನ್ನೆಲೆಯಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ.

ನಗರದ ಮನೆ, ಕಚೇರಿ, ಕಲಬುರಗಿಯ ಕಚೇರಿ, ಮನೆ ಹಾಗೂ ಅವರ ಕುಟುಂಬದವರಿಗೆ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಸಚಿವ ಖರ್ಗೆ ಪ್ರವಾಸ, ಸಭೆ, ಕಾರ್ಯಕ್ರಮಗಳಿಗೂ ಹೆಚ್ಚಿನ ಪೊಲೀಸ್ ನಿಯೋಜಿಸುವಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸೂಚಿಸಿದ್ದಾರೆ.



ಮೈಸೂರು ಮಾನ್ಸೂನ್ ರೇಸ್

12ನೇ ದಿನ, ಗುರುವಾರ, 16–10–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. **ಲೋಕಪಾವನಿ ಪ್ಲೇಟ್** –1400 ಮೀ. ರೇಟೆಡ್ 00 ರಿಂದ 25. **ಮ.2.00ಕ್ಕೆ**
1 ಸದರನ್ ಅರಿಸ್ಟೋಕ್ರಾಟ್ 2. ಆರ್ಮಮೆಂಟ್ ಟರ್ಕೊಮ್ಯಾನ್

II. **ಒರಿಜಿನಲ್ ವೇಲ್ ರೇಸಿಂಗ್ ಟ್ರೋಫಿ ಡಿII**–1200 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). **ಮ.2.30ಕ್ಕೆ**
1 ಸೆರೈ 2. ಸಿ ಆಫ್ ಅಡ್ವೆಂಚರ್

III. **ಅರಸ್ ಕಾರ್ ಟ್ರೋಫಿ ಡಿI**–1600 ಮೀ. ರೇಟೆಡ್ 40 ರಿಂದ 65. **ಮ.3.00ಕ್ಕೆ**
1 ಟ್ರೂ ಪಂಚ್ 2 ಲಿಟಲ್ ಮಿನಿಸ್ಟರ್

IV H.H.**ಶ್ರೀ ಚಾಮರಾಜ ಒಡೆಯರ್ ಮೆಮೋರಿಯಲ್ ಕಪ್** –1400 ಮೀ. ರೇಟೆಡ್ 20 ರಿಂದ 45.(ಮೈಸೂರು ಬೇಸ್ಡ್ ಹಾರ್ಸ್). **ಮ.3.30ಕ್ಕೆ**
1. ಸಿನ್ನಪ್ರಿನ್ಸಸ್ 2. ಆಬ್‌ಸಲ್ಯೂಟ್ ಕಾನ್‌ಕ್ವಿರರ್

V. **ಮೈಸೂರ್ ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್** 3 ವರ್ಷ (ಟರ್ಮ್ಸ್). **ಸಂ.4.00ಕ್ಕೆ**
1 ಮಿರೋಪಿ 2. ಇಂಪಿರಿಯಲ್ ಬ್ಲೂ

VI. **ಒರಿಜಿನಲ್ ವೇಲ್ ರೇಸಿಂಗ್ ಟ್ರೋಫಿ ಡಿI**–1200 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). **ಸಂ.4.30ಕ್ಕೆ**
1 ನ್ಯಾಚುರಲ್ ಟೊರಾಂಡೊ 2 ಒ ಮಂಚಾಲಿ

VII. **ಅರಸ್ ಕಾರ್ ಟ್ರೋಫಿ ಡಿII.** ರೇಟೆಡ್ 40 ರಿಂದ 65. **ಸಂ.5.00ಕ್ಕೆ**
1 ಮಿಸ್ಟಿಕೋಸ್ 2 ಚೋಟಿ ಪ್ಯಾರಿ

ದಿನದ ಅತ್ಯುತ್ತಮ.......... :	ಮಿರೋಪಿ
ಡಬ್ಬಲ್.......... :	ಸದರನ್ ಅರಿಸ್ಟೋಕ್ರಾಟ್, ಮಿಸ್ಟಿಕೋಸ್
ಜಾಕ್‌ಪಾಟ್.......... :	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್.......... :	4, 5, 6 ಮತ್ತು 7
I ಟ್ರೆಬಲ್.......... :	2, 3 ಮತ್ತು 4
II ಟ್ರೆಬಲ್.......... :	5, 6 ಮತ್ತು 7
ಎಕ್ಸ್‌ಆಕ್ಟ್.......... :	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಲಿಂಗತ್ವ ಪತ್ತೆ ಪ್ರಕ್ರಿಯೆಗೆ ಹೈಕೋರ್ಟ್ ತಡೆ

ಬೆಂಗಳೂರು, ಅ.15(ಕೆಎಂಶಿ)–ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ಲೈಂಗಿಕ ಅಲ್ಪಸಂಖ್ಯಾತರು, ಲಿಂಗಪರಿವರ್ತಿತರ ಲಿಂಗತ್ವ ಪತ್ತೆ ಪ್ರಕ್ರಿಯೆಗೆ ಹೈಕೋರ್ಟ್ ತಡೆ ನೀಡಿದೆ.



ಈ ಸಂಬಂಧ ಅನಿತಾ ಹ್ಯೂಮ್ಯಾನಿಟೇರಿಯನ್ ಫೌಂಡೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ನೇತೃತ್ವದ ನ್ಯಾಯಪೀಠ, ಸಮೀಕ್ಷಾ ಪ್ರಕ್ರಿಯೆಯಲ್ಲಿ ಈಗಾಗಲೇ ಗುರುತು ಪತ್ತೆಗೆ ಸಂಬಂಧಿಸಿದಂತೆ ದತ್ತಾಂಶ ಸಂಗ್ರಹ ಮಾಡಿದ್ದಲ್ಲಿ, ಗೌಪ್ಯತೆ ಕಾಪಾಡುವಂತೆ ಆದೇಶಿಸಿದೆ. ಸಂವಿಧಾನದ ಪರಿಚ್ಛೇದ 14, 15, 19(1) (ಎ) ಮತ್ತು 21ರ ಅಡಿ ಗೌಪ್ಯತಾ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಲಿಂಗ ಪರಿವರ್ತಿತರು ಮತ್ತು ಲೈಂಗಿಕ ಅಲ್ಪಸಂಖ್ಯಾತರ ಲಿಂಗ ಗುರುತಿಸುವ ದತ್ತಾಂಶ ಸಂಗ್ರಹಿಸಿ ಗೌಪ್ಯತೆ ಮತ್ತು ಘನತೆ ರಕ್ಷಣೆ ಮಾಡುವ ಸಂವಿಧಾನಿಕ ತತ್ವಗಳು ಮತ್ತು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಮಾನದಂಡಗಳಿಗೆ ಅನುಗುಣವಾಗಿ ಸಮಗ್ರ ಮಾರ್ಗಸೂಚಿ ರಚಿಸಲು ನಿರ್ದೇಶನ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಇಂದು ವಿಶ್ವ ಆಹಾರ ದಿನ

ಹಸಿದವರಿಗೆ ಆಹಾರ ವಿತರಿಸುವ ಮಹತ್ಕಾರ್ಯ ; 13 ವರ್ಷಗಳಿಂದ ಸಾರ್ಥಕ ಸೇವೆಯಲ್ಲಿ ಅಕ್ಷಯ ಆಹಾರ ಫೌಂಡೇಷನ್

ಆಹಾರ ಜೋಳಿಗೆ ಶೀರ್ಷಿಕೆಯಡಿ ಈವರೆಗೆ 8.9 ದಶಲಕ್ಷ ಜನರಿಗೆ ಆಹಾರ ವಿತರಣೆ

ಮೈಸೂರು, ಅ.15(ಪಿಎಂ)– ಆಹಾರವಿಲ್ಲದೆ ನಮ್ಮ ಬದುಕನ್ನೂ ಊಹಿಸಲು ಸಾಧ್ಯವಿಲ್ಲ. ಪ್ರತಿಯೊಂದು ಜೀವಿಗೂ ಜೀವಿಸಲು ಚೈತನ್ಯಶಕ್ತಿ ನೀಡುವುದೇ ಆಹಾರ. ಹಾಗಾಗಿ ಆಹಾರದ ಮಹತ್ವ ತಿಳಿಸಿ ಅದನ್ನು ವ್ಯರ್ಥ ಮಾಡದಂತೆ ಜಾಗೃತಿ ಮೂಡಿಸಲು ಪ್ರತಿವರ್ಷ ಅ.16ರಂದು ವಿಶ್ವ ಆಹಾರ ದಿನ ಆಚರಿಸಲಾಗುತ್ತಿದೆ.

ಇಂತಹ ಆಹಾರವನ್ನು ವ್ಯರ್ಥವಾಗಿಸದೇ ಅಗತ್ಯವುಳ್ಳವರಿಗೆ ವಿತರಿಸುವ ಸಾರ್ಥಕ ಕಾಯಕದಲ್ಲಿ ಅಕ್ಷಯ ಆಹಾರ ಫೌಂಡೇಷನ್ ನಿರತವಾಗಿದೆ. 'ತಿನ್ನುವ ಹಕ್ಕಿದೆ, ಬಿಸಾಡುವ ಹಕ್ಕಿಲ್ಲ' ಎಂಬ ಧ್ಯೇಯಯೊಂದಿಗೆ ನಗರದಲ್ಲಿ ಕಳೆದ 13 ವರ್ಷಗಳಿಂದ ಅಕ್ಷಯ ಆಹಾರ ಫೌಂಡೇಷನ್ ಹಸಿವು ನೀಗಿಸುವ ಮಹತ್ಕಾರ್ಯ ನಡೆಸುತ್ತಿದೆ. 'ಅಕ್ಷಯ ಆಹಾರ ಜೋಳಿಗೆ' ಹೆಸರಿನಲ್ಲಿ ಮದುವೆ, ಸಭೆ–ಸಮಾರಂಭ, ಹಾಸ್ಟಲ್, ಹೋಟೆಲ್‌ಗಳಲ್ಲಿ ಉಳಿಯುವ ಆಹಾರ ಸಂಗ್ರಹಿಸಿ ಅಗತ್ಯ ಇರುವವರಿಗೆ ವಿತರಿಸುವ ಕೆಲಸ ಮಾಡುತ್ತಿದೆ.

ಆ ಮೂಲಕ ಮಿಕ್ಕ ಆಹಾರ ವ್ಯರ್ಥವಾಗುವುದನ್ನು ತಪ್ಪಿಸಿ ಹಸಿದ ಹೊಟ್ಟೆ ಸೇರಿಸುವ ಸಾರ್ಥಕ ಸೇವೆ ನಡೆಸುತ್ತಿದೆ. ಉಳಿದು ಹಳಸಿ ಅಂತಿಮವಾಗಿ ತ್ಯಾಜ್ಯವಾಗಿ ವ್ಯರ್ಥವಾಗುವುದನ್ನು ತಪ್ಪಿಸುವ ಜೊತೆಗೆ ಅದು ತಾಜಾತನದಿಂದ ಕೂಡಿರುವಾಗಲೇ ಅಗತ್ಯವುಳ್ಳವರಿಗೆ ತಲುಪಿಸುತ್ತಿದೆ ಈ ಫೌಂಡೇಷನ್.

ಫೌಂಡೇಷನ್ ಸಂಸ್ಥಾಪಕ ಡಾ.ಹೆಚ್.ಆರ್.ರಾಜೇಂದ್ರ ಅವರು ಇಂತಹ ಕಳಕಳಿಯ ಕಾಯಕದ ರೂವಾರಿ. ಅಕ್ಷಯ ಆಹಾರ ಜೋಳಿಗೆ ಕಾರ್ಯಕ್ರಮದಡಿ ಮದುವೆ, ಸಮಾವೇಶ, ಹೋಟೆಲ್‌ಗಳು, ಹಾಸ್ಟೆಲ್‌ಗಳು, ಸಂತೋಷಕೂಟಗಳಲ್ಲಿ ಉಳಿದುಕೊಳ್ಳುವ ಹೆಚ್ಚುವರಿ ಆಹಾರ ಸಂಗ್ರಹಿಸಿ ಅಗತ್ಯವಿರುವವರಿಗೆ ವಿತರಣೆ ಮಾಡುವ ಕಾಯಕದಲ್ಲಿ ಫೌಂಡೇಷನ್ ನಿರತವಾಗಿದೆ.



ಉಳಿದ ಆಹಾರ ಸ್ವೀಕರಿಸುತ್ತಿರುವ ಅಕ್ಷಯ ಆಹಾರ ಫೌಂಡೇಶನ್‌ನ ರಾಜೇಂದ್ರ.

ಫೌಂಡೇಷನ್ ಮೈಸೂರು ನಗರ ಮಾತ್ರವಲ್ಲೇ ನಗರದ ಸುತ್ತಮುತ್ತಲೂ ತನ್ನ ಕಾರ್ಯವ್ಯಾಪ್ತಿ ಹೊಂದಿದೆ. ಅಗತ್ಯವುಳ್ಳವರಿಗೆ ಆಹಾರ ಒದಗಿಸಬೇಕೆಂಬ ಸದುದ್ದೇಶದಿಂದ ರಾಜೇಂದ್ರ ಅವರು 2012ರಲ್ಲಿ ಈ ಕಾಯಕ ಕೈಗೆತ್ತಿಕೊಂಡರು. ವರ್ಷದ 365 ದಿನಗಳೂ ಆಹಾರ ಸಂಗ್ರಹಿಸಿ ಅಗತ್ಯವುಳ್ಳವರಿಗೆ ಪೂರೈಸುವ ಕಾಯಕವನ್ನು ನಿಲ್ಲಿಸದೇ ಮುನ್ನಡೆಸಲಾಗುತ್ತಿದೆ. ಕಳೆದ 13 ವರ್ಷಗಳಲ್ಲಿ ಅದೆಷ್ಟೋ ಮಂದಿ ಆಹಾರದ ಅಗತ್ಯವಿರುವವರಿಗೆ ಸ್ಪಂದಿಸಲಾಗಿದೆ. ರಾಜೇಂದ್ರ ಅವರ ಈ ಮಹತ್ಕಾರ್ಯಕ್ಕೆ ಅವರ ಪತ್ನಿ ಎಂ.ಕೆ.ಶ್ವೇತಾ ರಾಜೇಂದ್ರ ಅವರು ಕೈಜೋಡಿಸಿದ್ದಾರೆ.

60ಕ್ಕೂ ಹೆಚ್ಚು ಕೊಳೆಗೇರಿಗಳು, 50ಕ್ಕೂ ಹೆಚ್ಚು ಅನಾಥಾಶ್ರಮಗಳು ಸೇರಿದಂತೆ ಬಸ್ ನಿಲ್ದಾಣ, ರೈಲು ನಿಲ್ದಾಣಗಳಲ್ಲಿ ನಿರ್ಗತಿಕರು, ಆಸ್ಪತ್ರೆಯ ರೋಗಿಗಳು ಹಾಗೂ ಅವರ ಸಹಾಯಕರು–ಸಂಬಂಧಿಕರು, ನಿರಾಶ್ರಿತರು ಹೀಗೆ ಆಹಾರದ ಅಗತ್ಯ ಇರುವವರನ್ನು ಗುರುತಿಸಿ ವಿತರಣೆ ಮಾಡಲಾಗುತ್ತಿದೆ.

ನಗರದ ಯಾವುದೇ ಭಾಗದಲ್ಲಿಯಾದರೂ ಕಾರ್ಯಕ್ರಮ, ಮದುವೆ, ಸಭೆ ಸಮಾರಂಭಗಳಲ್ಲಿ ಆಹಾರ ಪದಾರ್ಥ ಮಿಕ್ಕರೆ ಅದನ್ನು ವ್ಯರ್ಥ ಮಾಡದೇ ನಮ್ಮ ಗಮನಕ್ಕೆ ತರಬಹುದು. ನಾವು ಅದನ್ನು ಅಗತ್ಯವುಳ್ಳವರಿಗೆ ಪೂರೈಕೆ ಮಾಡುತ್ತೇವೆ. ಮೈಸೂರಿನ ಕುವೆಂಪು ನಗರ, ಸಿದ್ಧಾರ್ಥನಗರ, ಜೆಪಿ ನಗರ, ಶ್ರೀರಾಂಪುರ ಮತ್ತು ಕೆಆರ್ ಆಸ್ಪತ್ರೆ ಬಳಿ ನಮ್ಮ ಆಹಾರ ವಿತರಣೆ ಹಾಗೂ ಸಂಗ್ರಹಣಾ ಕೇಂದ್ರಗಳಿವೆ ಎನ್ನುತ್ತಾರೆ ರಾಜೇಂದ್ರ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕೇಂದ್ರ ಸರ್ಕಾರದ ನೌಕರರೂ ಆದ ಹೆಚ್.ಆರ್.ರಾಜೇಂದ್ರ, ಈ ಕಾಯಕಕ್ಕೆ ನಮ್ಮ ಸಿಬ್ಬಂದಿ ಇದ್ದು, ಜೊತೆಗೆ ಸ್ವಯಂ ಸೇವಕರಾಗಿಯೂ ಹಲವರು ಕೈಜೋಡಿಸಿದ್ದಾರೆ. ಸಮಾಜ ಕಾರ್ಯ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಸಹಕಾರ ನೀಡುತ್ತಿದ್ದಾರೆ. ಇದು ಅವರಿಗೆ ಶೈಕ್ಷಣಿಕ ಕಾರ್ಯಕ್ಕೂ ಅನುಕೂಲವಾಗಲಿದೆ. ಮೈಸೂರಿನ ದಾನಿಗಳು ಕೊಡುಗೆಯಾಗಿ ನೀಡಿದ ನಾಲ್ಕು ವಾಹನಗಳು ನಮ್ಮ ಈ ಕಾರ್ಯಕ್ಕೆ ಬಳಕೆಯಾಗುತ್ತಿವೆ. ಆಹಾರ ಉಳಿದಿದ್ದರೆ ನಮಗೆ ಕರೆ ಮಾಡಿದರೆ ಸಾಕು ನಾವು ಸ್ಥಳಕ್ಕೆ ತೆರಳಿ ಸಂಗ್ರಹಿಸಿ ಅಗತ್ಯವಿರುವವರಿಗೆ ತಲುಪಿಸುತ್ತೇವೆ. ಪ್ರತಿನಿತ್ಯ ಆಹಾರ ಬರುತ್ತಲೇ ಇರುತ್ತದೆ. ಕೆಆರ್ ಆಸ್ಪತ್ರೆ ಆವರಣದಲ್ಲಿ ನಾಲ್ಕು ವಿಭಾಗಗಳಲ್ಲಿ ನಿತ್ಯ ಆಹಾರ ವಿತರಣೆ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶದಿಂದ ಸಾವಿರಾರು ರೋಗಿಗಳು ಹಾಗೂ ಅವರ ಸಂಬಂಧಿಕರಿಗೆ ಇಲ್ಲಿ ನಿತ್ಯ ಆಹಾರ ನೀಡಲಾಗುತ್ತಿದೆ. ಮಿಕ್ಕ ಆಹಾರ ಹಳಸಿ ಕಸವಾಗದೇ ಹಸಿದವರ ಹೊಟ್ಟೆ ಸೇರಲಿ ಎಂಬುದು ನಮ್ಮ ಮೂಲಮಂತ್ರ. ಅಂದಾಜು 13 ವರ್ಷಗಳಿಂದ 8.9 ದಶಲಕ್ಷ ಜನರಿಗೆ ಆಹಾರ ವಿತರಣೆ ಮಾಡಲಾಗಿದೆ ಎಂದು ವಿವರಿಸಿದರು. ಇವರ ಈ ಕಳಕಳಿಯ ಕಾರ್ಯಕ್ಕೆ ನೆರವಾಗಲು ಮೊ.ಸಂ. 91489 87375, ದೂ.ಸಂ. 0821–2498275 ಅನ್ನು ಸಂಪರ್ಕಿಸಬಹುದು.



ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಸಮಸ್ಯೆಗಳ ಸಭೆ

ಮೈಸೂರು, ಅ.15– ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಅನಿಲ್ ಚಿಕ್ಕಮಾದು ಅವರ ಅಧ್ಯಕ್ಷತೆಯಲ್ಲಿ ಅ.16 ರಂದು ಬೆಳಿಗ್ಗೆ 11.00 ಗಂಟೆಗೆ ಸಿದ್ದಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹೆಚ್.ಡಿ.ಕೋಟೆ ತಾಲೂಕು ಮತ್ತು ಸರಗೂರು ತಾಲೂಕಿನ ಸಮಸ್ಯೆಗಳು, ಕೆಂಚನಹಳ್ಳಿ ಅರಣ್ಯ ಪ್ರದೇಶದ ಸಮಸ್ಯೆಗಳು ಮತ್ತು ದುರ್ಬಲ ಬುಡಕಟ್ಟು ಗುಂಪುಗಳ ಸಮಸ್ಯೆಗಳ (PVTGs) ಕುರಿತು ಸಭೆ ನಡೆಸಲಾಗುವುದು. ಸಭೆಯಲ್ಲಿ ಸಂಬಂಧಪಟ್ಟ ತಾಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ್ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾವು ಹಿಂದುಳಿದ ಜಾತಿಗೆ ಸೇರಿಲ್ಲ: ಸಮೀಕ್ಷೆಯಲ್ಲಿ ಭಾಗವಹಿಸಲ್ಲ

ಇನ್ಫೋಸಿಸ್ ನಾರಾಯಣಮೂರ್ತಿ, ಸುಧಾಮೂರ್ತಿ ಹಿಂದೇಟು



ಬೆಂಗಳೂರು, ಅ.15– ರಾಜ್ಯ ಸರ್ಕಾರದಿಂದ ನಡೆಸಲಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಬಹುತೇಕ ಮುಕ್ತಾಯ ಹಂತಕ್ಕೆ ತಲುಪಿದಂತಾಗಿದೆ. ಜನಸಾಮಾನ್ಯರು ಸೇರಿದಂತೆ ರಾಜಕೀಯ ನಾಯಕರು ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ. ಸಮೀಕ್ಷೆಯಲ್ಲಿ ಭಾಗವಹಿಸುವುದು ಸಂಪೂರ್ಣವಾಗಿ ಸ್ವಯಂ ಪ್ರೇರಿತವೆಂದು ಆಯೋಗ ಈಗಾಗಲೇ ಸ್ಪಷ್ಟನೆ ನೀಡಿದೆ. ಹೀಗಾಗಿ ಇನ್ಫೋಸಿಸ್ ಮುಖ್ಯಸ್ಥರಾದ ನಾರಾಯಣ ಮೂರ್ತಿ ಹಾಗೂ ರಾಜ್ಯಸಭಾ ಸದಸ್ಯರೂ ಆದ ಅವರ ಪತ್ನಿ ಸುಧಾ ಮೂರ್ತಿ ಅವರು ಸಮೀಕ್ಷೆಯಲ್ಲಿ ಭಾಗವಹಿಸಲು ನಿರಾಕರಿಸಿದ್ದಾರೆ.

ಈ ಕುರಿತಾಗಿ ನಾರಾಯಣ ಮೂರ್ತಿ ದಂಪತಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಪತ್ರ ಬರೆದಿದ್ದು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮೂಲಕ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ನಮ್ಮ ಕೆಲವು ವೈಯಕ್ತಿಕ ಕಾರಣಗಳಿಂದ ಮಾಹಿತಿ ನೀಡಲು ನಿರಾಕರಿಸುತ್ತಿದ್ದೇವೆ. ನಾವು ಹಿಂದುಳಿದ ಯಾವ ಜಾತಿಗೂ ಸೇರುವವರಲ್ಲ. ಆದ್ದರಿಂದ ಈ ಸಮೀಕ್ಷೆಯಿಂದ ಸರ್ಕಾರಕ್ಕೆ ಏನೂ ಉಪಯೋಗವಿಲ್ಲ. ಹಾಗಾಗಿ ನಮ್ಮ ಕುಟುಂಬ ಈ ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಮತ್ತು ಮಾಹಿತಿಯನ್ನು ನೀಡಲು ನಿರಾಕರಿಸಿದ್ದೇವೆ ಎಂದು ಸ್ವಯಂ ದೃಢೀಕರಣ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಂದೇಶಗೆ ಪಿಹೆಚ್.ಡಿ



ಮೈಸೂರು: ಡಾ. ಕೆ. ಕೆಂಪರಾಜು ಅವರ ಮಾರ್ಗದರ್ಶನದಲ್ಲಿ ವಿ.ಡಿ. ಸಂದೇಶ ಅವರು ಬಯೋಕೆಮಿಸ್ಟ್ರಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

















ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಛೇರಿ, ರಾಜೀವನಗರ 3ನೇ ಹಂತ, ಮೈಸೂರು (ಪೂರ್ವ) ಮೈಸೂರು.

ಸಂಖ್ಯೆ : ಪ್ರಾಸಾಅ:ಮೈ:(ಪೂ)/ಪ್ರಕಟಣೆ/2025–26 ದಿನಾಂಕ: 14/10/2025

ಪ್ರಕಟಣೆ

ಈ ಅಂತಿಮ ನೋಟೀಸ್ ಹಾಗೂ ಬಹಿರಂಗ ಹರಾಜು ಪ್ರಕಟಣೆ ಮೂಲಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಮೈಸೂರು ಪೂರ್ವ ಕಛೇರಿಯಲ್ಲಿ ತೆರಿಗೆ ಪಾವತಿಸದೆ ಇರುವ ಹಾಗೂ ಇತರೆ ಪ್ರಕರಣಗಳಿಗೆ ವಶಪಡಿಸಿಕೊಂಡಿರುವ ಕೆಳಕಂಡ ವಾಹನಗಳ ಮಾಲೀಕರಿಗೆ ಹಾಗೂ ಕರಾರುದಾರರಿಗೆ ಸದರಿ ವಾಹನಗಳ ತೆರಿಗೆ ಪಾವತಿಸಿ ಪ್ರಕರಣ ಮುಕ್ತಾಯಗೊಳಿಸಿಕೊಂಡು ವಾಹನ ಬಿಡುಗಡೆಗೊಳಿಸಿಕೊಳ್ಳುವಂತೆ ಅನೇಕ ಭಾರಿ ನೋಟಿಸ್ಸನ್ನು ನೀಡಿದ್ದಾಗ್ಯೂ, ವಾಹನಗಳ ತೆರಿಗೆ ಪಾವತಿಸಿ ಪ್ರಕರಣ ಇತ್ಯಾರ್ಥಗೊಳಿಸಿಕೊಂಡು ವಾಹನ ಬಿಡುಗಡೆಗೊಳಿಸಿಕೊಂಡಿರುವುದಿಲ್ಲ, ಅದ್ದ–ರಿಂದ ಈ ವಾರ್ತಾ ಪತ್ರಿಕೆಯ ಮೂಲಕ ಅಂತಿಮ ಸೂಚನೆಯನ್ನು ವಾಹನ ಮಾಲೀಕರಿಗೆ/ಕಂತು ಕರಾರುದಾರರಿಗೆ ನೀಡುತ್ತಿದ್ದು, ಸದರಿ ವಾಹನಗಳ ತೆರಿಗೆ ಪಾವತಿಸಿ ಪ್ರಕರಣ ಮುಕ್ತಾಯಗೊಳಿಸಿಕೊಂಡು ವಾಹನಗಳನ್ನು ಬಿಡುಗಡೆಗೊಳಿಸಿಕೊಳ್ಳಲು ಸೂಚಿಸ ಲಾಗಿದೆ. ತಪ್ಪಿದಲ್ಲಿ ಸದರಿ ವಾಹನಗಳನ್ನು ವಾರಸುದಾರರು ಇಲ್ಲದ ವಾಹನಗಳೆಂದು ಪರಿಗಣಿಸಿ ಬಹಿರಂಗ ಹರಾಜು ಮೂಲಕ ದಿನಾಂಕ : 29/10/2025 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ನಮೂದಿಸಿರುವ ವಾಹನಗಳನ್ನು ಎಲ್ಲಿದೆಯೋ ಅಲ್ಲಿ ಹೇಗಿದೆಯೋ ಹಾಗೆ ಸದರಿ ಕಛೇರಿಯಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

ವಾಹನಗಳ ವಿವರ

ಕ್ರ ಸಂ	ವಾಹನ ಸಂಖ್ಯೆ	ವಾಹನ ವರ್ಗ	ಮಾದರಿ
1	KA-09/B-5070	MAXI CAB	2011
2	KA-55/5511	MPV/BUS	2014
3	KA-02/A-2445	A/R CAB	1996
4	KA-09/B-1187	A/R CAB	2009
5	KL-10/G-8268	A/R CAB	1998
6	KL-12/6098	A/R CAB	1995
7	KL-11/D-7768	A/R CAB	1996
8	KA-09/A-0318	A/R CAB	2002
9	KA-09/T-5422	TRACTOR & WATER TANKER	2007

ಸಹಿ/- ಪ್ರಾದೇಶಿಕ ಸಾರಿಗೆ ಅಧಿಕಾರಿಗಳು
ಮೈಸೂರು (ಪೂರ್ವ)

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ನಗರ ವಿಭಾಗ (ಜೆ.ಎನ್.ನರ್ಮ್), ಜಲಭವನ, 2ನೇ ಮಹಡಿ ಸರಸ್ವತಿಪುರಂ, ಮೈಸೂರು–570009 ದೂರವಾಣಿ : 0821– 2411463
ಇ–ಮೇಲ್: kwbmysjnee@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಈ ಕಛೇರಿಯಿಂದ, ಮುಖ್ಯ ಅಭಿಯಂತರರು, ಕನನೀಸ ಮತ್ತು ಒ.ಚ. ಮಂಡಳಿ, ಮೈಸೂರು ವಲಯ, ಮೈಸೂರು ವ್ಯಾಪ್ತಿಯಲ್ಲಿರುವ ಕಛೇರಿಗೆ ಅಗತ್ಯವಿರುವ 1 ಸಂಖ್ಯೆ ಡಿಪ್ಲೋಮಾ ಇಂಜಿನಿಯರ್ ಪದವೀಧರ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಸರ್ವಿಸ್ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ರಲ್ಲಿ ಕರೆಯಲಾಗಿದ್ದು, ಟೆಂಡರಿಗಿಟ್ಟ ಮೊತ್ತ, ಶುಲ್ಕ, ಷರತ್ತು, ಇತರೆ ಹೆಚ್ಚಿನ ಮಾಹಿತಿಗೆ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ
ನಗರ ವಿಭಾಗ (ಜೆ.ಎನ್.ನರ್ಮ್),ಮೈಸೂರು